ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 9 ಫೆಬ್ರವರಿ 24-ಮಾರ್ಚ್ 2, 1997 ಬೆಲೆ ರೂ. 2.00

"ಹಣವಂತರಿಂದ ಸಂಪನ್ಮೂಲಗಳನ್ನು ಸಂಗ್ರಹಿಸುವ ಧೈರ್ಯ ತೋರಿಸಿ"

ಕೊರತೆ-ಕೊರತೆಯೆಂದು ಕೊರಗುವ ಸರಕಾರಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ದೇಶೀ-ವಿದೇಶೀ ಸಾಲಕ್ಕೆ ಪಾವತಿ ಮಾಡಬೇಕಾದ ಅಪಾರ ಬಡ್ಡಿಯ ಹೊರೆ, ಪೆಟ್ರೋಲಿಯಂ ಉತ್ಪನ್ನಗಳ ಆಮದಿಗೆ ತೆರಬೇಕಾದ ಹಣ ಹಾಗೂ ಹೆಚ್ಚುತ್ತಿರುವ ರೆವಿನ್ಯೂ ಕೊರತೆ, ಇವೆಲ್ಲಾ ಸೇರಿ ಉಂಟಾಗಿರುವ ಗಂಭೀರ ಸಂಪನ್ಮೂಲ ಕೊರತೆಯನ್ನುಎದುರಿಸಬೇಕಾದ ಸಂಯುಕ್ತರಂಗ ಸರಕಾರ ಇದರಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಮತ್ತು ಐಎಂಎಫ್ ಮತ್ತು ವಿಶ್ವ ಬ್ಯಾಂಕ್‌ನಂತಹ ಅವರ ಸಂಸ್ಥೆಗಳ ಸಲಹೆ ಮತ್ತು ಜಾಡ್ಯೆಯನ್ನೇ ಹೆಚ್ಚು ನಂಬಿದೆಯೋ ಹೊರತು ಹಣಕಾಸು ಸಂಪನ್ಮೂಲ ಸಂಗ್ರಹಿಸುವ ಬಗ್ಗೆ ಯೋಚಿಸ ಬಯಸುತ್ತಿಲ್ಲ. ಆದ್ದರಿಂದ ಸಂಪೂರ್ಣ ಖಾಸಗೀಕರಣದಿಂದ ಹಾಗೂ ಉದಾರೀಕರಣದಿಂದಲೇ ಆರ್ಥಿಕ ಬೆಳವಣಿಗೆ ಸಾಧ್ಯ ಎಂಬ ಐಎಂಎಫ್-ವಿಶ್ವಬ್ಯಾಂಕ್ ತತ್ವಕ್ಕೆ ಈಗಲೂ ಮಾರುಹೋಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಟೀಕಿಸಿದೆ.

ಕಳೆದ ಬಜೆಟ್ಟಿನಲ್ಲಿ ಏನೂ ತೆರಿಗೆ ತೆರದಿದ್ದ ದೊಡ್ಡ ಕಂಪನಿಗಳಿಗೆ ವಿಧಿಸಿದ್ದ ಕನಿಷ್ಠ ಪರ್ಯಾಯ ತೆರಿಗೆ(MAT)ಯನ್ನೂ ಕೂಡ ಕೈಬಿಡುವ ಒತ್ತಡಕ್ಕೆ ಮಣಿಯುವ ಬದಲು ಸರಕಾರ ಕಂಪನಿಗಳ ಒಟ್ಟು ಲಾಭಗಳ ಮೇಲೆ ತೆರಿಗೆ ಸಂಗ್ರಹಿಸಲು ಮುಂದಾಗುವ ಧೈರ್ಯ ತೋರಬೇಕು. ತೆರಿಗೆ ವಸೂಲಿ ಕ್ರಮಗಳನ್ನು ಉತ್ತಮಗೊಳಿಸಿ ಸಾವಿರಾರು ಕೋಟಿ ರೂಗಳನ್ನು ಸಂಗ್ರಹಿಸುವುದು ಸಾಧ್ಯ. ಉದಾಹರಣೆಗೆ ಕೇವಲ ಐಟಿಸಿ ಕಂಪನಿಯೊಂದರಿಂದಲೇ ಸರಕಾರಕ್ಕೆ 800 ಕೋಟಿ ರೂ. ಅಬಕಾರಿ ಸುಂಕ ಬರಬೇಕು. ಕೃಷಿವಲಯದ ಸಿರಿವಂತ ವಿಭಾಗಗಳನ್ನು ತೆರಿಗೆ ಬಲೆಯೊಳಗೆ ತರಬೇಕು. ಸಂಪನ್ಮೂಲ ಸಂಗ್ರಹಿಸುವ ಸರಕಾರದ ಜವಾಬ್ದಾರಿಯನ್ನು ಕೈಬಿಡುವ ಬದಲು ರಾಷ್ಟ್ರೀಕೃತ ಬ್ಯಾಂಕುಗಳು ನೀಡಿದ ಸಾಲಗಳ ಮರುಪಾವತಿ ಮಾಡದೆ ಬಾಕಿ ಇರುವ 47000 ಕೋಟಿರೂಪಾಯಿಗಳ ವಸೂಲಿಗೆ ಅದು ಮುಂದಾಗಬೇಕು. ಈ ಸಾಲ ಬಾಕಿ ಮಾಡಿಕೊಂಡವರಲ್ಲಿ ಬಹುಪಾಲು ದೊಡ್ಡ ಬಂಡವಾಳಶಾಹಿಗಳು ಹಾಗೂ ಪ್ರಭಾವಿ ವ್ಯಕ್ತಿಗಳು. ಅವರಿಂದ ಬಾಕಿವಸೂಲಿಗೆ ಸರಕಾರ ಕ್ರಮ ಕೈಗೊಳ್ಳಬೇಕು. ಅದೇ ವೇಳೆಗೆ ಕಪ್ಪು ಹಣವನ್ನು ದಮನ ಮಾಡಲು, ಬಂಡವಾಳ ವಿದೇಶಕ್ಕೆ ಹಾರಿಹೋಗುವುದನ್ನು ತಡೆಯಲು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಕೇಂದ್ರಸಮಿತಿ ಸಲಹೆಗಳನ್ನು ಮುಂದಿಟ್ಟಿದೆ.

ಈ ಎಲ್ಲಾ ಕ್ರಮಗಳೊಂದಿಗೆ ಅಧಿಕಾರಿಶಾಹಿಯ ಉನ್ನತ ಮಟ್ಟಗಳಲ್ಲಿನ ಅನಗತ್ಯ ಆಡಳಿತ ಖರ್ಚುಗಳನ್ನು ಕಡಿತಮಾಡುವಂತಹ ಶಿಸ್ತನ್ನು ಲಾಗೂಗೊಳಿಸಿದರೆ ಸಾರ್ವಜನಿಕ ಬಂಡವಾಳ ಹೂಡಿಕೆಗೆ, ಸಾಮಾಜಿಕ ವಲಯದಲ್ಲಿ ಖರ್ಚು ಮಾಡಲು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವ್ಯಾಪಕಗೊಳಿಸಲು ಅಗತ್ಯವಾದ ಸಂಪನ್ಮೂಲ ಸಂಗ್ರಹಣೆ ಖಂಡಿತ ಸಾಧ್ಯ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

(ಈ ಬಗ್ಗೆ ವಿವರಗಳಿಗೆ ಪುಟ 4 ರ ಲೇಖನ ನೋಡಿ)

ಮುಂಬರುವ ಕೇಂದ್ರ ಬಜೆಟ್ಟಿನಲ್ಲಿ ಈ ನಿಲುವು ಪ್ರತಿಫಲನಗೊಂಡರೆ ಸಾಲದ ಬಲೆಯಿಂದ ತಪ್ಪಿಸಿಕೊಳ್ಳಲು ಹಾಗೂ ಸಾರ್ವಜನಿಕ ಹೂಡಿಕೆಗೆ ಬೇಕಾದ ಸಂಪನ್ಮೂಲಗಳನ್ನು ಸಂಗ್ರಹಿಸಲು ಸಾಧ್ಯ ಎಂದು ಸಿಪಿಐ(ಎಂ) ಹೇಳಿದೆ.

ಫೆಬ್ರವರಿ 14 ರಿಂದ 18 ರವರೆಗೆ ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ದೇಶದ ಆರ್ಥಿಕ ಪರಿಸ್ಥಿತಿ ಹಾಗೂ ರಾಜಕೀಯ ಬೆಳವಣಿಗೆಗಳ ಬಗ್ಗೆ ಕೂಲಂಕುಷ ಚರ್ಚೆಯ ನಂತರ ಹೊರಡಿಸಿರುವ ಪತ್ರಿಕಾ ಹೇಳಿಕೆಯಲ್ಲಿ ಮುಂಬರುವ ಕೇಂದ್ರ ಬಜೆಟ್ ಕುರಿತಂತೆ ಪರ್ಯಾಯ ಸೂಚನೆಗಳನ್ನು ಮುಂದಿಟ್ಟಿದೆ.

> "ಸಂಯುಕ್ತ ರಂಗ ಸರಕಾರದ ಆದ್ಯತೆಗಳು ತಲೆಕೆಳಗಾದಂತಿದೆ. ಒಂದೆಡೆ ಸರಕಾರ ಎಡಪಕ್ಷಗಳು ಸದಾ ಭಿನ್ನಾಭಿಪ್ರಾಯ ಹೊಂದಿದ್ದ 'ಸಮಾನ ಕನಿಷ್ಠ ಕಾರ್ಯಕ್ರಮ'ದ ಜನವಿರೋಧಿಯಾದ ಅಂಶಗಳನ್ನು ಅನುಷ್ಠಾನಕ್ಕೆ ತರಲು ಕಾತುರವಾಗಿದ್ದಂತಿದೆ. ಇನ್ನೊಂದೆಡೆ ಸಂಕಟಪೀಡಿತ ಜನಗಳಿಗೆ ತುಸು ಪರಿಹಾರ ನೀಡುವ ಅಂಶಗಳನ್ನು ಉಪೇಕ್ಷಿಸಲಾಗುತ್ತಿದೆ" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಕೇಂದ್ರ ಸಮಿತಿಯ ಸಭೆಯ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಸತತ ಬೆಲೆಯೇರಿಕೆ -ಗಹನ ಸಮಸ್ಯೆ

ಜನಗಳಿಂದು ಎದುರಿಸುತ್ತಿರುವ ಅತ್ಯಂತ ಗಂಭೀರ ಸಮಸ್ಯೆಯೆಂದರೆ ಎಲ್ಲಾ ಬೆಲೆಗಳ ಏರಿಕೆ. ಇದು ಇಳಿಯುವ ಲಕ್ಷಣಗಳೇ ಇಲ್ಲ. ಮುಖ್ಯವಾಗಿ ಆಹಾರಧಾನ್ಯಗಳ, ತರಕಾರಿಗಳು, ದ್ವಿದಳ ಧಾನ್ಯಗಳ ಬೆಲೆಗಳು ಸತತವಾಗಿ ಏರುತ್ತಿವೆ. ಉತ್ತರ ಭಾರತದಲ್ಲಿ ಗೋಧಿ, ಹಿಟ್ಟಿನ ಬೆಲೆಯೇರಿಕೆ, ದೇಶದ ಹಲವೆಡೆ ರೇಶನ್ ಮೂಲಕ ಸೀಮೆ ಎಣ್ಣೆ ಸಿಗದಿರುವುದರಿಂದ ಜನಗಳ ಸಂಕಟ ಇನ್ನಷ್ಟು ಹೆಚ್ಚಿದೆ. ರೇಶನ್ ಸಕ್ಕರೆಯ ಬೆಲೆ ಏರಿಸುವ ನಿರ್ಣಯ ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ.

ಈ ಸಂದರ್ಭದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ತುರ್ತಾಗಿ ಬಲಪಡಿಸಬೇಕಾಗಿದೆ. ಬಡತನದ ರೇಖೆಯ ಕೆಳಗಿರುವ ಜನರಿಗೆ ರೇಶನ್ ವ್ಯವಸ್ಥೆಯ ಮೂಲಕ ಆಹಾರ ಧಾನ್ಯಗಳನ್ನು 50% ದರಗಳಲ್ಲಿ ವಿತರಿಸುವ ಜನವರಿ 26 ರಂದು ಪ್ರಕಟಿಸಿದ ಯೋಜನೆಯನ್ನು ತಕ್ಷಣ ಜಾರಿಗೆ ತರುವ ಅವಶ್ಯಕತೆಯಿದೆ. ಈ ಯೋಜನೆಯನ್ನು ಜಾರಿಗೊಳಿಸುವ ಮೊದಲು ಅಕ್ಕಿ, ಗೋಧಿಗಳ ಬೆಲೆಗಳನ್ನು ಏರಿಸುವ ಪ್ರಯತ್ನ ಪ್ರತಿಕೂಲ ಪರಿಣಾಮಬೀರುತ್ತದೆ. ಇದು ಬಡತನದ ರೇಖೆಯ ಮೇಲಿದ್ದರೂ ಬಡವರೇ ಆಗಿರುವ, ಹಣದುಬ್ಬರಕ್ಕೆ ಬಲಿಯಾಗಿರುವ ಕೋಟ್ಯಾಂತರ ಜನರನ್ನು ತಟ್ಟಲಿದೆ. ಆದ್ದರಿಂದ ಸರಕಾರ 'ಸಮಾನ ಕನಿಷ್ಠ ಕಾರ್ಯಕ್ರಮ'ದಲ್ಲಿ ವಚನ ನೀಡಿದಂತೆ ಈ ಯೋಜನೆಯನ್ನು ತಕ್ಷಣ ಜಾರಿಗೆ ತರಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ.

ಐಎಂಎಫ್ ಅಜೆಂಡಾವನ್ನು ಅನುಸರಿಸಲಷ್ಟೇ ಕಾತರ!

ಸಂಯುಕ್ತ ರಂಗ ಸರಕಾರ ಇದುವರೆಗಿನ ಕೆಲಸಗಳ ದಾಖಲೆಗಳನ್ನು ನೋಡಿದರೆ ಅದಕ್ಕೆ ನರಸಿಂಹರಾವ್ ಸರಕಾರದ ನೀತಿಗಳಿಗಿಂತ ಭಿನ್ನವಾದ ಹಾಗೂ ಜನಗಳಿಗೆ ಪರಿಹಾರ ನೀಡಬಹುದಾದ 'ಸಮಾನ ಕನಿಷ್ಠ ಕಾರ್ಯಕ್ರಮ'ದ ಅಂಶಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ಶ್ರದ್ಧೆಯಿಲ್ಲ. ಆದರೆ ಮತ್ತೊಂದೆಡೆ ಬೇಕಾಬಿಟ್ಟಿಯಾಗಿ ವಿದೇಶೀ ಬಂಡವಾಳಕ್ಕೆ ಆರ್ಥಿಕವನ್ನು ತೆರೆಯುವ, ಸಾರ್ವಜನಿಕ ವಲಯದ ಶೇರುಗಳನ್ನು ಮಾರಾಟ ಮಾಡುವ ವಿಮಾ ವಲಯವನ್ನು ಖಾಸಗೀಕರಿಸುವ ಐಎಂಎಫ್-ವಿಶ್ವಬ್ಯಾಂಕ್ ಅಜೆಂಡಾದ

ಪುಟ 4 ನೋಡಿ

ಜನರ ನಾಡಿ ಬಡಿತಕ್ಕೆ ಮಿಡಿಯದೆ ಜನಶಕ್ತಿ(ಲೋಕಶಕ್ತಿ)ಯಾಗುವುದಾದರೂ ಹೇಗೆ?

- ಜಿ.ಎನ್.ನಾಗರಾಜ್

ರಾಮಕೃಷ್ಣ ಹೆಗಡೆಯವರು ಅಂತೂ ಇಂತೂ ಮೀನ ಮೇಷ ಎಣಿಸಿ, ಗುಣಿಸಿ ಮೂರು ನಾಲ್ಕು ಬಾರಿ ಘೋಷಣೆ ಮಾಡಿ ಮತ್ತೆ ಮುಂದೆ ಹಾಕಿ ಕೊನೆಗೂ ಒಂದು ರಾಜಕೀಯ ಪಕ್ಷ ಸ್ಥಾಪನೆ ಮಾಡಿಯೇ ಬಿಟ್ಟಿದ್ದಾರೆ. ಅದರ ಅಧ್ಯಕ್ಷರಾಗಿ ಘೋಷಿತರೂ ಆಗಿದ್ದಾರೆ. ಕೇವಲ ಕರ್ನಾಟಕದಲ್ಲಿ ಮಾತ್ರ ಜನರಿಗೆ ಪರಿಚಿತವಾದ ಒಂದು ಪ್ರಾದೇಶಿಕ ಪಕ್ಷವನ್ನು ರಾಷ್ಟ್ರೀಯ ಪಕ್ಷವೆಂದು ಬಿಂಬಿಸಲು ಇತರ ರಾಷ್ಟ್ರೀಯ ಪಕ್ಷಗಳನ್ನೆಲ್ಲಾ ಪ್ರಾದೇಶಿಕ ಪಕ್ಷಗಳೆಂದು ವ್ಯಂಗ್ಯವಾಡಿದ ಈ ಮಹಾನುಭಾವರು ಆಯಾ ರಾಜ್ಯಗಳಲ್ಲಿ ಲೋಕಶಕ್ತಿಯಿಂದ ತಿರಸ್ಕೃತರಾದ ವ್ಯಕ್ತಿಗಳನ್ನು ವೇದಿಕೆಯ ಮೇಲೆ ನೆರೆಸಿಕೊಂಡಿದ್ದಾರೆ. ಅಸ್ತಿತ್ವದಲ್ಲಿಯೇ ಇಲ್ಲದ ಐದು ನಾಮಮಾತ್ರದ ಪಕ್ಷಗಳನ್ನು ತಮ್ಮ ಪಕ್ಷದೊಡನೆ ವಿಲೀನಗೊಳಿಸಿಕೊಂಡ ನಾಟಕವಾಡಿದ್ದಾರೆ. ಅದೇ ಸಮಯದಲ್ಲಿ ಜಾರ್ಜ್ ಫರ್ನಾಂಡಿಸ್, ಚಂದ್ರಶೇಖರ್ ಮೊದಲಾದ ಅನೇಕರನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸಿ ವಿಫಲವಾಗಿರುವುದು, ಕಾಂಗ್ರೆಸ್ಸಿಗರು ಒಟ್ಟಾಗಬೇಕು ಎಂದು ನೀಡಿದ ಹಲವಾರು ಕರೆಗಳು, ಎಸ್.ನಿಜಲಿಂಗಪ್ಪನವರನ್ನು ಮುಂದಿಟ್ಟುಕೊಂಡು ಮಾಡಿದ ಯತ್ನಕ್ಕೆ ಕಾಂಗ್ರೆಸ್ ಮಣೆ ಹಾಕಲಿಲ್ಲವೆಂಬ ಕಹಿ ಸತ್ಯದ ಬಗ್ಗೆ ಸೊಲ್ಲೇ ಇಲ್ಲ.

ಲೋಕಶಕ್ತಿಯ ರಾಜಕೀಯ

ಅವರ ಸ್ಥಾಪನಾ ಸಮಾವೇಶದ ಇಡೀ ಕಲಾಪಗಳಲ್ಲಿ ಹೆಗಡೆಯವರಿಂದಾಗಲೀ ಅವರ ಅನುಯಾಯಿಗಳಿಂದಾಗಲೀ ಕಾಂಗ್ರೆ ಪಕ್ಷದ ಬಗ್ಗೆ, ದೇಶವನ್ನು ನವಲತ್ತು ವರ್ಷದಿಂದ ಹಾಳುಗೆಡವಿದ ನೀತಿಗಳ ಬಗ್ಗೆ ಇತ್ತೀಚೆಗೆ ನರಸಿಂಹರಾವ್-ಮನಮೋಹನ ಸಿಂಗ್‌ರವರ ದೇಶ ನಾಶಕ ಜಾಗತೀಕರಣದ ಬಗ್ಗೆ ಒಂದೇ ಒಂದು ಮಾತಿಲ್ಲ(ಅವರು ಅಂಗೀಕರಿಸಿದ ಆರ್ಥಿಕ ನೀತಿ ಬಗ್ಗೆ ಮುಂದೆ ನೋಡಿ). ನಿರಂತರವಾಗಿ ಮೂರು ವರ್ಷಗಳಿಂದ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಜನರಿಂದ ಪೆಟ್ಟು ತಿನ್ನುತ್ತಿರುವ ಕಾಂಗ್ರೆ ಬಗ್ಗೆ ಇತ್ತೀಚಿನ ಪಂಜಾಬ್ ಚುನಾವಣೆಗಳ ಬಗ್ಗೆ ಕೂಡಾ ಒಂದೇ ಒಂದು ಚಕಾರವಿಲ್ಲ.

ಹಾಗೆಯೇ ದೇಶದೆಲ್ಲೆಡೆ ಕೋಮು ದಳ್ಳುರಿ ಹಚ್ಚುತ್ತಿರುವ ಬಿಜೆಪಿಯ ಬಗ್ಗೆ ಕೋಮುವಾದೀ ನೀತಿಯ ಬಗ್ಗೆ ಕೂಡಾ ಇವರಿಗೆ ಹೇಳಲು ಏನೂ ಇಲ್ಲ.

ಇತ್ತೀಚಿಗೆ ನೀಡಿದ ಸಂದರ್ಶನಗಳಲ್ಲಿ ಡಿಸೆಂಬರ್ 92ರ ಮಸೀದಿಯ ನಾಶಕ್ಕೆ ಕೂಡ ಅವರು ಬಿಜೆಪಿಯನ್ನು ದೂರುವುದಿಲ್ಲ. ಅದಕ್ಕೆ ಕಾರಣ ವಿ.ಪಿ.ಸಿಂಗ್‌ರವರ ಮಂಡಲ್ ವರದಿಯ ಜಾರಿ ಎನ್ನುತ್ತಾರೆ.

ಪ್ರಬುದ್ಧ(!) ರಾಷ್ಟ್ರೀಯ ದೃಷ್ಟಿಕೋನದ ಅತಿ ಪ್ರಬುದ್ಧ(!) ಚಿಂತನೆ ಹೊಮ್ಮುತ್ತಿರುವ ರೀತಿ ಇದು.

ಹೀಗೆ ಇಂದು ಇಡೀ ದೇಶವೇ ನಿರಾಕರಿಸುತ್ತಿರುವ ಕಾಂಗ್ರೆ ಹಾಗೂ ಬಿಜೆಪಿಗಳ ಬಗ್ಗೆ ಟೀಕೆಯಿಲ್ಲದ ಈ ಪಕ್ಷ ಸಂಯುಕ್ತ ರಂಗದ ಬಗ್ಗೆ, ಅದಕ್ಕೆ ಸರಕಾರ ರಚಿಸುವ ಹಕ್ಕಿಲ್ಲದ ಬಗ್ಗೆ ಅದರ ಭಾಗವಾದ ಎಲ್ಲಾ ಪ್ರಾದೇಶಿಕ ಪಕ್ಷಗಳ ಮೇಲೆ ಹರಿ ಹಾಯುತ್ತಾರೆ. ಪ್ರಾದೇಶಿಕ ಪಕ್ಷಗಳಿಗೆ ರಾಷ್ಟ್ರೀಯ ದೃಷ್ಟಿಕೋನವಿಲ್ಲವೆಂದು ತೆಗಳುತ್ತಾರೆ. ಹಾಗಾದರೆ "ಲೋಕಶಕ್ತಿ" ಯಾರ ಪರ?

ಲೋಕಸಭೆಯ ವಿಸರ್ಜನೆಗೆ ಕರೆ

ಈಗ ಎಲ್ಲೆಡೆ ಕಾಂಗ್ರೆ ಅನುಭವಿಸುತ್ತಿರುವ ಸೋಲಿನ ಹಿನ್ನೆಲೆಯಲ್ಲಿಯೇ ಇವರು ಲೋಕಸಭಾ ವಿಸರ್ಜನೆ ಹಾಗೂ ಮಧ್ಯಂತರ ಚುನಾವಣೆಗೆ ಕರೆ ನೀಡುತ್ತಾರೆ. ಅಂದರೆ ಸಂಯುಕ್ತ ರಂಗ ಅಧಿಕಾರದಲ್ಲಿರಬಾರದು. ಕಾಂಗ್ರೆ ಅಧಿಕಾರಕ್ಕೆ ಬರುವುದಿಲ್ಲ. ಎಂದರೆ ಯಾರು ಅಧಿಕಾರಕ್ಕೆ ಬರಬೇಕು ಎಂದು ಇವರ ಅಭಿಪ್ರಾಯ?

ಇನ್ನೊಂದು ಪ್ರಮುಖ ನಿರ್ಣಯ ನೋಡಿ. ಉತ್ತರಪ್ರದೇಶದಲ್ಲಿ ಪ್ರಜಾಸತ್ತೆಯನ್ನು

ಪುಟ 2 ನೋಡಿ

ಸಮಾಜವಾದೀ ಚೀನಾವನ್ನು ಕಟ್ಟಿದ ಕಾಂ.ಡೆಂಗ್ ಕ್ಸಿಯೋ ಪಿಂಗ್ ಇನ್ನಿಲ್ಲ



ಸಮಾಜವಾದಿ ಚೀನಾದ ಹಿರಿಯ ಮುತ್ಸದ್ದಿ ಡೆಂಗ್ ಕ್ಸಿಯೋಪಿಂಗ್ ಫೆಬ್ರವರಿ 20ರಂದು ನಿಧನರಾಗಿದ್ದಾರೆ. ಅವರ ನಿಧನದ ಬಗ್ಗೆ ಆಳವಾದ ದುಃಖವನ್ನು ವ್ಯಕ್ತಪಡಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅವರು ಚೀನೀ ಕ್ರಾಂತಿಯ ಪ್ರತಿಷ್ಠಿತ ಮುಖಂಡರಲ್ಲೊಬ್ಬರು, ಸಮಾಜವಾದಿ ಚೀನಾವನ್ನು ಕಟ್ಟಿರುವ ಒಬ್ಬ ಮುಂದಾಳು ಹಾಗೂ ಆ ದೇಶದಲ್ಲಿ ಸಾಂಸ್ಕೃತಿಕ ಕ್ರಾಂತಿಯ ನಂತರದ ಅವಧಿಯ ಸುಧಾರಣೆಗಳ ಶಿಲ್ಪಿ ಎಂದು ಶ್ರದ್ಧಾಂಜಲಿ ವ್ಯಕ್ತಪಡಿಸಿದೆ.

"ಕಾಮ್ರೇಡ್ ಡೆಂಗ್ ಕ್ಸಿಯೋ ಪಿಂಗ್ ತನ್ನ ಏಳು ದಶಕಗಳ ರಾಜಕೀಯ ಜೀವನದಲ್ಲಿ ಆಧುನಿಕ ಚೀನಾದ ಇತಿಹಾಸದಾದ್ಯಂತ ಒಂದು ಮಹತ್ವಪೂರ್ಣ ಪಾತ್ರ ವಹಿಸಿದ್ದವರು. ಕ್ರಾಂತಿ-ಪೂರ್ವದ ಚೀನಾದಲ್ಲಿ ಅವರು ಕಮ್ಯುನಿಸ್ಟ್ ಪಕ್ಷದ ಸಂಘಟನೆಯಲ್ಲಿ ತೊಡಗಿ 'ದೀರ್ಘ ಪಯಣ'(ಲಾಂಗ್ ಮಾರ್ಚ್) ಎಂದು ಪ್ರಸಿದ್ಧಿ ಪಡೆದ ಹೋರಾಟದಲ್ಲಿ ಪಾತ್ರ ವಹಿಸಿದರು ಹಾಗೂ ಜನತಾ ವಿಮೋಚನಾ ಸೇನೆಯ ಸೇನಾಧಿಕಾರಿಗಳಲ್ಲಿ ಒಬ್ಬರಾಗಿ ದುಡಿದರು. ಚೀನಾ ಗಣತಂತ್ರದ ಸ್ಥಾಪನೆಯ ನಂತರ ಸಮಾಜವಾದಿ ರಚನೆಯ ಅವಧಿಯಲ್ಲಿ ಚೀನೀ ಇತಿಹಾಸದ ಏಳು-ಬೀಳುಗಳಲ್ಲಿ ಒಂದು ಪ್ರಧಾನ ಪಾತ್ರ ವಹಿಸಿದ ಡೆಂಗ್ ಅವರು ಸಾಂಸ್ಕೃತಿಕ ಕ್ರಾಂತಿಯ ನಂತರದ ಅವಧಿಯಲ್ಲಿ ಚೀನಾದಲ್ಲಿ ನಡೆದ ಸುಧಾರಣೆಗಳ ಶಿಲ್ಪಿ" ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿಕೆ ತಿಳಿಸಿದೆ.

ಮುಂದುವರಿದು ಈ ಹೇಳಿಕೆ ಸಿಪಿಐ(ಎಂ) ಮುಖಂಡತ್ವ ಡೆಂಗ್ ಕ್ಸಿಯೋಪಿಂಗ್‌ರೊಡನೆ ಹೊಂದಿದ್ದ ದೀರ್ಘ ಒಡನಾಟವನ್ನು ನೆನಪಿಸಿಕೊಂಡಿದೆ. ಸಿಪಿಐ(ಎಂ) ಮತ್ತು ಚೀನಾ ಕಮ್ಯುನಿಸ್ಟ್ ಪಕ್ಷದ ನಡುವಿನ ಸಂಬಂಧಗಳು 1983ರಲ್ಲಿ ಡೆಂಗ್‌ರವರ ಮುಖಂಡತ್ವದಲ್ಲಿ ಮತ್ತೆ ಬೆಸೆಯಲಟ್ಟವು.

"ಈ ಅಗಲಿದ ಮುಖಂಡನಿಗೆ ಸಿಪಿಐ(ಎಂ) ಶ್ರದ್ಧಾಂಜಲಿ ಅರ್ಪಿಸುತ್ತಾ ಕೆಂಬಾವುಟವನ್ನು ಬಗ್ಗಿಸಿ ನಮಿಸುತ್ತದೆ. ಚೀನಾ ಜನತಾ ಗಣತಂತ್ರದ ಮುಖಂಡತ್ವಕ್ಕೆ, ಸದಸ್ಯರಿಗೆ ಹಾಗೂ ಚೀನೀ ಜನತೆಗೆ ತನ್ನ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ. ಚೀನಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಹಾಗೂ ಆ ಪಕ್ಷದ ಎಲ್ಲಾ ಸದಸ್ಯರಿಗೆ ತನ್ನ ಸಂತಾಪ ವ್ಯಕ್ತಪಡಿಸುತ್ತಾ ಈ ಸುಪ್ರಸಿದ್ಧ ಕಮ್ಯುನಿಸ್ಟ್ ಮುಂದಾಳುವಿನ ಅಗಲಿಕೆಯ ದುಃಖವನ್ನು ಸಿಪಿಐ(ಎಂ) ಹಂಚಿಕೊಳ್ಳುತ್ತದೆ" ಎಂದು ಪೊಲಿಟ್‌ಬ್ಯೂರೋ ಹೇಳಿಕೆ ತಿಳಿಸಿದೆ.

ಕಲ್ಲಿದ್ದಲು ಉದ್ದಿಮೆ ಮತ್ತೆ ಖಾಸಗೀ ಲೂಟಿಗೆ?

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡನೆ

ಕಲ್ಲಿದ್ದಲು ಗಣಿಗಾರಿಕೆಯನ್ನು ಖಾಸಗಿಯವರಿಗೆ ತೆರಯಲು 'ಡಿ'ಗ್ರೇಡಿನ ನಾನ್ ಕೋಕಿಂಗ್ ಕಲ್ಲಿದ್ದಲು, ಗಟ್ಟಿ ಕೋಕ್ ಮತ್ತು ಮೃದು ಕೋಕ್‌ನ ಬೆಲೆಗಳ ಮೇಲಿನ ಹತೋಟಿಯನ್ನು ತಕ್ಷಣದಿಂದಲೇ ತೆಗೆದು ಹಾಕಲು ಕೇಂದ್ರ ಸಚಿವ ಸಂಪುಟ ನಿರ್ಧರಿಸಿದೆ ಎಂದು ವರದಿಯಾಗಿದೆ. ಇದನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಇದು ಇಡೀ ಕಲ್ಲಿದ್ದಲು ಉದ್ದಿಮೆಯನ್ನು ಖಾಸಗೀಕರಿಸುವತ್ತ ಮೊದಲ ಹೆಜ್ಜೆ ಎಂದಿದೆ.

ಖಾಸಗಿ ವಲಯ ಕಲ್ಲಿದ್ದಲನ್ನು ಅತ್ಯಂತ ಅವೈಜ್ಞಾನಿಕ ರೀತಿಯಲ್ಲಿ ಹೊರ ತೆಗೆಯುತ್ತಿದ್ದು, ದೇಶದ ಖನಿಜ ಸಂಪತನ್ನು ಸೂರೆ ಹೊಡೆಯುತ್ತಿತ್ತು. ಇದರಿಂದ ದೊಡ್ಡ ಅಪಘಾತಗಳು ನಡೆದು ಕಾರ್ಮಿಕರ ಸುರಕ್ಷತೆಗೆ ಹಾಗೂ ಪರಿಸರಕ್ಕೆ ಅಪಾಯ ತರುತ್ತಿತ್ತು ಎಂಬ ಹಿನ್ನೆಲೆಯಲ್ಲಿ ಕಲ್ಲಿದ್ದಲು ಉದ್ದಿಮೆಯನ್ನು 1973 ರಲ್ಲಿ ರಾಷ್ಟ್ರೀಕರಿಸಲಾಯಿತು ಎಂಬುದನ್ನು ನೆನಪಿಸಿರುವ ಸಿಪಿಐ(ಎಂ) ಕೇಂದ್ರ ಸಂಪುಟ ಈ ನಿರ್ಣಯ ಮತ್ತೆ ಕಲ್ಲಿದ್ದಲು ಉದ್ದಿಮೆಯನ್ನು 1973 ರ ಆ ಅರಾಜಕ ಸ್ಥಿತಿಗೆ ಒಯ್ದು ಕಲ್ಲಿದ್ದಲು ಬೆಲೆ ಗಳನ್ನು ಹೆಚ್ಚಿಸಲಿದೆ ಎಂದು ಅಭಿಪ್ರಾಯ ಪಟ್ಟಿತು.

ಕಲ್ಲಿದ್ದಲು ಶಕ್ತಿಯ ಒಂದು ಪ್ರಮುಖ ಮೂಲ. ಆದ್ದರಿಂದ ಇದರ ಬೆಲೆಯೇರಿಕೆ ಆರ್ಥಿಕದ ಎಲ್ಲಾ ವಲಯಗಳನ್ನು ತಟ್ಟುತ್ತದೆ. ಜನಗಳ ಹಿತಾಸಕ್ತಿಗಳನ್ನು, ಉದ್ದಿಮೆಯ ಕಾರ್ಮಿಕರನ್ನು ಇದು ತಟ್ಟುತ್ತದೆ. ಆದ್ದರಿಂದ ಈ ಪ್ರತಿಗಾಮಿ ಕ್ರಮವನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಪಡಿಸಿದೆ.

ಗೋಧಿ ಬೆಲೆ ಏರಿಕೆ

ಸಿಪಿಐ(ಎಂ) ಟೀಕೆ

ಭಾರತ ಆಹಾರ ನಿಗಮ ಗೋಧಿಯ ಬಹಿರಂಗ ಮಾರುಕಟ್ಟೆ ಮಾರಾಟದ ಬೆಲೆಯನ್ನು ಟನ್‌ಗೆ 2000 ಕ್ಕೇರಿಸಿದ್ದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಟೀಕಿಸಿದೆ. ಇದರಿಂದ ಎಲ್ಲಾ ಕಡೆ ಗೋಧಿಯ ಬೆಲೆ ಹೆಚ್ಚಿ ಬಡವರನ್ನು ಇದು ಬಹಳ ಹೆಚ್ಚಾಗಿ ತಟ್ಟುತ್ತದೆ ಎಂದು ಅದು ಅಭಿಪ್ರಾಯ ಪಟ್ಟಿದೆ.

ಕೇಂದ್ರ ಸರಕಾರ ಫೆಬ್ರವರಿ ಮೊದಲ ವಾರದಲ್ಲಿ ಈ ಹೆಚ್ಚಳವನ್ನು ಪ್ರಕಟಿಸಿದೆ. ಇದನ್ನು ಖಾಸಗಿ ವ್ಯಾಪಾರಿಗಳಿಗೆ ಮಾರಲಾಗುತ್ತಿದೆ. "ಇದು ಮಾರುಕಟ್ಟೆಯಲ್ಲಿ ಗೋಧಿ ಬೆಲೆ ಹೆಚ್ಚಿಸಿ ನಂತರ ರೇಶನ್ ಮೂಲಕ ವಿತರಿಸುವ ಗೋಧಿಯ ಬೆಲೆಯನ್ನೂ ಹೆಚ್ಚಿಸುವ ಕ್ರಮಕ್ಕೆ ಕೈ ಹಾಕುವಂತೆ ಮಾಡುತ್ತದೆ. ಸರಕಾರ ಇದಕ್ಕೆ ಕೈ ಹಾಕಬಾರದು. ಏಕೆಂದರೆ ಆಹಾರ ಧಾನ್ಯಗಳ ಬೆಲೆಯೇರಿಕೆ ಅತ್ಯಂತ ಹೆಚ್ಚು ತಟ್ಟುವುದು ಬಡ ಜನರನ್ನು. ಅವರಿಗೆ ಇದರಿಂದ ರಕ್ಷಣೆ ಕೊಟ್ಟು ಅಗ್ಗ ದರದಲ್ಲಿ ಆಹಾರ ಒದಗಿಸುವಷ್ಟು ವ್ಯಾಪಕವಾದ ಸಾರ್ವಜನಿಕ ವಿತರಣಾ ವ್ಯವಸ್ಥೆ ದೇಶದಲ್ಲಿಲ್ಲ" ಎಂದು ಸಿಪಿಐ(ಎಂ) ಹೇಳಿದೆ.

ಈ ಸಂದರ್ಭದಲ್ಲಿ ರೇಶನ್ ವ್ಯವಸ್ಥೆಯಲ್ಲಿ ಆಹಾರ ಧಾನ್ಯಗಳನ್ನು ಬಡತನದ ರೇಖೆಯ ಕೆಳಗಿರುವವರಿಗೆ ಅರ್ಧ ದರದಲ್ಲಿ ನೀಡುವ ಯೋಜನೆಯನ್ನು ಮುಂದೂಡುವ ಸರಕಾರದ ಪ್ರಯತ್ನವನ್ನೂ ಪೊಲಿಟ್ ಬ್ಯೂರೋ ಟೀಕಿಸಿದೆ. ಇದು ಜನವರಿ 26 ರಿಂದ ಜಾರಿಗೆ ಬರಬೇಕಿತ್ತು. ಅದನ್ನು ಜೂನ್ ವರೆಗೆ ಮುಂದೂಡುವ ಯೋಚನೆ ಸರಕಾರದ್ದು. ಈ ಬಗ್ಗೆ ಪ್ರತಿಕ್ರಿಯಿಸುತ್ತಾ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ "ಇದು ಈಗಾಗಲೇ ವಿಳಂಬವಾಗಿದೆ. ಅದನ್ನು ಮತ್ತಷ್ಟು ಮುಂದೂಡಲು ಕಾರಣಗಳೇ ಇಲ್ಲ, ಕೇಂದ್ರ ಅದನ್ನು ಜಾರಿಗೆ ತರಲೇಬೇಕು. ಕೆಲವು ರಾಜ್ಯಗಳಿಗೆ ಹೆಚ್ಚು ಸಮಯ ಬೇಕಾದರೆ ಅದು ಅವರ ಜವಾಬ್ದಾರಿ" ಎಂದಿದ್ದಾರೆ.

(ಐಎನ್‌ಎನ್)

...........ಲೋಕಶಕ್ತಿ ಯಾಗುವುದಾದರೂ ಹೇಗೆ?

ಪುಟ ಒಂದರಿಂದ

ತುಳಿಯಲಾಗಿದೆ. ತಕ್ಷಣವೇ ಅಲ್ಲಿ ಸರಕಾರ ರಚನೆಗೆ ಅವಕಾಶ ನೀಡಬೇಕು, ಉತ್ತರಪ್ರದೇಶದ ಈಗಿನ ರಾಜ್ಯಪಾಲ ರೊಮೇಶ್ ಭಂಡಾರಿಯವರನ್ನು(ಅವರು ಕಾಂಗ್ರೆಸ್‌ನ ನಾಯಕ) ಹಿಂದಕ್ಕೆ ಕರೆಸಬೇಕು ಎನ್ನುತ್ತಾರೆ. ಹಾಗಾದರೆ ಅಲ್ಲಿ ಯಾರು ಸರಕಾರ ರಚಿಸಬೇಕು?

ತಮ್ಮ ಮನದೊಳಗೆ ಮುಚ್ಚಿಟ್ಟುಕೊಂಡಿರುವ. ಅವರ ನಿಜ ಅಭಿಪ್ರಾಯವನ್ನು ಬಹಿರಂಗಗೊಳಿಸುವ ಧೈರ್ಯ ಯಾಕಿಲ್ಲ? ಬಿಜೆಪಿ ಉತ್ತರಪ್ರದೇಶದಲ್ಲಿ ಅಧಿಕಾರಕ್ಕೆ ಬಂದು ಪಕ್ಷಾಂತರದ ಮೂಲಕ ಆಳಬೇಕು. ಅಲ್ಲಿ ಬಿಜೆಪಿ ರಾಜ್ಯ ಸರಕಾರದ ಅಡಿಯಲ್ಲಿ ಲೋಕಸಭಾ ಚುನಾವಣೆ ನಡೆಯಬೇಕು. ಅದರಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಂತಾಗಬೇಕು. ಇದೇ ತಮ್ಮ ಒಳ ಉದ್ದೇಶವೆಂದು ಇವರು ಸಾರಲಾರರು.

ಏಕೆಂದರೆ ಈಗ ಇವರ ಜೊತೆಯಿರುವ ನಾಲ್ಕು ಜನವೂ ಇವರನ್ನು ಕೈ ಬಿಟ್ಟಾರು ಎಂದೇ? ಅವರ ಹಿಂದಿರುವ ಜನ ಸಮುದಾಯ ಛೀ! ಥೂ!! ಎಂದಾರು ಎಂಬ ಭಯ.

ಒಟ್ಟಿನಲ್ಲಿ ಜಾತ್ಯಾತೀತ ಸಂಯುಕ್ತ ರಂಗಕ್ಕೆ ಹಿನ್ನಡೆಯಾಗಬೇಕು. ಕೋಮುವಾದಿ ಶಕ್ತಿಗಳಿಗೆ ಜಯವಾಗಬೇಕು. ಹಾಗಾದರೆ ಭ್ರಷ್ಟಾಚಾರ, ಹಣ ಶಕ್ತಿ, ರಾಜಶಕ್ತಿ ಎಂದೆಲ್ಲಾ ಮಾತನಾಡಿದವರು ಕಾಂಗ್ರೆಸ್‌ನ ಹವಾಲಾ, ಬೋಫೋರ್ಸ್, ಟೆಲಿಕಾಂ ಹಗರಣ, ಜೆಎಂಎಂ ಲಂಚದ ಪ್ರಕರಣಗಳ ಬಗ್ಗೆ ನಿರರ್ಗಳವಾಗಿ ಏಕೆ ಮಾತಾಡಲಿಲ್ಲ?

ಮುಂದೆ ಚುನಾವಣೆಯ ಸಂದರ್ಭದಲ್ಲಿ ಮತ್ತು ನಂತರ ಕಾಂಗ್ರೆಸ್ ಜೊತೆಗೆ ಕೂಡಬೇಕಾಗಿ ಬಂದರೆ! ಅದಕ್ಕೆ ಹಿತ್ತಿಲ ಬಾಗಿಲನ್ನು ತೆರೆದಿಡಬೇಕಲ್ಲ.

ಇವರು ಯಾರ ವಾಣಿ?

ಹೀಗೆ ಬಿಜೆಪಿಗೆ ಅಲ್ಲದಿದ್ದರೆ ಕಾಂಗ್ರೆಗೆ ನೆರವಾಗಿ ಬಿಜೆಪಿ ಹಾಗೂ ಕಾಂಗ್ರೆ ವಿರೋಧಿ ಶಕ್ತಿಗಳ ನಾಶಕ್ಕಾಗಿ ಪಣ ತೊಟ್ಟ ಇವರು ಯಾರ ವಾಣಿ? ಪ್ರಾದೇಶಿಕ ಪಕ್ಷಗಳನ್ನು ತೆಗಳಿ ರಾಷ್ಟ್ರೀಯ ದೃಷ್ಟಿಕೋನದ ಬಗ್ಗೆ ಮಾತನಾಡುವುದು ಯಾವ ರೀತಿಯ ರಾಷ್ಟ್ರೀಯತೆ? ಭಾರತದ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಅವರ ಜೊತೆಗೂಡಿ ಸಾಮ್ರಾಜ್ಯಶಾಹಿಗಳಿಗೆ ಪ್ರಾದೇಶಿಕ ಪಕ್ಷಗಳ ಬಗ್ಗೆ ಅದರಲ್ಲಿಯೂ ಎಡಪಕ್ಷಗಳೂ ಭಾಗವಾದ ಸಂಯುಕ್ತ ರಂಗದ ಬಗ್ಗೆ ಇರುವ ಭಯದ ವಾಣಿ ಇದು.

ಹೀಗಾಗಿ ಅವರು ಕೋಮುವಾದದ ಬಗ್ಗೆ, ಗಾಂಧೀ ಆರ್ಥಿಕ ನೀತಿಯ ಬಗ್ಗೆ, ಸ್ವಾವಲಂಬನೆಯ ಬಗ್ಗೆ ನಿರ್ಣಯ ಅಂಗೀಕರಿಸುವುದು ಕೇವಲ ತುಟಿಯಿಂದ ಹೊರಗಿನ ಮಾತು. ಜನರ ಕಣ್ಣಿಗೆ ಮಣ್ಣೆರಚುವ ಮಾತು.

ಇದಕ್ಕೆ ಮತ್ತೊಂದು ಸ್ಪಷ್ಟ ಉದಾಹರಣೆಯೆಂದರೆ ಈಗ ಇಡೀ ದೇಶದ ಜನ ಅನುಭವಿಸುತ್ತಿರುವ ಆಹಾರ ಧಾನ್ಯಗಳ ಬೆಲೆ ಏರಿಕೆಯ ಬಗ್ಗೆ, ಪೆಟ್ರೋಲ್ ಬೆಲೆ ಏರಿಕೆಯ ಬಗ್ಗೆ, ವಿದ್ಯುತ್ ಕೊರತೆಯ ಬಗ್ಗೆ, ಎನ್ರಾನ್ ಕೊಜೆಟ್ರಿನ್‌ಗಳ ಬಗ್ಗೆ ಚಕಾರವಿಲ್ಲ. ಜನರ ಯಾವುದೇ ಸಮಸ್ಯೆಗಳ ಬಗ್ಗೆ ಮಾತನಾಡದೆ ಭ್ರಷ್ಟಾಚಾರದ ಬಗ್ಗೆ ನಿರ್ದಿಷ್ಟವಾಗಿ ಮಾತನಾಡದ ಕೇವಲ ಗಾಳಿಯಲ್ಲಿ ಗೋಪುರ ಕಟ್ಟುವಂತೆ ಮಾತನಾಡಿದರ ಜನರನ್ನು ತಮ್ಮ ಹಿಂದೆ ಅಣಿನೆರೆಸಲು ಸಾಧ್ಯವೇ?

ಜನರ ನಾಡಿ ಬಡಿತಕ್ಕೆ ಮಿಡಿಯದೆ ಜನಶಕ್ತಿ(ಲೋಕಶಕ್ತಿ)ಯಾಗುವುದಾದರೂ ಹೇಗೆ?

ರಾಮಕೃಷ್ಣ ಹೆಗಡೆ ಮತ್ತು ಕರ್ನಾಟಕ

1983ರ ಜನವರಿ. ಆಗ ತಾನೆ ರಾಜ್ಯದ ವಿಧಾನಸಭಾ ಚುನಾವಣೆಗಳು ಮುಗಿದಿವೆ. ಕಾಂಗ್ರೆ ಮೊದಲ ಬಾರಿಗೆ ರಾಜ್ಯದಲ್ಲಿ ಸೋಲನ್ನಪ್ಪಿದೆ. ಜನತಾಪಕ್ಷ-ಕ್ರಾಂತಿರಂಗ-ಸಿಪಿಐ, ಸಿಪಿಐ(ಎಂ)-ಗಳ ರಂಗ ಪೂರ್ಣ ಬಹುಮತ ಪಡೆಯದಿದ್ದರೂ ಅಧಿಕಾರ ಸ್ವೀಕರಿಸುವುದಕ್ಕೆ ಹತ್ತಿರ ಬಂದಿದೆ. ಕರ್ನಾಟಕದಲ್ಲಿ ಎಲ್ಲಡೆ ಜನರಿಗೆ ಉತ್ಸಾಹವೋ ಉತ್ಸಾಹ. ಸಾವಿರಾರು ಜನ ಜನತಾಪಕ್ಷದ ಕಚೇರಿಗೆ ಲಗ್ಗೆಯಿಟ್ಟರು. ಜನತಾಪಕ್ಷದ-ಕ್ರಾಂತಿರಂಗದ ಅನೇಕ ಶಾಸಕರಿಗೆ ಪಕ್ಷಾಂತರ ಮಾಡೀರೀ ಜೋಕೆ ಎಂದು ಎಚ್ಚರಿಸಿದರು.

ಇದೇ ಕರ್ನಾಟಕದಲ್ಲಿ ತಮ್ಮ ದುರಾಡಳಿತದಿಂದ ಕಾರ್ಮಿಕರು, ರೈತರ ಮೇಲೆ ಗುಂಡು ಹಾರಿಸಿ ನೂರಿಪ್ಪತ್ತಕ್ಕೂ ಹೆಚ್ಚು ಜನರನ್ನು ಕೊಂದಿದ್ದ ಗುಂಡೂರಾವ್ ಸರಕಾರದ ಬಗೆಗೆ ಜನಕ್ಕಿದ್ದ ಸಿಟ್ಟು ಕಾಂಗ್ರೆ ವಿರೋಧಿ ರಂಗದ ಬಗ್ಗೆ ಪ್ರೀತಿಯಾಗಿ ತಿರುಗಿತ್ತು. ದಟ್ಟವಾಗಿದ್ದ ಈ ಕಾಂಗ್ರೆ ವಿರೋಧಿ ಭಾವನೆ ಕಾಂಗ್ರೆ ವಿರೋಧಿ ರಂಗದ ನಾಯಕರಾಗಿ ಆದರ ಕೇಂದ್ರ ಬಿಂದುವಾಗಿದ್ದ ರಾಮಕೃಷ್ಣ ಹೆಗ್ಗಡೆಯವರಿಗೆ ಸುತ್ತಿಕೊಂಡಿತು. ಜೊತೆಗೆ 1983-85ರ ನಡುವೆ ಅಲ್ಪಮತದ ಸರಕಾರವಾಗಿದ್ದಾಗ ಜನತೆಗೆ ಅಂಜಿ ನಡೆದದ್ದು, ಅವರ ಕಷ್ಟಗಳಲ್ಲಿ ಕೆಲವಕ್ಕಾದರೂ ಪರಿಹಾರ ಕೊಡಬಯಸಿದ್ದು ರಾಮಕೃಷ್ಣ ಹೆಗಡೆಯವರ ಜನಾನುರಾಗವಾಯಿತು.

ರಾಜ್ಯದಲ್ಲಿ ಕಾಂಗ್ರೆ ವಿರೋಧಿ ಭಾವನೆ ಸ್ಪಷ್ಟವಾಗಲು, ಆಳವಾಗಲು, ಹಾಗೂ ರಾಜಕೀಯವಾಗಿ ಅಭಿವ್ಯಕ್ತವಾಗಲು ದುಡಿದದ್ದು ಸಿಪಿಐ(ಎಂ), ಸಿಪಿಐ ಹಾಗೂ ದೇವರಾಜು ಅರಸರ ನೇತೃತ್ವದ ಕ್ರಾಂತಿರಂಗ. ನರಗುಂದ ರೈತ ಚಳುವಳಿ, ಬೆಂಗಳೂರಿನ ಸಾರ್ವಜನಿಕ ಉದ್ಯಮಗಳ ಕಾರ್ಮಿಕರ ಹೋರಾಟಗಳಲ್ಲಿ ಭಾಗಿಯಾಗದೆ ದೂರ ಉಳಿದಿದ್ದ ಜನತಾಪಕ್ಷ ಅದರ ಲಾಭ ಪಡೆಯಿತು.

ಹಾಗಾದರೆ ರಾಮಕೃಷ್ಣ ಹೆಗಡೆಯವರು ಜನಾನುರಾಗಿಯಾಗಿದ್ದರೆ ಕಾಂಗ್ರೆ ವಿರೋಧಿ ಭಾವನೆಯ ವಾಹಕರಾಗಿ ಜನರ ಸಮಸ್ಯೆಗಳ ಬಗ್ಗೆ ಗಮನ ಹರಿಸುವವರಾಗಿ ಮಾತ್ರ. ಇದನ್ನರಿಯದೆ ತನ್ನ ಜನಪ್ರಿಯತೆ ತನ್ನ ವೈಯಕ್ತಿಕ ಸಾಧನೆ-ಸಂಪತ್ತು ಎಂದು ಹೆಗಡೆಯವರು, ಅವರ ಸುತ್ತಲಿನವರು ಭಾವಿಸಿದ್ದಾರೆ.

ಇದು ಅವರ ದುರಂತವೇ ಸರಿ. ಅವರದು ಮಾತ್ರವಲ್ಲ. ತಾವು ಯಾವ ಸಾಮಾಜಿಕ-ರಾಜಕೀಯ ಪ್ರಕ್ರಿಯೆಯ ಭಾಗವಾಗಿದ್ದೇವೆ ಎಂಬುದನ್ನರಿತುಕೊಳ್ಳದೆ ತಮ್ಮ ವ್ಯಕ್ತಿ ಪ್ರತಿಷ್ಠೆಯೇ ಹೆಚ್ಚು ಎಂದು ಭಾವಿಸುವ ಎಲ್ಲಾ ಬಂಡವಾಳಶಾಹಿ ರಾಜಕಾರಣದ ದುರಂತವೂ ಹೌದು.

ಯಾವ ಕಾರಣಕ್ಕೆ ಹೆಗಡೆಯವರು ಜನಪ್ರಿಯರಾದರೋ ಆ ಕಾರಣವನ್ನು ಕೈ ಬಿಟ್ಟರೆ ಜನಪ್ರಿಯತೆಯೂ ಅವರನ್ನು ಕೈ ಬಿಡುತ್ತದೆ ಎಂದು ಅವರು ನೆನಪಿನಲ್ಲಿಡಬೇಕು.

ಜನ ಸಮುದಾಯ ಚರಿತ್ರೆಯನ್ನು ಸೃಷ್ಟಿಸುತ್ತದೆಯೇ ಹೊರತು ವ್ಯಕ್ತಿಯಲ್ಲ. ಚರಿತ್ರೆಯಲ್ಲಿ ವ್ಯಕ್ತಿಗಳಿಗೆ ಪಾತ್ರವಿದೆ. ಅದು ವ್ಯಕ್ತಿ ಸಾಮಾಜಿಕ ಪ್ರಕ್ರಿಯೆಯ ಸಮರ್ಥ ವಾಹಕನಾಗುವ ಪ್ರಬುದ್ಧತೆ ತೋರುವುದರಲ್ಲಿ, ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಆ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸುವುದರಲ್ಲಿ.

ಇದು ಮಾರ್ಕ್ಸ್‌ವಾದದ, ಚಾರಿತ್ರಿಕ ಭೌತವಾದದ ಮೂಲಭೂತ ತಿಳುವಳಿಕೆ. ಹೆಗಡೆಯವರ ವಿಷಯದಲ್ಲಿಯೂ ಇದು ಹಿಂದೆ ನಿಜವಾಗಿದೆ, ಮುಂದೆಯೂ ನಿಜವಾಗುತ್ತದೆ.

ಸಾರ್ವಜನಿಕ ವಲಯ ಕುರಿತ ಯೋಜನಾ ಆಯೋಗದ ತಂಡ

ಕಾರ್ಮಿಕ ಪ್ರತಿನಿಧಿಗಳಿಗೆ ಅವಕಾಶವಿಲ್ಲವೇಕೆ?

ಸಿಐಟಿಯು ಪ್ರಶ್ನೆ

ಯೋಜನಾ ಆಯೋಗ ಇತ್ತೀಚೆಗೆ ಸಾರ್ವಜನಿಕ ವಲಯದ ಉದ್ದಿಮೆ ಗಳನ್ನು ಕುರಿತಂತೆ ಒಂದು ಕಾರ್ಯತಂಡ ವನ್ನು ರಚಿಸಿದೆ. ಅದರಲ್ಲಿ ಸಾರ್ವಜನಿಕ ವಲಯದ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳನ್ನು ಕೂಡಾ ಸೇರಿಸಬೇಕು ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ॥ ಎಂ.ಕೆ.ಪಂಧೆ ಆಗ್ರಹಪಡಿಸಿದ್ದಾರೆ.

ಒಂಭತ್ತನೇ ಪಂಚವಾರ್ಷಿಕ ಯೋಜನೆಯ ಈ ಕಾರ್ಯತಂಡವು ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಕಾರ್ಯಾಲಯದ ನೇತೃತ್ವದಲ್ಲಿದ್ದು ಕೇಂದ್ರ ಸರಕಾರದ ಖರ್ಚು ಇಲಾಖೆಯ ಕಾರ್ಯದರ್ಶಿ ಹಾಗೂ ಮಹಾರಾಷ್ಟ್ರ, ಅಸ್ಸಾಂ, ಹರ್ಯಾಣ, ಕರ್ನಾಟಕಗಳ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ಗಳು ಸದಸ್ಯರಾಗಿದ್ದಾರೆ. ಅಲ್ಲದೆ ಓಎನ್‌ಟಿಸಿ, ಐಪಿಸಿಎಲ್, ಉಕ್ಕು ಪ್ರಾಧಿಕಾರ, ಸಾರ್ವಜನಿಕ ವಲಯದ ಉದ್ದಿಮೆಗಳ ಸ್ಥಾಯೀ ಸಮಿತಿ ಮತ್ತಿತರ ಸಂಸ್ಥೆಗಳ ಮ್ಯಾನೇಜ್‌ಮೆಂಟ್ ಡೈರಕ್ಟರುಗಳು, ಅಧ್ಯಕ್ಷರುಗಳು ತಂಡದ ಇತರ ಸದಸ್ಯರುಗಳು. ಆದರೆ ಸಾರ್ವಜನಿಕ ವಲಯದ ಉದ್ದಿಮೆ ಯಲ್ಲಿರುವ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಮಾತ್ರ ಇಲ್ಲ. ಡಾ॥ ಪಂಧೆ ಯೋಜನಾ ಆಯೋಗದ ಉಪಾಧ್ಯಕ್ಷ ಮಧು ದಂಡವತೆ ಅವರಿಗೆ ಈ ಬಗ್ಗೆ ಒಂದು ಪತ್ರ ಬರೆದು ಆಶ್ಚರ್ಯ ವ್ಯಕ್ತಪಡಿಸಿ ದ್ದಾರೆ. ಇದನ್ನು ಸರಿಪಡಿಸಬೇಕು ಎನ್ನುತ್ತಾ ಅವರು "ಇದುವರೆಗೆ ಇಂತಹ ತಂಡಗಳಲ್ಲಿ/ವೇದಿಕೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆ ಬಗ್ಗೆ ಸರಕಾರ ತಳೆದಿದ್ದ ನಿಲುವಿಗೆ ಇದು ವ್ಯತಿರಿಕ್ತವಾಗಿದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ಈ ಬಗ್ಗೆ ಮತ್ತೆ ಪರಿಶೀಲಿಸಿ ಇಂತಹ ಮಹತ್ವಪೂರ್ಣ ತಂಡದಲ್ಲಿ ಕಾರ್ಮಿಕರ ಭಾಗವಹಿಸುವಿಕೆಯಂತಹ ಪ್ರಶ್ನೆಯನ್ನು ಉಪೇಕ್ಷೆಯಾಗದಂತೆ ನೋಡಿಕೊಳ್ಳಬೇಕು. ಈ ಪ್ರಮುಖ ಅಂಶ ನಿಮ್ಮ ಗಮನಕ್ಕೆ ಏಕೆ ಬರ ಲಿಲ್ಲವೋ ಎಂದು ನನಗೆ ಅರ್ಥವಾಗುತ್ತಿಲ್ಲ" ಎಂದು ಪಂಧೆಯವರು ತಮ್ಮ ಪತ್ರದಲ್ಲಿ ಆಶ್ಚರ್ಯ ವ್ಯಕ್ತ ಪಡಿಸುತ್ತಾ "ನಿಮಗೆ ಕಾರ್ಮಿಕ ಆಂದೋಲನದ ಬಗ್ಗೆ ಚೆನ್ನಾಗಿ ಪರಿಚಯವಿದೆ, ಸಂಪರ್ಕವಿದೆ ಯಾದ್ದರಿಂದ ನೀವು ಪರಿಸ್ಥಿತಿಯ ವಿಮರ್ಶೆ ನಡೆಸಿ ಇಂತಹ ಮಹತ್ವ ಪೂರ್ಣ ತಂಡಗಳಲ್ಲಿ ಕಾರ್ಮಿಕರು ಪರಿಣಾಮಕಾರಿಯಾಗಿ ಭಾಗವಹಿಸು ವಂತೆ, ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕ ಪ್ರತಿನಿಧಿಗಳನ್ನು ಈ ತಂಡದಲ್ಲಿ ಸೇರಿಸುವಿರಾಗಿ ಆಶಿಸುತ್ತೇನೆ" ಎಂದು ಆಶಯ ವ್ಯಕ್ತಪಡಿಸಿದ್ದಾರೆ. (ಐಎನ್‌ಎನ್)

ಅಂಗನವಾಡಿ ಕಾರ್ಯಕರ್ತರ ಪ್ರತಿಭಟನೆ

ರಾಮದುರ್ಗ: ಅಂಗನವಾಡಿ ಕಾಯಕರ್ತೆಯರು ತಮ್ಮ 15 ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸುತ್ತಾ ಅಂಗನವಾಡಿ ಶಿಕ್ಷಕಿಯರ ಹಾಗೂ ಸಹಾಯಕಿಯರ ಸೇವೆ ಕಾಯಂ ಗೊಳಿಸಬೇಕು. ಖಾಯಂಗೊಳಿಸು ವವರೆಗೆ ಶಿಕ್ಷಕಿಗೆ 1200-00ರೂ. ಸಹಾಯಕಿಗೆ 800-00 ರೂ ವೇತನ ಕೊಡಬೇಕು, ಅಂಗನವಾಡಿ ಕೇಂದ್ರಗಳ ಖಾಸಗೀಕರಣ ನಿಲ್ಲ ಬೇಕು, ಕೆಎಟಿ ಆದೇಶ ಜಾರಿಯಾಗ ಬೇಕು, ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ಇಲಾಖೆಯ ಆಹಾರ ಪದಾರ್ಥ ಖರೀದಿಯಲ್ಲಿ ನಡೆದಿದೆ ಎನ್ನಲಾದ 25 ಕೋಟಿ ರೂಪಾಯಿ ಅವ್ಯವಹಾರದ ಬಗ್ಗೆ ಸಿಓಡಿ ತನಿಖೆ ನಡೆಸ ಬೇಕೆಂದು ಘೋಷಣೆಗಳನ್ನು ಕೂಗುತ್ತಾ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಡಿಸಿದರು. ಅಖಿಲ ಭಾರತ ಕರೆಯ ಮೇರೆಗೆ ಅಂಗನವಾಡಿ ಕೇಂದ್ರಗಳನ್ನು ಮುಚ್ಚಿ ಅಂಗನ ವಾಡಿ ನೌಕರರ ಸಂಘ (ಸಿಐಟಿಯುಗೆ ಸಂಯೋಜಿತ)ದ ನೇತೃತ್ವದಲ್ಲಿ ಸಿಡಿಪಿಓ ಶ್ರೀ ಬಿಲ್ವಾರವರಿಗೆ ಬೇಡಿಕೆಯ ಮನವಿ ಅರ್ಪಿಸಲಾಯಿತು. ಸಭೆಯನ್ನು ಉದ್ದೇಶಿಸಿ ಬೀಡಿ ಕಾರ್ಮಿಕರ ಮುಖಂಡ ಗೈಬು ಖಾನ ಅಂಗನ ವಾಡಿ ಶಿಕ್ಷಕಿಯರ ಹಾಗೂ ಸಹಾಯಕಿಯರ ಸಮಸ್ಯೆಗಳ ಕುರಿತು ಮಾತನಾಡಿದರು. ಕೊನೆಯಲ್ಲಿ ಅನ್ನಪೂರ್ಣ ದೇವಾಂಗ ಮಠ ವಂದನೆಗಳನ್ನು ಸಲ್ಲಿಸಿದರು.

ಮೆರವಣಿಗೆಯ ನೇತೃತ್ವ ಶ್ರೀಮತಿ ಎ.ಎಲ್ ದೊಡ್ಡಮನಿ, ಶ್ರೀಮತಿ ಜೆ.ಎಚ್.ಎಣ್ಣಿ, ಶ್ರೀಮತಿ ಜಯಶ್ರೀ ಲಿಂಗರೆಡ್ಡಿ ಹಾಗೂ ಸಿಪಿಎಂ ಕಾರ್ಯದರ್ಶಿ ನಾಗಪ್ಪ ಸಂಗೊಳ್ಳಿ ಮತ್ತು ಫಡೆಪ್ಪ ಶಾನವಾಡ ವಹಿಸಿದ್ದರು.

ಉ.ಕ.: ಹಂಚು ಕಾರ್ಮಿಕರ ಪಿಕೆಟಿಂಗ್

ಭಟ್ಕಳ: ಉತ್ತರ ಕನ್ನಡ ಜಿಲ್ಲೆಯ ಹಂಚು ಕಾರ್ಮಿಕರು ಸರಕಾರ 87 ರ ನಂತರ ಕನಿಷ್ಟ ಕೂಲಿ ಪರಿಷ್ಕರಣೆ ನಡೆಸದೇ ಇರುವುದನ್ನು ಪ್ರತಿಭಟಿಸಿ 3 ಹಂತದ ಚಳುವಳಿಯಾಗಿ ಭಟ್ಕಳ ಸಹಾಯಕ ಕಮಿಷನರ್ ಕಛೇರಿ ಎದುರೇ ಪಿಕೆಟಿಂಗ ನಡೆಸಿದರು.

ಭಟ್ಕಳ, ಶಿರಾಲಿ, ಮುರ್ಡೇಶ್ವರ ಪ್ರದೇಶದ ಒಂದು ಸಾವಿರಕ್ಕೂ ಮಿಕ್ಕಿ ಹಂಚಿನ ಕಾರ್ಮಿಕರು ಭಟ್ಕಳ ಸಾಗರ ರಸ್ತೆಯಿಂದ ಬೃಹತ್ ಮೆರವಣಿಗೆ ನಡೆಸಿ ನಗರದ ಪ್ರಮುಖ ಬೀದಿಯಲ್ಲಿ ಘೋಷಣೆ ಕೂಗುತ್ತಾ ಎ.ಸಿ. ಕಛೇರಿ ಎದುರು ಪಿಕೆಟಿಂಗ್ ನಡೆಸಿದರು.

ಸಭೆಯನ್ನುದ್ದೇಶಿಸಿ ಜಿಲ್ಲಾ ಹಂಚು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ತಿಲಕ ಗೌಡ ಮತ್ತು ಸಹ ಕಾರ್ಯದರ್ಶಿ ಸುಬಾಸ ಕೊಪ್ಪಿಕರ ಮಾತನಾಡಿದರು. ಸಂಘದ ಮುಖಂಡರಾದ ಈಶ್ವರ ನಾಯ್ಕ, ಶಂಕರ ದೇವಾಡಿಗ, ಗಣಪತಿ ದೇವಾಡಿಗ, ಚಂದ್ರುನಾಯ್ಕ, ಮುನ್ವೇಲ್ ಡಿಸೋಜ, ವೆಂಕಟೇಶ್ ದೇವಾಡಿಗ, ನಾಗಪ್ಪ ದೇವಾಡಿಗ ಹಾಜರಿದ್ದರು.

ಹೊನ್ನಾವರದಲ್ಲಿ 600 ಮಿಕ್ಕಿ ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿ ತಹಶೀಲದಾರ ಕಛೇರಿ ಎದುರು ಪಿಕೆಟಿಂಗ್ ನಡೆಸಿದರು. ಸಂಘದ ರಾಮಾ, ಶಿವಯ್ಯ ಗೌಡ, ಸೂರ್ಯ, ಮಂಜು ಗೌಡ, ಮಂಜುಪಾಯಗೌಡ, ಸೀತಾರಾಮ, ನಾರಾಯಣ, ಪರುಶು ಮೇಸ್ತ್ರಿ, ಮೋಹನ್ ಪುಲಕರ ಹಾಜರಿದ್ದರು.

ಯಶಸ್ವಿ ಗ್ರಾಮ ಪಂಚಾಯತ್ ನೌಕರರ ಜಿಲ್ಲಾ ಸಮ್ಮೇಳನ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಎಲ್ಲಾ 11 ತಾಲೂಕಿನ 212 ಗ್ರಾಮ ಪಂಚಾಯತ್ ನೌಕರರ ಪ್ರತಿನಿಧಿಗಳು ಇತ್ತೀಚೆಗೆ ಕಾರವಾರ ಎನ್.ಜಿ.ಓ. ಹಾಲ್‌ನಲ್ಲಿ ಸಮಾವೇಶ ನಡೆಸಿದರು. ಈ ಸಮಾವೇಶದಲ್ಲಿ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಪಿ.ಕುಲಕರ್ಣಿ ಮುಖ್ಯ ಅತಿಥಿಯಾಗಿ ಮಾತನಾಡಿ ನೌಕರರ ರಾಜ್ಯ ಮಟ್ಟದ ಬೇಡಿಕೆ ಮತ್ತು ಹೋರಾಟದ ಬಗ್ಗೆ ವಿವರಿಸಿದರು.

ಸಿಐಟಿಯು ಉ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್.ನಾಯ್ಕ, ನೌಕರರ ಸಂಘದ ಉ.ಕ.ಜಿಲ್ಲಾಧ್ಯಕ್ಷ ಸುಭಾಸ ಕೊಪ್ಪಿಕರ, ಸಂಘದ ರಾಜ್ಯಸಮಿತಿ ಸದಸ್ಯ ಮಾರುತಿ ನಾಯ್ಕ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗೇಶ್ ನಾಯ್ಕ, ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ತಿಲಕ ಗೌಡ, ಸಿಪಿಐ(ಎಂ)ನ ಮಂಜುನಾಥ ಪುಲಕರ ಈ ಸಂದರ್ಭದಲ್ಲಿ ಹಾಜರಿದ್ದರು.

ಕೊನೆಯಲ್ಲಿ ಬೃಹತ್ ಮೆರವಣಿಗೆಯನ್ನು ನಡೆಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ನಾಗಲಾಂಬಿಕಾ ದೇವಿಯವರಿಗೆ ಮನವಿ ಕೊಡಲಾಯಿತು. ಇವರು ನೇರವಾಗಿ ಕಛೇರಿಯಿಂದ ಹೊರ ಬಂದು ಇನ್ನು ಕೆಲವೇ ದಿನಗಳಲ್ಲಿ ಬೇಡಿಕೆ ಈಡೇರಿಸುವ ಭರವಸೆ ನೀಡಿದರು. ಫೆಬ್ರವರಿ 24 ರ 'ಬೆಂಗಳೂರು ಚಲೋ' ಕಾರ್ಯಕ್ರಮಕ್ಕೆ ಉ.ಕ. ಜಿಲ್ಲೆಯಿಂದ ನೂರಾರು ನೌಕರರು ಭಾಗವಹಿಸಲಿದ್ದಾರೆ.

ಕಾರ್ಮಿಕ ಚಳುವಳಿಗೆ ಹೊಸ ಸ್ಪೂರ್ತಿ, ದಿಕ್ಕು ನೀಡಿದ

5ನೇ ದ.ಕ. ಜಿಲ್ಲಾ ಸಿಐಟಿಯು ಸಮ್ಮೇಳನ



ಮಂಗಳೂರಿನಿಂದ 10 ಕಿ ಮೀ ದೂರದ ತೊಕ್ಕೊಟ್ಟಿನಲ್ಲಿ ಫೆ. 13 ಮತ್ತು 14 ರಂದು ಹಬ್ಬದ ವಾತಾವರಣ. ಪೇಟೆಯಲ್ಲಿ ಎಲ್ಲಿ ನೋಡಿದರೂ ಪಟಪಟನೆ ಹಾರುವ ಕೆಂಬಾವುಟಗಳು, ರಕ್ತರಂಜಿತ ತಳಿರು ತೋರಣಗಳು, ಜಿಲ್ಲೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಿತ್ರಗಳುಳ್ಳ ಆಕರ್ಷಕ ಬ್ಯಾನರ್‌ಗಳು. ತೊಕ್ಕೊಟ್ಟು ಜನತೆಗೆ ಹೊಸ ಅನುಭವ. ಇದೇ ಮೊದಲ ಬಾರಿಗೆ ನಡೆಯುತ್ತಿರುವ ಸಮರ ಶೀಲ ಬಲಿಷ್ಠ ಕಾರ್ಮಿಕ ಸಂಘಟನೆ. ಸಿ.ಐ.ಟಿ.ಯು ನ ಜಿಲ್ಲಾ ಸಮ್ಮೇಳನದ ಪ್ರತಿನಿಧಿ ಸಂಗಾತಿಗಳನ್ನು ಸ್ವಾಗತಿಸಲು ಇಡೀ ತೊಕ್ಕೊಟ್ಟು ಸಜ್ಜಾಗಿತ್ತು.

ಕೆಂಬಾವುಟವನ್ನು ಮುನ್ನಡೆಸಿದ ಕಾಂ|| ಮುತ್ತಪ್ಪರು

ಫೆಬ್ರವರಿ 13 ರ ಬೆಳಿಗ್ಗೆ ತೊಕ್ಕೊಟ್ಟಿನ ಬೀಡಿ ಕಾರ್ಮಿಕರ ಕಛೇರಿಯಿಂದ ಸಮ್ಮೇಳನ ನಡೆಯುವ ಸ್ಥಳವಾದ ಕೊಲ್ಯದ ಕಾಂ|| ನಾರಾಯಣ ಪೂಜಾರಿ ನಗರಕ್ಕೆ ಬ್ಯಾಂಡ್ ವಾದ್ಯ ಘೋಷಣೆಗಳೊಂದಿಗೆ ಸಮ್ಮೇಳನದ ಧ್ವಜವನ್ನು ಕೊಂಡು ಹೋಗುವ ಕಾರ್ಯಕ್ರಮ. ಮೆರವಣಿಗೆ ಮುಂಚೂಣಿಯಲ್ಲಿ ಹಿರಿಯ ಸಂಗಾತಿ ಕಾಂ|| ಮುತ್ತಪ್ಪರು ಧ್ವಜ ಸಹಿತವಾದ ಕೋಲನ್ನು ಎತ್ತಿ ಹೆಜ್ಜೆಯಿಡುತ್ತಿದ್ದರು. ಇಳಿ ವಯಸ್ಸಿನಲ್ಲೂ ಅವರ ದಿಟ್ಟ ಹೆಜ್ಜೆಗಳ ಮುನ್ನಡೆ ಕಿರಿಯ ಸಂಗಾತಿಗಳಿಗೆ ರೋಮಾಂಚಕಾರಿ ಅನುಭವ, ಸ್ಫೂರ್ತಿ. ಜಿಲ್ಲಾ ಆದಕ್ಷ ಬಿ. ಮಾಧವರು ಧ್ವಜವನ್ನು ಮೇಲಕ್ಕೇರಿಸಿದಾಗ ಮುಗಿಲು ಮುಟ್ಟುವ ಘೋಷಣೆಗಳು. ಆವೇಶಭರಿತ ಭಾಷಣ ಮಾಡಿದ ಮಾಧವರು ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ಸಮಾಜವಾದಿ ವ್ಯವಸ್ಥೆಯಿಂದ ಮಾತ್ರ ಎಂದರು.

ಪರಿಸರವಾದಿಗಳ ಕಪಟತನಕ್ಕೆ ಸೂರಿ ಸವಾಲು

ಸಮ್ಮೇಳನದ ಹಿಂದಿನ ದಿನವಷ್ಟೇ ಮಂಗಳೂರಿನಲ್ಲಿ ಪರಿಸರವಾದಿಗಳ, ಮಠಾಧಿಪತಿಗಳ ಸಭೆಯೊಂದು ನಡೆದಿತ್ತು. ಈ ಹಿನ್ನಲೆಯಲ್ಲಿ ಜಿಲ್ಲಾ ಸಮ್ಮೇಳನ ಉದ್ಘಾಟನಾ ಭಾಷಣ ಮಾಡಿದ ಕಾಂ|| ಸೂರಿಯವರು ಕೈಗಾರಿಕೆಗಳು ಬೇಡವೆನ್ನುವ ಪರಿಸರವಾದಿಗಳ ಕುಟಿಲ ನೀತಿಯನ್ನು ಒಂದೊಂದಾಗಿ ಬಯಲಿಗೆಳೆದರು. "ರಾಜಕೀಯ ಮಾಡುವ ಮಠಾದಿಪತಿಗಳು, ಪರಿಸರವಾದಿಗಳು ಬಡಜನರ ಸಮಸ್ಯೆಗಳ ಬಗ್ಗೆ ಯಾಕೆ ಮೌನ ವಹಿಸಿದ್ದಾರೆ" ಎಂದು ಪ್ರಶ್ನಿಸಿದ ಸೂರಿ ನಮಗೆ ಪರಿಸರದ ಬಗ್ಗೆ ಕಾಳಜಿ ಇದೆ. ಆದರೆ ಕೈಗಾರಿಕಾ ಬೆಳವಣಿಗೆಯಿಂದ ಮಾತ್ರ ದೇಶದ ಪ್ರಗತಿ ಅಭಿವೃದ್ಧಿ ಸಾಧ್ಯವೆಂದು ಉದಾಹರಣೆ ಸಹಿತ ವಿವರಿಸಿದರು. ಹಿಂದಿನ ಸರ್ಕಾರದ ಆರ್ಥಿಕ ನೀತಿಯನ್ನೇ ಮುಂದುವರಿಸಿದರೆ ಕಾರ್ಮಿಕರು ಕೈ ಕಟ್ಟಿ ಕುಳಿತುಕೊಳ್ಳಲು ಸಾದ್ಯವಿಲ್ಲ. ಕಾರ್ಮಿಕರಲ್ಲಿ ವರ್ಗ ಜಗೃತಿ ಕಡಿಮೆಯಾಗಿದ್ದು ಜಿಲ್ಲೆಯಲ್ಲಿ ಕಾರ್ಮಿಕರನ್ನು ಪ್ರಜ್ಞಾವಂತರನ್ನಾಗಿಸುವ ಕೆಲಸವನ್ನು ಸಿ.ಐ.ಟಿ.ಯು ಮಾಡಬೇಕಾಗಿದೆ ಎಂದು ಸೂರಿ ಕರೆ ನೀಡಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಬಿ. ಮಾಧವ ವಹಿಸಿದ್ದರು.

ಸಮ್ಮೇಳನಕ್ಕೆ ಶುಭಕೋರಿ ವಿಮಾ ನೌಕರರ ಸಂಘದ ನಾಗೇಶ್ ಕುಮಾರ್, ಜಿಲ್ಲಾ ರೈತ ಸಂಘದ ಜನಾರ್ಧನ ನಾಯಕ್, ಡಿವೈಎಫ್‌ಐ ನ ಕೃಷ್ಣಪ್ಪ ಕೊಂಚಾಡಿ, ಜನವಾದಿ ಮಹಿಳಾ ಸಂಘಟನೆಯ ಪದ್ಮಾವತಿ ಶೆಟ್ಟಿ, ಎಸ್‌ಎಫ್‌ಐ ನ ಸುನಿಲ್ ಕುಮಾರ್, ಬಿಇಎಫ್‌ಐ ನ ಬಿ.ಎಂ. ಮಾಧವ ಮಾತನಾಡಿದರು. ಸ್ವಾಗತ ಸಮಿತಿಯ ಕಾರ್ಯದರ್ಶಿ ಸುಕುಮಾರ್ ಸ್ವಾಗತ ಭಾಷಣವನ್ನು ಮಾಡಿದರು.

ಬಳಿಕ ನಡೆದ ಪ್ರತಿನಿಧಿ ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿ ಕೆ. ಮೂಸಬ್ಬನವರು ಕರಡು ವರದಿಯನ್ನು ಮಂಡಿಸಿದರು. ವರದಿ ಬಗ್ಗೆ 13 ಮಂದಿ ಹಿರಿಯ ಸಂಗಾತಿಗಳು ವಿಮರ್ಶಾತ್ಮಕ ಚರ್ಚೆ ನಡೆಸಿದರು. ಮುಂಬರುವ ದಿನ ಗಳಲ್ಲಿ ಜಿಲ್ಲೆಯ ಕಾರ್ಮಿಕ ಚಳುವಳಿ ಯನ್ನು ಬಲಿಷ್ಠವಾಗಿ ಕಟ್ಟುವ ಬಗ್ಗೆ ತಮ್ಮ ಸಲಹೆ ಸೂಚನೆ ಮಾರ್ಗದರ್ಶನ ನೀಡಿ ದರು. ಪ್ರತಿನಿಧಿ ಗಳನ್ನು ಉದ್ದೇಶಿಸಿ ಮಾತನಾಡಿದ ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್. ಶ್ರೀಯಾನ್‌ರವರು ಜಿಲ್ಲೆಯನ್ನು ಕಾರ್ಮಿಕ ಚಳುವಳಿಯನ್ನು ಮುನ್ನಡೆಸುವ ಬಗ್ಗೆ ತಮ್ಮ ಮಾರ್ಗದರ್ಶನ ಅನುಭವ ನೀಡಿದರು.

ಸಮ್ಮೇಳನದಲ್ಲಿ ಕಾರ್ಮಿಕ ಚಳುವಳಿಗೆ ಜನಸಾಮಾನ್ಯರಿಗೆ ಸಂಬಂಧಿಸಿದಂತೆ ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಪರಿಸರವನ್ನು ಗಮನದಲ್ಲಿಟ್ಟು ಕೈಗಾರಿಕೆಗಳನ್ನು ಬೆಳೆಸಬೇಕು. ಕಾರ್ಮಿಕ ಚಳುವಳಿಯಲ್ಲಿ ಪೋಲೀಸರ ಹಸ್ತಕ್ಷೇಪ ನಿಲ್ಲಿಸಬೇಕು ಬೆಲೆ ಏರಿಕೆ ತಡೆಗಟ್ಟಬೇಕು. ಕೃಷಿ ಕಾರ್ಮಿಕರಿಗೆ ಸಮಗ್ರ ಕೇಂದ್ರ ಶಾಸನಕ್ಕೆ ಒತ್ತಾಯಿಸಬೇಕು. ಸಂಯುಕ್ತರಂಗ ಸರ್ಕಾರ ಕನಿಷ್ಠ ಸಾಮಾನ್ಯ ಕಾರ್ಯಕ್ರಮ ಜ್ಯಾರಿಗೊಳಿಸಲು ಒತ್ತಾಯಿಸಿ, ಪಿ.ಡಿ.ಎಫ್ ವ್ಯವಸ್ಥೆ ಬಲಪಡಿಸಬೇಕು, ಬೀಡಿ ಕಾರ್ಮಿಕರಿಗೆ ಪರಿಷ್ಕೃತ ಕೂಲಿ ಜ್ಯಾರಿಗೊಳಿಸಲು ಒತಾಯಿಸಿ, ಹೆಜ್ಮಾಲ ಗೋಲಿಬಾರ್ ಘಟನೆಯನ್ನು ಖಂಡಿಸಿ, ಇಎಸ್‌ಐ ಸೌಲಭ್ಯಗಳನ್ನು ಸರಿಪಡಿಸಲು ಒತ್ತಾಯಿಸಿ, ಕುಂದಾಪುರ-ಮಂಗಳೂರು ರಾಷ್ಟ್ರೀಯ ಹೆದ್ದಾರಿಯನ್ನು ನಾಲ್ಕು ಫೇಸ್ ರಸ್ತೆಯನ್ನಾಗಿ ಮಾರ್ಪಡಿಸಲು ಒತ್ತಾಯಿಸಿ, ಎಲ್ಲಾ ಕೈಗಾರಿಕೆಗಳ ಕಾರ್ಮಿಕರಿಗೆ ಕನಿಷ್ಠ ಕೂಲಿ ಪರಿಷ್ಕರಿಸಲು ಒತ್ತಾಯಿಸಿ, ವಿಮಾ ರಂಗವನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆಗಳನ್ನು ಕೈ ಬಿಡಲು ಒತ್ತಾಯಿಸುವುದು ಇತ್ಯಾದಿ.

ಅಭೂತ ಪೂರ್ವ ಮೆರವಣಿಗೆ

ಫೆ.-15 ತೊಕ್ಕೊಟ್ಟಿಗೆ ಚಾರಿತ್ರಿಕ ದಿನ. ಕಾರ್ಮಿಕ ಚಳುವಳಿಗೆ ಮಹತ್ತರ ಕೊಡುಗೆ ನೀಡಿರುವ ತೊಕ್ಕೊಟ್ಟಿನಲ್ಲಿ ಇಷ್ಟೊಂದು ಗಾತ್ರದ ಮೆರವಣಿಗೆ ಈ ಹಿಂದೆ ನಡೆದುದಿಲ್ಲ. ಕೊಲ್ಯದಿಂದ ಹೊರಟ ಮೆರವಣಿಗೆಯಿಂದ ತೊಕ್ಕೊಟ್ಟಿನ ನಾಗರೀಕರಿಗೆ ರೋಮಾಂಚನ ಅನುಭವ. ಮೆರವಣಿಗೆ ಮುಂದೆ ಬಿಳೀಸೀರೇ, ಕೆಂಪು ಕುಪ್ಪಸ ಧರಿಸಿದ ಸಮವಸ್ತ್ರಧಾರಿ ನೂರಾರು ಮಹಿಳೆಯರು. ಅವರು ಹಿಡಿದುಕೊಂಡಿದ್ದ ಅಲಂಕೃತ ಕೊಡೆಗಳು ಕೇರಳದ ಮೆರವಣಿಗೆಗಳನ್ನು ನೆನಪಿಸುತ್ತಿತ್ತು. ಜೊತೆಗೆ ಬ್ಯಾಂಡ್ ವಾದ್ಯ ಘೋಷಗಳು ಶಿಸ್ತುಬದ್ಧವಾಗಿ ಘೋಷಣೆ ಹಾಕಿಕೊಂಡು ಸಾಗುತ್ತಿದ್ದ ಮೆರವಣಿಗೆ ಸೈನಿಕ ಪಥ ಸಂಚಲನೆಯನ್ನು ನೆನಪಿಸುತ್ತಿತ್ತು. ಮಾರ್ಗದ ಇಕ್ಕೆಲಗಳಲ್ಲೂ ಸಾವಿರಾರು ಮಂದಿ ಕುತೂಹಲಭರಿತರಾಗಿ ವೀಕ್ಷಿಸುತ್ತಿದ್ದರು. ರಾಷ್ಟ್ರೀಯ ಹೆದ್ದಾರಿಯಲ್ಲಿ ಅರ್ಧ ತಾಸು ಸಂಚಾರ ಸ್ಥಗಿತಗೊಂಡಿತು. ತೊಕ್ಕೊಟದಲ್ಲಿ ಇಂಥ ಮೆರವಣಿಗೆಯನ್ನು ಮಾಡಬೇಕೆಂಬ ನಮ್ಮ ಬಹುದಿನದ ಕನಸು ನನಸಾಯಿತು-ಎನ್ನುತ್ತಾರೆ. ಸ್ಥಳೀಯ ಮುಖಂಡ ಮತ್ತು ಸ್ವಾಗತ ಸಮಿತಿ ಕಾರ್ಯದರ್ಶಿ ಸುಕುಮಾರ್ ಹರ್ಷಚಿತ್ತರಾಗಿ ತೃಪ್ತಿ ನಗೆಯೊಂದಿಗೆ.

ಪೆರ್ಮನ್ನೂರು ಮೈದಾನದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಸೂರಿಯವರು ಜನವಿರೋಧಿಯಾದ ಉದಾರೀಕರಣ ನೀತಿಯನ್ನು ಮುಂದುವರಿಸಿಕೊಂಡು ಹೋದರೆ ನಿಮ್ಮ ವಿರುದ್ಧ ಹೋರಾಟಕ್ಕೆ ಇಳಿಯುತ್ತೇವೆ ಎಂದು ಸಂಯುಕ್ತ ರಂಗ ಸರಕಾರಕ್ಕೆ ಎಚ್ಚರಿಕೆಯನ್ನಿತ್ತರು.

ಇನ್ನೋರ್ವ ಅತಿಥಿ ಸಂಸದ ಟಿ. ಗೋವಿಂದನ್ ಮಾತನಾಡಿ ಕಾರ್ಮಿಕರು ಕೇವಲ ಆರ್ಥಿಕ ಬೇಡಿಕೆಗಳಿಗಷ್ಟೇ ಹೋರಾಡದೆ, ವ್ಯವಸ್ಥೆಯ ಬದಲಾವಣೆಗಾಗಿ ಹೋರಾಡಬೇಕೆಂದು ಕರೆಯಿತ್ತರು. ಹೊಸ ಜಿಲ್ಲಾ ಸಮಿತಿಯ ಪದಾಧಿಕಾರಿಗಳನ್ನು ಸಭೆ ಪರಿಚಯಿಸಿದಾಗ ಪ್ರಚಂಡ ಕರತಾಡನ.

ಹೊಸ ನಾಯಕತ್ವ

ಜಿಲ್ಲೆಯಲ್ಲಿ ಕಾರ್ಮಿಕರ ಸಮರಶೀಲ ಚಳುವಳಿಯನ್ನು ಮುಂದುವರಿಸಿಕೊಂಡು ಹೋಗಲು, ಹೊಸ ಪ್ರದೇಶಗಳಿಗೆ ಸಂಘಟನೆಯನ್ನು ವಿಸ್ತರಿಸಲು ಜವಾಬ್ದಾರಿಯನ್ನು ನೀಡಲು ಹೊಸ ನಾಯಕತ್ವವನ್ನು ಸಮ್ಮೇಳನವು ಆಯ್ಕೆ ಮಾಡಿತು.

ಈ ಹಿಂದೆ ಪ್ರಧಾನ ಕಾರ್ಯದರ್ಶಿಯಾಗಿ ಸಿಐಟಿಯುವನ್ನು ಜಿಲ್ಲೆಯಲ್ಲಿ ಮುನ್ನಡೆಸಿದ ಕೆ.ಮೂಸಬ್ಬ ಈ ನೂತನ ಅಧ್ಯಕ್ಷರು.

ಈ ಹಿಂದೆ ಅಧ್ಯಕ್ಷರಾಗಿದ್ದ, ಎಲ್‌ಐಸಿ ನೌಕರಿಯಿಂದ ಇತ್ತೀಚೆಗಷ್ಟೇ ನಿವೃತ್ತಿ ಹೊಂದಿದ ವಿಮಾ ನೌಕರರ ಮುಂದಾಳು ಬಿ.ಮಾಧವ ನೂತನ ಪ್ರಧಾನ ಕಾರ್ಯದರ್ಶಿ, ಯು.ಬಿ.ಲೋಕಯ್ಯ, ಪಿ.ವಿಶ್ವನಾಥ ರೈ, ಪದ್ಮಾವತಿ, ಕೆ.ಆರ್. ಶ್ರೀಯಾನ್ - ಉಪಾಧ್ಯಕ್ಷರುಗಳು, ಕೆ.ಶಂಕರ್, ಸುಕುಮಾರ್, ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ - ಜತೆ ಕಾರ್ಯದರ್ಶಿಗಳು, ಕಮಲಾಕ್ಷ ಬಂಗೇರ - ಖಜಾಂಚಿ.

ಜಿಲ್ಲಾ ಸಮಿತಿಯಲ್ಲಿ ಇವರಲ್ಲದೆ ಇನ್ನೂ 27 ಮಂದಿ ಸದಸ್ಯರಿದ್ದಾರೆ.

ಕಾರ್ಮಿಕ ಚಳುವಳಿಯ ನೇತೃತ್ವದಲ್ಲಿ ಮಹಿಳೆಯರದ್ದು ಸಮಪಾಲು

ಸಿಐಟಿಯು ಜಿಲ್ಲಾ ಸಮ್ಮೇಳನಕ್ಕೆ ಜಿಲ್ಲೆಯ ವಿವಿಧ ಮೂಲೆಗಳಿಂದ 147 ಮಂದಿ ವಿವಿಧ ಕೈಗಾರಿಕೆಯಲ್ಲಿ ದುಡಿಯುವ ಸಂಗಾತಿಗಳು ಪ್ರತಿನಿಧಿಗಳಾಗಿ ಬಂದಿದ್ದರು. ಈ ಬಾರಿಯ ವೈಶಿಷ್ಟ್ಯವೆಂದರೆ ಪ್ರತಿನಿಧಿಗಳಲ್ಲಿ ಪುರುಷ-ಮಹಿಳೆಯರದ್ದು ಬಹುತೇಕ ಸಮಪಾಲು. 85 ಪುರುಷ ಪ್ರತಿನಿಧಿಗಳಿದ್ದರೆ 62 ಮಂದಿ ಮಹಿಳಾ ಪ್ರತಿನಿಧಿಗಳಿದ್ದರು. ಇದು ಈ ಬಾರಿಯ ಸಮ್ಮೇಳನದ ಒಂದು ಗುಣಾತ್ಮಕ ಅಂಶ.

ವರದಿ - 'ನಿರಂತರ' ಗೋಡೆಪತ್ರಿಕೆ ಮಂಗಳೂರು.



ಚಿತ್ರದುರ್ಗ ಸಿ.ಐ.ಟಿ.ಯು ಜಿಲ್ಲಾ ಸಮ್ಮೇಳನ

ಹರಿಹರ: ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ನೀಡಿದ ಕರೆಯ ಮೇರೆಗೆ ಫೆಬ್ರವರಿ ತಿಂಗಳಲ್ಲಿ ಪಿಕೆಟಿಂಗ್, ಮಾರ್ಚ್ ತಿಂಗಳಲ್ಲಿ ರಸ್ತೆ ರೋಕೋ ಇತ್ಯಾದಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಕರ್ನಾಟಕ ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್ ಅವರು ಇತೀಚೆಗೆ ಎಸ್‌ಎಸ್‌ಕೆ ಕಲ್ಯಾಣ ಮಂಟಪದಲ್ಲಿ ಜರುಗಿದ ಚಿತ್ರದುರ್ಗ ಜಿಲ್ಲಾ ಸಿಐಟಿಯು ಪ್ರಥಮ ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಕರೆ ನೀಡಿದರು.

ಸಾಮೂಹಿಕ ಪ್ರಜ್ಞೆ ಬಾರದೆ ಏನೂ ಸಾಧಿಸಲಾಗುವುದಿಲ್ಲವೆಂದು ನುಡಿದ ನಾಯರ್‌ರವರು ಸಂಘಟಿತ ಕಾರ್ಮಿಕರು ಅಸಂಘಟಿತ ಕಾರ್ಮಿಕರಿಗಾಗಿ ದುಡಿಯಬೇಕೆಂದರು. ಹರಿಹರದ ಬೀಡಿ ಕಾರ್ಮಿಕರ ಸಂಘಟನೆಯನ್ನು ಇಡೀ ರಾಜ್ಯದಲ್ಲೇ ಮಾದರಿಯಾಗಿ ರೂಪಿಸಬೇಕೆಂದು ಆಶಿಸಿದರು.

ಹರಿಹರದ ವಿಮಾ ನೌಕರರ ಸಂಘದ ಕಾರ್ಯದರ್ಶಿ ಕೆ.ಪಿ.ಚೆನ್ನಪ್ಪ, ಡಿವೈಎಫ್‌ಐನ ಜಿಲ್ಲಾ ಸಮಿತಿ ಸದಸ್ಯ ಕೆ.ಮಹಂತೇಶ, ಬಿಜಿವಿಎಸ್‌ನ ಎ.ಎಸ್.ಮೂರ್ತಿ, ಕರ್ನಾಟಕ ರಾಜ್ಯ ಡಿ ಗ್ರೂಪ್ ನೌಕರರ ಸಂಘದ ಕೆ.ಜಿ.ರೇವಣಸಿದ್ದಪ್ಪ ಸಮ್ಮೇಳನಕ್ಕೆ ಶುಭ ಕೋರಿದರು.

ಸಿ.ಎಂ.ಜಯಾನಂದ್ ವರದಿ ಮಂಡಿಸಿದರು. ವರದಿ ಮೇಲಿನ ಸುದೀರ್ಘ ಚರ್ಚೆಯಲ್ಲಿ ಅಧಿಕ ಸಂಖ್ಯೆಯ ಪ್ರತಿನಿಧಿಗಳು ಭಾಗ ವಹಿಸಿದ್ದರು. ನಿತ್ಯಾನಂದ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನದಲ್ಲಿ ಚಿತ್ರದುರ್ಗ ಜಿಲ್ಲಾ ಸಿಐಟಿಯು ಸಂಘಟನಾ ಸಮಿತಿಯನ್ನು ಸರ್ವಾನುಮತದಿಂದ ಕೆಳಕಂಡಂತೆ ಆಯ್ಕೆ ಮಾಡಲಾಯಿತು. ಅಧ್ಯಕ್ಷರು -ನಿತ್ಯಾನಂದ ಸ್ವಾಮೀಜಿ, ಉಪಾಧ್ಯಕ್ಷರು -ಸಿ.ಎಂ. ಜಯಾನಂದ, ಜೆ.ಮಲ್ಲಿಕಾರ್ಜುನ ಸ್ವಾಮಿ, ಆರ್.ಪಿ.ಉನ್ನಿತ್ತನ್, ಪ್ರಧಾನ ಕಾರ್ಯದರ್ಶಿ-ಎ.ಎಸ್.ಮೂರ್ತಿ, ಸಹ ಕಾರ್ಯದರ್ಶಿಗಳು-ಬಿ.ಎಸ್.ಚಳಗೇರಿ, ಪಿ.ಜಿ. ಗೌಡರ್, ಹೆಚ್.ಪಿ.ಜಯಮೂರ್ತಿ, ಕೆ.ಬಸವನ ಗೌಡ, ಖಜಾಂಚಿ-ಪಿ.ವೈ. ಪಾಟೀಲ್. ಸಮಾವೇಶದ ನಂತರ ಪ್ರತಿನಿಧಿಗಳು ಇತರ ಕಾರ್ಮಿರು ಬೃಹತ್ ರ್‍ಯಾಲಿಯಲ್ಲಿ ಹೊರಟು ಗಾಂಧಿ ಮೈದಾನದಲ್ಲಿ ಬಹಿರಂಗ ಸಭೆ ನಡೆಸಿದರು.

ರೈತರ ಹೋರಾಟಕ್ಕೆ ಸಂದ ವಿಜಯ

ಅರ್ಜಿ ಹಾಕಿ ವರ್ಕ್‌ಆರ್ಡರ್ ಪಡೆದು ಲೈನ್‌ಗಳನ್ನು ಎಳೆದು ವಿದ್ಯುತ್ ಸಂಪರ್ಕ ನೀಡದಿರುವಾಗ ಅನಿವಾರ್ಯವಾಗಿ ವಿದ್ಯುತ್ ಸಂಪರ್ಕ ಪಡೆದಿರುವ ರೈತರ ಪಂಪ್‌ಸೆಟ್‌ಗಳನ್ನು ದಂಡರಹಿತ ಸಕ್ರಮಗೊಳಿಸಿರುವ ಸರ್ಕಾರದ ನಿರ್ಧಾರ ಜಿಲ್ಲೆಯ ರೈತರ ಹೋರಾಟಕ್ಕೆ ಸಂದ ವಿಜಯವೆಂದು ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ಸಮಿತಿ ಅಭಿಪ್ರಾಯಪಟ್ಟಿದೆ. ಮತ್ತು ಈ ನಿರ್ಧಾರವನ್ನು ಮಾಡಲು ಒಗ್ಗಟ್ಟಾಗಿ ವಿಧಾನಸಭೆಯಲ್ಲಿ ಸರ್ಕಾರದ ಮೇಲೆ ಒತ್ತಡವನ್ನು ತಂದ ಎಲ್ಲಾ ಪ್ರತಿಪಕ್ಷಗಳ ಮುಖಂಡರಿಗೆ ಅದರಲ್ಲೂ ವಿಶೇಷವಾಗಿ ಈ ವಿಚಾರದಲ್ಲಿ ತೀವ್ರ ಪ್ರಯತ್ನ ನಡೆಸಿದ ಜಿಲ್ಲೆಯ ಬಾಗೇಪಲ್ಲಿ ಕ್ಷೇತ್ರದ ಶಾಸಕ ಹಾಗೂ ಸಿ.ಪಿ.ಐ.(ಎಂ) ನಾಯಕ ರಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರನ್ನು ರೈತ ಸಂಘದ ಜಿಲ್ಲಾ ಸಮಿತಿಯು ಅಭಿನಂದಿಸುತ್ತದೆ.

ರೈತ ಸಂಘವು ಆರಂಭದಿಂದಲೂ ತಪ್ಪು ಮಾಡದ ರೈತರಿಗೆ ದಂಡ ಹಾಕುವುದು ಸರಿಯಲ್ಲವೆಂದು ಹಲವಾರು ಹಂತದ ಹೋರಾಟಗಳನ್ನು ನಡೆಸಿತ್ತು ಮತ್ತು ಮೂರನೆಯ ಹಂತದ ಹೋರಾಟವಾಗಿ ಫೆಬ್ರವರಿ 25ರಂದು ಜಿಲ್ಲೆಯಾದ್ಯಂತ ರಸ್ತೆ ತಡೆ, ರೈತರ ಸಮಾವೇಶಗಳನ್ನು ನಡೆಸಲು ಯೋಚಿಸಿತ್ತು. ಆದರೆ ಈಗ ದಂಡ ವಸೂಲಿಯನ್ನು ಕೈಬಿಟ್ಟಿರುವ ಕಾರಣ ರಸ್ತೆ ತಡೆ ಚಳುವಳಿಯನ್ನು ಕೈಬಿಡಲು ನಿರ್ಧರಿ ಸಿದೆ. ಆದರೂ ಓಲ್ಟೇಜ್ ಸಮಸ್ಯೆ ಮತ್ತು ಯಾವುದೇ ನೀರಾವರಿ ಯೋಜನೆಗಳಿಲ್ಲದ ನಮ್ಮ ಜಿಲ್ಲೆಗೆ ದಿನಾ ಕನಿಷ್ಠ 12 ಗಂಟೆ ವಿದ್ಯುತ್ ನೀಡಬೇಕೆಂದು ಆಗ್ರಹಿಸಿ ಜಿಲ್ಲಾ ಮಟ್ಟದಲ್ಲಿ ರೈತರ ಸಮಾವೇಶ- ರೈತ ಹೋರಾಟ ಸಮಿತಿಗಳ ರಚನೆ ವಿವಿಧ ಹಂತದ ಹೋರಾಟಗಳನ್ನು ಸಂಘಟಿಸಲು ತೀರ್ಮಾನಿಸಿದೆ. ರೈತರು ಒಗ್ಗಟ್ಟಾಗಿ ಹೋರಾಟ ನಡೆಸಿದರೆ ಜಯ ಉಂಟು ಎಂಬುದನ್ನು ಈಗಲಾದರೂ ಅರ್ಥ ಮಾಡಿ ಕೊಂಡು ಮುಂದೆ ನಡೆಯುವ ಹೋರಾಟ ಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸ ಬೇಕೆಂದು ರೈತ ಸಂಘದ ಜಿಲ್ಲಾ ಸಮಿತಿ ವಿನಂತಿಸುತ್ತದೆ.

ಅಖಿಲ ಭಾರತ ಸಿಐಟಿಯು ಸಮ್ಮೇಳನ ಏಪ್ರಿಲ್ 21 ರಿಂದ 26

ಸಿಐಟಿಯುನ ಅಖಿಲ ಭಾರತ ಸಮ್ಮೇಳನ ಕೊಚ್ಚಿಯಲ್ಲಿ ಏಪ್ರಿಲ್ 21 ರಿಂದ 26 ರವರೆಗೆ ನಡೆಯುತ್ತದೆ. ಈ ಹಿಂದೆ ಏಪ್ರಿಲ್ 6 ರಿಂದ 10 ಎಂದು ದಿನಾಂಕ ನಿಗದಿ ಮಾಡಲಾಗಿತ್ತು. ಆ ದಿನಗಳಲ್ಲಿ ಕೊಚ್ಚಿಯಲ್ಲಿ ಅಂತರ್‍ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಿಂದಾಗಿ ಸಮ್ಮೇಳನಕ್ಕೆ ಸ್ಥಳದ ಸಮಸ್ಯೆಯಿಂದಾಗಿ ಸಿಐಟಿಯು ನ ಕೇರಳ ರಾಜ್ಯ ಸಮಿತಿ ವಿನಂತಿಯ ಮೇರೆಗೆ ಅದನ್ನು ಮುಂದೂಡಲಾಗಿದೆ. ಈಗ ದುಡಿಯುವ ಮಹಿಳೆಯರ ಸಮ್ಮೇಳನವನ್ನು ಏಪ್ರಿಲ್ 20 ರಂದು ನಡೆಯಲಿದೆ.

ಬಜೆಟ್

ಹಣಕಾಸು ಕೊರತೆಯೋ ರಾಜಕೀಯ ಸಂಕಲ್ಪ ಶಕ್ತಿಯ ಕೊರತೆಯೋ?

ಬಜೆಟ್ಟು ಬಂದರೆ ಕೊರತೆಗಳ ವ್ಯಥೆಯೇ ಉದಾರೀಕರಣವಾದಿಗಳ ದಿನನಿತ್ಯದ ಗೋಳು. ಬಜೆಟ್ ಕೊರತೆ, ಹಣಕಾಸು ಕೊರತೆ ಇವು ದಿನನಿತ್ಯದ ಮಾತು. ಈ ಕೊರತೆಗಳ ಹೊರೆ ಜನಸಾಮನ್ಯರ ಹೆಗಲಿಗೇ ಹೇರಲ್ಪಡುತ್ತದೆ. ಬೇರೇನು ದಾರಿ? ಬೇರೆ ಏನೂ ದಾರಿ ಇಲ್ಲ, ಕೊರತೆಗಳನ್ನು ನೀಗಿಸಲೇ ಬೇಕಲ್ಲವೆ. ಸರಕಾರದ ಖರ್ಚು ಹೆಚ್ಚು ಆದಾಯ ಕಡಿಮೆ. ಖರ್ಚಿಗೆ ಆಗುವಷ್ಟಾದರೂ ಆದಾಯ ಸಂಗ್ರಹಿಸಬೇಕಲ್ಲ, ಅದಕ್ಕಾಗಿ ಸಾಮಾಜಿಕ ಕಾರ್ಯಕ್ರಮಗಳ ಸಹಾಯಧನದಲ್ಲಿ ಕಡಿತ. ಅನಾವಶ್ಯಕ ಖರ್ಚುಗಳಲ್ಲಿ ಕಡಿತ. ಅವಶ್ಯಕ ವಸ್ತುಗಳ ಆಡಳಿತಾತ್ಮಕ ಬೆಲೆಗಳಲ್ಲಿ ಹೆಚ್ಚಳ ಮಾಡಲೇ ಬೇಕಾಗುತ್ತದೆ. ಕೊರತೆ ನೀಗದೇ ಇರಲು ಸಾಧ್ಯವೇ? ಇಲ್ಲ ಆದ್ದರಿಂದ ಈ ಮೇಲಿನ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಇದು ಜನಸಾಮಾನ್ಯರ ಭಾರವನ್ನು ಹೆಚ್ಚಿಸುತ್ತದೆ ನಿಜ. ಆದರೆ ಬೇರೆ ದಾರಿ ಇಲ್ಲವಲ್ಲ ಹೀಗೆ ಮಾಡದೇ ಹೋದರೆ ಇಡೀ ಆರ್ಥಿಕವೇ ಕುಸಿದು ಬೀಳುತ್ತದೆ.

ಬೇರೆ ದಾರಿ ನಿಜವಾಗಿಯೂ ಇಲ್ಲವೇ?

ಉದಾರೀಕರಣವಾದಿಗಳ ಈ ತರ್ಕ ನಿಮಗೂ ಸರಿ ಎನಿಸಿರಬಹುದಲ್ಲವೇ? ಇದು ಆಳುವ ವರ್ಗದ ಕಣ್ಕಟ್ಟು. ಸಮಾಜವಾದದ ದಾರಿಯ ಬಗ್ಗೆ ಮಾತನಾಡುವುದು ಬೇಡ. ಬಂಡವಾಳಶಾಹಿ ಪದ್ಧತಿಯಲ್ಲೇ ಬೇರೆ ಸಂಪನ್ಮೂಲಗಳಿವೆ. ಜನಸಾಮಾನ್ಯರ ಮೇಲೆ ಹೊರೆ ಹೇರದೆ ಈ ಕೊರತೆಗಳನ್ನು ನೀಗಿಸುವ ದಾರಿಗಳಿವೆ. ಆದರೆ ಈ ದಾರಿಗಳನ್ನು ಬಳಸುವ ಸಂಕಲ್ಪ ಇರಬೇಕು. ಅಷ್ಟೇ.

ಸಂಪನ್ಮೂಲ ಸಂಗ್ರಹಣೆ ಯಾವ ಉದ್ದೇಶಕ್ಕೆ?

ಇದು ಬಹಳ ಮುಖ್ಯವಾದ ಪ್ರಶ್ನೆ. ಯಾಕೆಂದರೆ ಕೊರತೆಗಳ ಮೂಲಕ ಸಂಪನ್ಮೂಲ ಸಂಗ್ರಹಣೆ ಮಾಡಿದರೆ ಅದರಿಂದ ಆ ಪ್ರಮಾಣದಲ್ಲಿ ಉತ್ಪಾದನೆ ಹೆಚ್ಚಾಗುವಂತಿದ್ದರೆ ಅದು ಕೆಟ್ಟದ್ದೇನೂ ಅಲ್ಲವಲ್ಲ. ಆದರೆ ಸರಕಾರಿ ವ್ಯರ್ಥ ಖರ್ಚುಗಳಿಗೆ ಈ ಸಂಪನ್ಮೂಲ ಬಳಕೆ ಆಗುವುದಿದ್ದರೆ ಅದರಿಂದ ಸಮಾಜಕ್ಕೆ ಪ್ರಯೋಜನವೇನೂ ಇಲ್ಲ. ಕೊರತೆಯನ್ನು ಒಂದು ಸಂಪನ್ಮೂಲ ಎಂದು ತೆಗೆದುಕೊಳ್ಳುವುದೆಂದರೆ ಸರಕಾರ ಉತ್ಪಾದನೆಗಿಂತ ಹೆಚ್ಚು ಹಣವನ್ನು ಮುದ್ರಿಸಿ ಆ ಮೂಲಕ ಸಾಲ ಪಡೆದಂತೆ. ಈ ಸಾಲದಿಂದ ಉತ್ಪಾದನೆ ಹೆಚ್ಚುವಂತಾದರೆ ಸಾಲ ತೀರುತ್ತದೆ. ಇದರಿಂದ ಅಭಿವೃದ್ಧಿ ಆಗುತ್ತದೆ. ಆದ್ದರಿಂದಲೇ ಸಂಪನ್ಮೂಲದ ಸರಿಯಾದ ಬಳಕೆ ಅವಶ್ಯ ಎನ್ನುವುದು.

ಇದಕ್ಕೆ ವಿರುದ್ಧವಾಗಿ ಬಳಕೆ ಉತ್ಪಾದಕ ಕಾರ್ಯಕ್ರಮಗಳಿಗೆ ಆಗದೇ ಹೋದಾಗ ಅದರಿಂದ ಹಣದುಬ್ಬರ ತೀವ್ರವಾಗಿ ಏರಿ ಬೆಲೆ ಏರಿಕೆಯಿಂದ ಜನ ಸಾಮಾನ್ಯರು ತತ್ತರಿಸುವಂತಾಗುತ್ತದೆ.

ಹಾನಿಕಾರಕ ನೀತಿ

ಈ ಮೇಲಿನ ತಿಳುವಳಿಕೆ/ಸಂಕಲ್ಪ ಇದ್ದರೆ ಸರಿಯಾದ ನೀತಿಯನ್ನು ಸರಕಾರಗಳು ರೂಪಿಸಿ ಜಾರಿಗೆ ತರುವುದು ಸಾಧ್ಯವಾಗುತ್ತದೆ. ಆದರೆ ಬಂಡವಾಳಿಗ ಮಾಲಕರ ಪರವಾಗಿರುವ ಸರಕಾರ ಒಂದು ಬಜೆಟ್ಟಿನಲ್ಲಿ ಕೊರತೆಗಳನ್ನು ಹೇಗಾದರೂ ನೀಗಿಸುವ ನೀತಿ ಅನುಸರಿಸುತ್ತದೆ.

ಕೊರತೆಗಳ ಪ್ರಮಾಣವನ್ನು ನೋಡುವುದಾದರೆ ಹಿಂದಿನ ಸಾಲಗಳ ಮರುಪಾವತಿಗೆ 85000 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಪೆಟ್ರೋಲಿಯಂ ಉತ್ಪನ್ನಗಳನ್ನು ಹೆಚ್ಚಿನ ಬೆಲೆಗೆ ಆಮದು ಮಾಡಿಕೊಂಡು ಕಡಿಮೆ ಬೆಲೆಗೆ ಮಾರುವುದರಿಂದ 20000 ಕೋಟಿ ರೂಪಾಯಿಗಳ ಕೊರತೆ ಉಂಟಾಗುತ್ತದೆ. ಐದನೇ ವೇತನ ಆಯೋಗದ ವರದಿಯನ್ನು ಜಾರಿಗೆ ತರ ಹೊರಟರೆ ಇನ್ನೂ 12000 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದಲ್ಲದೆ ಸಿಪಿಐ(ಎಂ)ನ ಮುಖ್ಯ ಒತ್ತಾಯವಾದ ಸರ್ವರಿಗೂ ಶಿಕ್ಷಣ ಕಾರ್ಯರೂಪಕ್ಕೆ ತರಹೊರಟರೆ ಇನ್ನೂ 9000 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವೆಲ್ಲವನ್ನೂ ಸೇರಿಸಿದರೆ ಸುಮಾರು 126000 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಸಂಪನ್ಮೂಲಗಳೆಲ್ಲಿ?

ಸರಕಾರ ಈಗ ಅನುಸರಿಸುತ್ತಿರುವ ನೀತಿಯೆಂದರೆ ಸಕ್ಕರೆಯಿಂದ ಕೊರತೆ ಉಂಟಾದರೆ ಸಕ್ಕರೆ ಬೆಲೆ ಏರಿಸಿ ಜನ ಸಾಮಾನ್ಯರ ಹೆಗಲಿಗೆ ಆ ಭಾರ ಹೇರುವುದು. ಹಾಗೆಯೇ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ .

ಸಿಪಿಐ(ಎಂ) ಹೇಳುತ್ತಿರುವುದು ಇದನ್ನು ಮಾಡಬೇಡಿ. ಏಕೆಂದರೆ ಬಡ ಜನಸಾಮಾನ್ಯ ಇದರಿಂದ ಇನ್ನೂ ನಲುಗುತ್ತಾನೆ. ಆದಾಯ ಹೆಚ್ಚದೇ ಇರುವಾಗ ಹೊರೆ ಹೆಚ್ಚಾದರೆ ಒಂದು ಹೊತ್ತಿನ ಊಟ ಮಾಡುತ್ತಿರುವಾತ ಅದೂ ಇಲ್ಲದೆ ಉಪವಾಸ ಬೀಳುತ್ತಾನೆ. ಮೈ ಮುಚ್ಚಿಕೊಳ್ಳಲು ಒಂದೇ ಜೊತೆ ಬಟ್ಟೆ ಇರುವಾತ ಅದೂ ಇಲ್ಲದೇ ನಗ್ನನಾಗಬೇಕಾಗುತ್ತದೆ. ಆದ್ದರಿಂದ ಬೇರೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಯಾರು ಬಲಿಷ್ಟರೋ ಅವರ ಮೇಲೆ ಹೊರೆ ಹೇರಿ ಎಂದು.

ಬದಲೀ ಸಂಪನ್ಮೂಲಗಳೇನು

ಬೇರೆ ಸಂಪನ್ಮೂಲಗಳೇ ಇಲ್ಲವೆನ್ನುತ್ತಾರಲ್ಲ,(ಸಂಯುಕ್ತರಂಗ ಸರಕಾರದ ಮಂದಿಯೂ ಸಹ) ನಾವು ಸಂಪನ್ಮೂಲಗಳನ್ನು ತೋರಿಸಿದರೆ ಬಳಸಿಕೊಳ್ಳುತ್ತಾರಾ? ವರ್ಗಾಸಕ್ತಿ ಅಡ್ಡ ಬರುತ್ತದೆ.

ಏನು ಈ ಸಂಪನ್ಮೂಲಗಳು?

1. ಕೃಷಿ ಒಂದು ಮುಖ್ಯ ಸಂಪನ್ಮೂಲ. ದೇಶದ ಒಟ್ಟುತ್ಪಾದನೆಯ ಶೇ 40 ಭಾಗ ಕೃಷಿಯಿಂದ ಬರುತ್ತದೆ. ಆದರೆ ಈ ವಲಯದ ಮೇಲೆ ತೆರಿಗೆಯೇ ಇಲ್ಲವೆನ್ನಬಹುದು. ಕೃಷಿಯ ಹೆಸರಿನಲ್ಲಿ ಏನು ಮಾಡಿದರೂ ತೆರಿಗೆಯಿಲ್ಲ. ಕೃಷಿಕರೆಲ್ಲರ ಮೇಲೆ ತೆರಿಗೆ ಹೇರ ಬೇಕೆಂದೇನಿಲ್ಲ. ಆದರೆ ಮೇಲಿನ ಶೇ 20 ರಷ್ಟು ಮಂದಿಯಂತೂ ಶ್ರೀಮಂತರೇ. ಅವರ ಮೇಲೆ ತೆರಿಗೆ ಹೇರಿ ಭೂ ಹಿಡುವಳಿ, ಆದಾಯ ಇವ್ಯಾವುದರ ಆಧಾರದ ಮೇಲೆ ತೆರಿಗೆ ಹೇರಿದರೂ ಆಯಿತು.

2. ಲಾಭ ಮಾಡುತ್ತಿರುವ ಕಂಪನಿಗಳ ಮೇಲೆ ತೆರಿಗೆ ಹೇರಲೇ ಬೇಕು. ಕನಿಷ್ಠ ಪರ್ಯಾಯ ತೆರಿಗೆ ಎಂಬ ತಪ್ಪೊಪ್ಪಿಗೆ ತೆರಿಗೆ ಹಾಕಬೇಕಾದದ್ದಿಲ್ಲ. ಪೂರ್ಣ ಪ್ರಮಾಣದಲ್ಲಿ ತೆರಿಗೆ ಹೇರಬೇಕು.


ಕಂಪನಿಗಳು ಹೇಗೆ ತೆರಿಗೆ ತಪ್ಪಿಸುತ್ತವೆ ಎಂಬುದಕ್ಕೆ ರಿಲೈನ್ಸ್ ಕಂಪನಿ ಒಂದು ನಿದರ್ಶನ. ಈ ಕಂಪನಿ ಇಂದಿನವರೆಗೂ ತೆರಿಗೆ ತೆತ್ತಿಲ್ಲ. ಈ ವರ್ಷವೂ ಅದು ತೆರಿಗೆ ತೆರುವ ಲಕ್ಷಣಗಳಿಲ್ಲ.(ಕನಿಷ್ಟ ಪರ್ಯಾಯ ತೆರಿಗೆ ಇದ್ದರೂ) ಕಳೆದ ವರ್ಷ ಈ ಕಂಪನಿಯ ಲಾಭದ ಪ್ರಮಾಣ 1335.52 ಕೋಟಿ ರೂಪಾಯಿಗಳು!! ಈ ವರ್ಷವೂ ಲಾಭದ ಪ್ರಮಾಣ ಕನಿಷ್ಟವೆಂದರೂ ಹಿಂದಿನ ವರ್ಷದಷ್ಟೇ ಇರುತ್ತದೆ. ಹಾಗಿದ್ದರೂ ಅದು ತೆರಿಗೆ ತೆರುವ ಲಕ್ಷಣವಿಲ್ಲವೆಂದರೆ ಕಂಪನಿಗಳು ಎಂತಹ ತೆರಿಗೆ ಗಳ್ಳರು ಎಂಬುದು ಗೊತ್ತಾಗುತ್ತದೆ. ಇಂತಹ ಹಲವಾರು ಕಂಪನಿಗಳಿವೆ. ಅವುಗಳ ಮೇಲೆ ತೆರಿಗೆ ಹೇರಬೇಕು.

3. ಬ್ಯಾಂಕಿಂಗ್ ವಲಯದಿಂದ ಸುಮಾರು 40,000 ಕೋಟಿ ರೂಪಾಯಿಗಳ ಸಾಲ ವಜಾ ಮಾಡಲಾಗಿದೆಯಂತೆ. ಇದರ ಮೂರನೇ ಒಂದು ಭಾಗ ದೇಶದ 15 ಔದ್ಯಮಿಕ ಗುಂಪುಗಳಿಗೆ ಸೇರಿದ್ದು. ಸರಕಾರ ತನ್ನ ಅಧಿಕಾರ ಚಲಾಯಿಸಿ ಆ ಹಣವನ್ನು ವಸೂಲಿ ಮಾಡಬಹುದು.

4. ಭಾರತದ ಉದ್ಯಮಪತಿಗಳು ದೇಶದ ಹಣವನ್ನು ಹೊರಗೆ ಕಳುಹಿಸಿ ವಿದೇಶೀ ಬ್ಯಾಂಕುಗಳಲ್ಲಿ ಇರಿಸಿದ್ದಾರೆ. ಹವಾಲದ ಮೂಲಕ ಮಾಡಿರುವ ಈ ಅಕ್ರಮದಿಂದಾಗಿ ನೂರಾರು ಕೋಟಿ ಡಾಲರುಗಳಷ್ಟು ಹಣ ವಿದೇಶಗಳಿಗೆ ಹರಿದು ಹೋಗಿದೆ. ಈ ಹಣವನ್ನು ಪತ್ತೆ ಹಚ್ಚಿ ಹಿಡಿದರೆ ಅದು 36,000 ಕೋಟಿ ರೂಪಾಯಿಗಳಿಗೂ ಹೆಚ್ಚಾಗುವ ನಿರೀಕ್ಷೆ ಇದೆಯಂತೆ.

5. ಇದಲ್ಲದೆ ದೇಶದೊಳಗೆ ಅಪಾರವಾದ ಕಪ್ಪು ಹಣವಿದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಕಪ್ಪು ಹಣವನ್ನು ಹೊರಗೆಳೆದರೆ ಸಂಪನ್ಮೂಲಗಳ ಕೊರತೆ ಇರುವುದೇ ಇಲ್ಲ.

ಆದರೆ ಸಂಯುಕ್ತ ರಂಗ ಸರಕಾರಕ್ಕೂ ಈ ಕ್ರಮಗಳನ್ನು ಕೈಗೊಳ್ಳುವ ಧೈರ್ಯ, ರಾಜಕೀಯ ಸಂಕಲ್ಪ ಇಲ್ಲ. ಆದ್ದರಿಂದ ಸದ್ಯದಲ್ಲೇ ಅದು ತೈಲಖಾತೆಯಲ್ಲಿ 20,000 ಕೋಟಿ ರೂಪಾಯಿಗಳ ಕೊರತೆ ಇದೆ. ಇದನ್ನು ನೀಗಿಸಲು ಪೆಟ್ರೋಲಿಯಂ ಬೆಲೆಗಳನ್ನು ಹೆಚ್ಚಿಸಲೇಬೇಕಾಗಿದೆ ಎನ್ನುತ್ತದೆ. ಸದ್ಯದಲ್ಲೇ ರೂಪಾಯಿಯ ಅಪಮೌಲ್ಯೀಕರಣವೂ ಆಗಬಹುದು. ಒಟ್ಟಾರೆಯಾಗಿ ಶ್ರೀಮಂತರ ಐಭೋಗದ ಬೆಲೆಯನ್ನು ಸಾರಸಗಟಾಗಿ ಜನ ಸಾಮಾನ್ಯರ(ದುಡಿವ ಜನರ) ಹೆಗಲಿಗೆ ಹೇರುವ ಹುನ್ನಾರ ಸರಕಾರದ್ದು. ಸಂಪನ್ಮೂಲಗಳ ಕೊರತೆ ಇದೆಯೋ ಇಲ್ಲವೋ? ನೀವೇ ಹೇಳಿ.



ಎಕನಾಮಿಕ್ ಟೈಮ್ಸ್‌ನಲ್ಲಿ ಸಲಾಂರವರ ವ್ಯಂಗ್ಯ

ಕೊರತೆ-ಕೊರತೆಯೆಂದು ಕೊರಗುವ ಸರಕಾರಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಪುಟ 1ರಿಂದ

ನೀತಿಗಳನ್ನು ಮಾತ್ರ ಬಹಳ ಮುತುವರ್ಜಿಯಿಂದ ಅನುಸರಿಸುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಟೀಕಿಸಿದೆ. ಸಂಯುಕ್ತ ರಂಗ ಸರಕಾರದ ಆರ್ಥಿಕ ನೀತಿಗಳ ಬಗ್ಗೆ ತನ್ನ ಬಲವಾದ ಆಕ್ಷೇಪವನ್ನು ವ್ಯಕ್ತಪಡಿಸಿದೆ.

ಕಳೆದ ಮೂರು ತಿಂಗಳಲ್ಲಿ ಹಲವು ವಲಯಗಳಲ್ಲಿ ಖಾಸಗೀಕರಣದತ್ತ ಒತ್ತನ್ನು ತೀವ್ರಗೊಳಿಸಲಾಗಿದೆ, ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸಲು ಯಾವುದೇ ಕ್ರಮಗಳಿಲ್ಲ. ವಿಶ್ವವ್ಯಾಪಾರ ಸಂಘಟನೆಯ ಒತ್ತಡಗಳಿಗೆ ಬಲಿಬಿದ್ದು ಆಮದು ಉದಾರೀಕರಣ ಮಾಡಲಾಗಿದೆ.

ಖಾಸಗೀಕರಣದ ಭರದ ಪ್ರಯತ್ನದಲ್ಲಿ ಈಗ ವಿಮಾ ಉದ್ದಿಮೆ ಪ್ರಧಾನ ಗುರಿಯಾಗಿದೆ. ಕಲ್ಲಿದ್ದಲು ಉದ್ದಿಮೆಯನ್ನು ಈಗ ಖಾಸಗಿಯವರಿಗೆ ತೆರೆಯಲಾಗಿದೆ, ವಿದ್ಯುತ್ ವಿತರಣೆಯನ್ನೂ ಖಾಸಗಿಯವರಿಗೆ ತೆರೆಯಲಾಗಿದೆ. ಈಗ ಅಣುಶಕ್ತಿ ವಲಯವನ್ನೂ ಕೂಡಾ ವಿದೇಶೀ ಕಂಪನಿಗಳಿಗೆ ತೆರೆಯುವ ಯೋಜನೆ ಇದೆಯಂತೆ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ.

ಮೆಕ್ಸಿಕೋ ಅನುಭವಕ್ಕೆ ಕುರುಡಾಗಿರುವ ಹಣಕಾಸು ಇಲಾಖೆ

ನೇರ ವಿದೇಶೀ ಹೂಡಿಕೆಯ ವಲಯದಲ್ಲಿ 51%ದವರೆಗೆ ಇಕ್ವಿಟಿಯೊಂದಿಗೆ ಯಾವುದೇ ನಿರ್ಬಂಧವಿಲ್ಲದೆ ವಿದೇಶೀ ಪ್ರವೇಶಕ್ಕೆ ಅವಕಾಶ ನೀಡುವ ವಲಯಗಳ ಪಟ್ಟಿಯಲ್ಲಿ ಇನ್ನೂ 16 ಉದ್ದಿಮೆಗಳನ್ನು ದೇವೇಗೌಡ ಸರಕಾರ ಸೇರಿಸಿದೆ. ಮೂಲವಲಯದ ಒಂಭತ್ತು ಉದ್ದಿಮೆಗಳಲ್ಲಿ ಇಕ್ವಿಟಿ ಮಿತಿಯನ್ನು 51%ದಿಂದ 74% ಕ್ಕೇರಿಸಿದೆ. ಈಗ ದೊಡ್ಡ ಬಂಡವಾಳಿಗರ ಒತ್ತಾಯಕ್ಕೆ ಮಣಿದು ವಿದೇಶೀ ವಿನಿಮಯ ಹತೋಟಿ ಶಾಸನ 'ಫೆರಾ'ವನ್ನು ಇನ್ನಷ್ಟು ದುರ್ಬಲಗೊಳಿಸಲು ಮುಂದಾಗಿದೆ.

ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದದ ಚೌಕಟ್ಟಿನಲ್ಲಿ ಭಾರತ ಸರಕಾರ ಆಮದಿನ ಉದಾರೀಕರಣವನ್ನು ಮುಂದುವರಿಸುತ್ತಿದೆ. ಆಮದುಗಳ ಪ್ರಮಾಣದ ಮೇಲಿನ ಮಿತಿಯನ್ನು ತೆಗೆದುಹಾಕಲು ಒಪ್ಪಿದೆ. ಇತ್ತೀಚೆಗೆ ವಾಣಿಜ್ಯ ಸಚಿವಾಲಯ 162 ಐಟಂಗಳ ಆಮದಿನ ಉದಾರೀಕರಣವನ್ನು ಪ್ರಕಟಿಸಿದೆ. ಇವುಗಳಲ್ಲಿ ಬಹಳಷ್ಟು ಐಷಾರಾಮದ ಸಾಮಾಗ್ರಿಗಳು-ಕಾರುಗಳು, ಏರ್ ಕಂಡಿಷನರ್‌ಗಳು, ಸುಗಂಧ ದ್ರವ್ಯಗಳು ಮತ್ತು ಸೌಂದರ್ಯ ವರ್ಧಕಗಳು ಇತ್ಯಾದಿ. ಇದು ಐಎಂಎಫ್-ವಿಶ್ವಬ್ಯಾಂಕ್‌ನ ಒತ್ತಾಯಗಳಿಗೆ ಅನುಗುಣವಾಗಿರುವ ನೀತಿ ಎಂದು ಸಿಪಿಐ(ಎಂ) ಟೀಕಿಸಿದೆ.

ಬಂಡವಾಳ ಖಾತೆಯ ಸಂಪೂರ್ಣ ಪರಿವರ್ತನೆಯತ್ತ ಸಾಗುವ ಅಪಾಯಗಳ ಅರಿವೇ ಸಂಯುಕ್ತ ರಂಗ ಸರಕಾರಕ್ಕೆ ಇದ್ದಂತಿಲ್ಲ. ದೊಡ್ಡ ಪ್ರಮಾಣದಲ್ಲಿ ವಿದೇಶಿ ಬಂಡವಾಳ ವಾಪಾಸು ಹೋಗಿ ಮೆಕ್ಸಿಕೋಗಾದ ವಿನಾಶಕಾರಿ ಅನುಭವವನ್ನು ಕಾಣದ ಹಣಕಾಸು ಇಲಾಖೆ ಈ ನೀತಿಯನ್ನು ಮುಂದುವರಿಸುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ತೀವ್ರ ಖೇದ ವ್ಯಕ್ತಪಡಿಸಿದೆ.

ವಿಮಾ ವಲಯದಲ್ಲಿ ಖಾಸಗಿ ಕಂಪನಿಗಳ ಪ್ರವೇಶಕ್ಕೆ ಸಿಪಿಐ(ಎಂ) ದೃಢ ವಿರೋಧವನ್ನು ಪುನರುಚ್ಛರಿಸಿದೆ. ವಿದೇಶೀ ಕಂಪನಿಗಳು ದೇಶೀ ಕಂಪನಿಗಳೊಂದಿಗೆ ಸೇರಿಕೊಂಡು ಪ್ರವೇಶಿಸುತ್ತವೆ. ಈಗ ಎಲ್‌ಐಸಿ ಮತ್ತು ಜಿಐಸಿಗಳ ಮೂಲಕ ಉತ್ಪನ್ನಗೊಳ್ಳುವ ಅಪಾರ ಹಣ ಸಾರ್ವಜನಿಕ ಹೂಡಿಕೆಗೆ ದೊರೆಯುತ್ತಿದೆ. ವಿಮಾ ರಂಗವನ್ನು ತೆರೆದರೆ ಇದು ಖಾಸಗಿ ಉದ್ದಿಮೆಗಳತ್ತ ಹೋಗುತ್ತದೆ ಹಾಗೂ ಲಾಭದ ರೂಪದಲ್ಲಿ ವಿದೇಶಗಳಿಗೆ ವರ್ಗಾವಣೆಯಾಗುತ್ತದೆ ಎಂದು ಎಚ್ಚರಿಸಿರುವ ಸಿಪಿಐ(ಎಂ) ಸರಕಾರ ಈ ದಾರಿಯಲ್ಲಿ ಸಾಗದಂತೆ ಮಾಡಲು ಇತರ ರಾಜಕೀಯ ಪಕ್ಷಗಳನ್ನು ಎಡಪಕ್ಷಗಳು ಅಣಿನೆರೆಸಬೇಕು ಎಂದು ಕರೆ ನೀಡಿವೆ.

ಪರ್ಯಾಯ ಆರ್ಥಿಕ ನೀತಿಗಳಿಗಾಗಿ ಅಖಿಲ ಭಾರತ ಆಂದೋಲನ

ಜನಗಳಿಗೆ ತೊಂದರೆಯುಂಟು ಮಾಡುವ ಆರ್ಥಿಕ ನೀತಿಗಳ ಹಿನ್ನೆಲೆಯಲ್ಲಿ ಪಕ್ಷ ಜನಗಳ ಹಿತಗಳನ್ನು ರಕ್ಷಿಸಲು ಸಾಮೂಹಿಕ ಹೋರಾಟಗಳನ್ನು ಆರಂಭಿಸಬೇಕು. ಇತರ ಎಡ-ಪ್ರಜಾಪ್ರಭುತ್ವವಾದೀ ಶಕ್ತಿ ಗಳೊಂದಿಗೆ ಸೇರಿಕೊಂಡು ಪ್ರಕ್ಷೋಭೆಯನ್ನು ನಡೆಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ. ಈ ದೃಷ್ಟಿಯಿಂದ ಈ ಕೆಳಗಿನ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಲು ಸಿಪಿಐ(ಎಂ) ನಿರ್ಧರಿಸಿದೆ.

- ● ಸಂಯುಕ್ತ ರಂಗ 'ಸಮಾನ ಕನಿಷ್ಠ ಕಾರ್ಯಕ್ರಮ'ದಲ್ಲಿ ನೀಡಿದ ವಚನಗಳ ಈಡೇರಿಕೆಗೆ ಒತ್ತಾಯಿಸಬೇಕು.
- ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು.
- ಕೇಂದ್ರೀಯ ಕೃಷಿ ಕೂಲಿಕಾರರ ಮಸೂದೆಯ ಅಂಗೀಕಾರ
- ಸಾರ್ವಜನಿಕ ವಲಯದ ಘಟಕಗಳನ್ನು ಬಲಪಡಿಸಬೇಕು.
- ಭೂಸುಧಾರಣೆಗಳ ಅನುಷ್ಠಾನ- ಆದಿವಾಸಿಗಳ ಜಮೀನು ಅವರಿಗೇ ಮತ್ತ ಸಲ್ಲುವಂತೆ ಮಾಡುವುದು.
- ಆರೋಗ್ಯ, ಶಿಕ್ಷಣ ಮತ್ತು ಕುಡಿಯುವ ನೀರಿನಂತಹ ಕನಿಷ್ಟ ಅಗತ್ಯಗಳಿಗೆ ಹೆಚ್ಚಿನ ಹಣ ನೀಡಿಕೆ.
- ಮೂಲ ಸೌಕರ್ಯ ವಲಯ ಮತ್ತು ಕೃಷಿ ವಲಯದಲ್ಲಿ ಹೆಚ್ಚಿನ ಸಾರ್ವಜನಿಕ ಬಂಡವಾಳ ಹೂಡಿಕೆ
- ಮಹಿಳೆಯರಿಗೆ ಮೀಸಲಾತಿ ಮಸೂದೆಯ ಅಂಗೀಕಾರ
- ಪರಿಷ್ಕೃತ ಲೋಕಪಾಲ್ ಮಸೂದೆಯ ಅಂಗೀಕಾರ
- ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ವಿಕೇಂದ್ರೀಕರಣ
- ಗುಪ್ತ ಮತದಾನದಿಂದ ಕಾರ್ಮಿಕ ಸಂಘಕ್ಕೆ ಮಾನ್ಯತೆ.

● ಬೆಲೆ ಏರಿಕೆ, ವಿಮಾ ರಂಗದ ಖಾಸಗೀಕರಣ, ಸಾರ್ವಜನಿಕ ವಲಯದ ರಕ್ಷಣೆ, ಉದ್ಯೋಗಾವಕಾಶಗಳ ರಕ್ಷಣೆ, ರೋಗಗ್ರಸ್ತ ಉದ್ದಿಮೆಗಳ ಪುನರುಜ್ಜೀವನ ಹಾಗೂ ಭೂ ಸುಧಾರಣೆಗಳ ಜಾರಿಗಾಗಿ ಒಂದು ರಾಷ್ಟ್ರೀಯ ಆಂದೋಲನವನ್ನು ಸಿಪಿಐ(ಎಂ) ಆರಂಭಿಸಲಿದೆ.

ಈ ಅಖಿಲ ಭಾರತ ಆಂದೋಲನದ ನಿರ್ದಿಷ್ಟ ಯೋಜನೆಗಳನ್ನು ರೂಪಿಸಲು ಸಿಪಿಐ(ಎಂ) ಕೇಂದ್ರ ಸಮಿತಿ ಪೊಲಿಟ್ ಬ್ಯೂರೋಗೆ ಅಧಿಕಾರ ನೀಡಿದೆ.

ಮಾರ್ಚ್ 27ರಂದು ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ರಸ್ತೆ ತಡೆ, ರೈಲು ತಡೆ ಕರೆಗೆ ಹಾಗೂ ಏಪ್ರಿಲ್ 2ರಂದು ಸಾರ್ವಜನಿಕ ವಲಯದ ಸಂಘಗಳ ಒಂದು ದಿನದ ಮುಷ್ಕರದ ಕರೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಬೆಂಬಲ ವ್ಯಕ್ತಪಡಿಸುತ್ತಾ ಈ ಕಾರ್ಯಕ್ರಮಗಳ ಯಶಸ್ಸಿಗೆ ಸಕ್ರಿಯವಾಗಿ ಶ್ರಮಿಸಬೇಕು ಎಂದುತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕಾ ಹೇಳಿಕೆಯಲ್ಲಿರುವ ಇತರ ಅಂಶಗಳು ಹೀಗಿವೆ. ಭೋಫೋರ್ಸ್ ಹಗರಣ: ಎಲ್ಲಾ ಉನ್ನತ ಮಟ್ಟದ ಭ್ರಷ್ಟಚಾರಗಳ ತನಿಖೆಯಾಗಬೇಕು, ತಪ್ಪಿತಸ್ಥರು ಯಾರೇ ಆಗಲಿ ಅವರನ್ನು ಶಿಕ್ಷೆಗೊಳಪಡಿಸಬೇಕು ಎಂದು ತನ್ನ ನಿಲುವನ್ನು ಸಿಪಿಐ(ಎಂ) ಪುನರುಚ್ಛರಿಸಿದೆ. ಸತೀಶ್ ಶರ್ಮಾ ವ್ಯವಹಾರ, ಐಟಿಸಿ ಹಗರಣ, ತಮಿಳುನಾಡಿನಲ್ಲಿ ಜಯಲಲಿತಾ ವಿರುದ್ಧ ಕೇಸುಗಳು ಇವೆಲ್ಲಾ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಎಷ್ಟು ವ್ಯಾಪಕವಾಗಿದೆ ಹಾಗೂ ಆಳವಾಗಿ ಕೊರೆಯುತ್ತಿದೆ ಎಂಬುದರ ಸೂಚನೆಗಳು ಎಂದಿರುವ ಸಿಪಿಐ(ಎಂ) ಸ್ವಿಸ್ ಬ್ಯಾಂಕ್ ದಾಖಲೆಗಳು ದೊರೆತಿರುವುದು ಭೋಫೋರ್ಸ್ ಕೇಸಿನ ತನಿಖೆಯ ಮುನ್ನಡೆಯಲ್ಲಿ ಪ್ರಮುಖ ಹೆಜ್ಜೆ ಎಂದು ಅಭಿಪ್ರಾಯಪಟ್ಟಿದೆ. ಈ ಹಗರಣವನ್ನು ಮುಚ್ಚಿಹಾಕುವ ಪ್ರಯತ್ನ ಪದೆ- ಪದೇ ನಡೆದಿದೆ. ಹಿಂದಿನ ಕಾಂಗ್ರೆಸ್ ಸರಕಾರಗಳು ಈ ತನಿಖೆಯಲ್ಲಿ ತಡೆಯೊಡ್ಡುತ್ತಾ ಬಂದಿದ್ದವು ಈ ಲಂಚದ ಫಲಾನುಭವಿ ಗಳಾದ ಕ್ವಟ್ರೋಚಿ

ಸಿಪಿಐ(ಎಂ) ಈಗಲೂ ಸಂಯುಕ್ತ ರಂಗದ ಭಾಗವೇ ಆಗಿದೆ. ಏಕೆಂದರೆ ಕೋಮುವಾದಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಗಿಟ್ಟಿಸುವ ಅಪಾಯ ಇನ್ನೂ ಕಮ್ಮಿಯಾಗಿಲ್ಲ. ಅದೇ ವೇಳೆಗೆ ಸಂಯುಕ್ತ ರಂಗ ಸರಕಾರ ತನ್ನ ಆದ್ಯತೆಗಳನ್ನು ಬದಲಿಸಿ ಜನಪರ ದಿಕ್ಕಿನಲ್ಲಿ ಸಾಗುವಂತೆ ಮಾಡಲು ಸಿಪಿಐ(ಎಂ) ಚಳುವಳಿಗಳನ್ನು ಆರಂಭಿಸುತ್ತದೆ ಮತ್ತು ಜನಗಳನ್ನು ಅಣಿನೆರೆಸುತ್ತದೆ ಎಂದು ಸುರ್ಜಿತ್ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸ್ಪಷ್ಟಪಡಿಸಿದರು.

ಕಾಡುತಾವ ಕೊರತೆಯ ಭೂತಗಳು

ಕೇಂದ್ರ ಸರ್ಕಾರವನ್ನು ಕೊರತೆಯ ಭೂತಗಳು ಕಾಡುತ್ತಿವೆ. ಬಜೆಟ್ಟಿನ ಈ ಸಮಯದಲ್ಲಿ ಮುಖ್ಯವಾಗಿ ಕಾಡುತ್ತಿರುವುದು ಬಜೆಟ್ ಕೊರತೆಯ ಭೂತ ಅಲ್ಲ, ಐ ಎಂ ಎಫ್ ವಿಶ್ವ ಬ್ಯಾಂಕುಗಳ ಕೆಂಡದಂತಹ ಕಣ್ಣು. ಇಲ್ಲಿ ಚುನಾವಣೆ ಆಧಿಕಾರಗಳ ಕಣ್ಣು ಬಜೆಟ್ ಕೊರತೆ ಮಾಯೆಯಾಗಿ ಕಾಡುತ್ತಿದೆ ಈ ಬೂರ್ಝ್ವಾ ಸರ್ಕಾರಗಳನ್ನು.

ಸಂಯುಕ್ತರಂಗ ಸರಕಾರ ಬಜೆಟ್ ಕೊರತೆಯನ್ನು ಅತಿ ಕಡಿಮೆ ಮಟ್ಟಕ್ಕೆ ತರುವ ಗುರಿಯನ್ನು ಹೊಂದಿತ್ತು. ಆದರೆ ಕೊರತೆ 6916 ಕೋಟಿ ರೂಪಾಯಿಗಳಷ್ಟು ಹೆಚ್ಚಿದೆ.

ಇದು ಒಂದೆಡೆಯಾದರೆ ದೇಶದಲ್ಲಿ ಔದ್ಯಮಿಕ ಬೆಳವಣಿಗೆಯೂ ಕುಂಟಿತಗೊಂಡಿದೆ. ಬಡ್ಡಿ ದರ ಮೇಲೇ ಉಳಿದಿದೆ. ರಫ್ತು ಬೆಳವಣಿಗೆ ಹೆಚ್ಚಾಗಲೇ ಇಲ್ಲ. ಬಜೆಟ್ಟಿಗೆ ಪೂರ್ವಬಾವಿಯಾಗಿ ಆರ್ಥಿಕ ಪರಿಸ್ಥಿತಿಯ ಅವಲೋಕನ ಮಾಡಿದ ಭಾರತೀಯ ರಿಸರ್ವ್ ಬ್ಯಾಂಕಿಗೆ ಇವೆಲ್ಲ ಕಂಡುಬಂದಿವೆ.

ಉಳಿತಾಯದ ಪ್ರಮಾಣವೂ ಕಡಿಮೆಯಾಗಿದ್ದು ಹಾಗೇ ಉಳಿದಿದೆ. ಅಂದರೆ ಉದಾರೀಕರಣದಿಂದ ಆರ್ಥಿಕದ ಮೇಲೆ ನಕಾರಾತ್ಮಕ ಪರಿಣಾಮಗಳು ಆಗಿದ್ದು ಅವು ಹೆಚ್ಚಾಗುತ್ತಾ ನಡೆದಿವೆ ಹೊರತು ಸರಿಯಾಗುವ ಲಕ್ಷಣಗಳೇ ಇಲ್ಲ.

ಸರ್ಕಾರದ ಕೈಯಲ್ಲಿರುವ ಕೆಲವು ಕ್ಷೇತ್ರಗಳಲ್ಲಿ ನಕಾರಾತ್ಮಕ ಬೆಳವಣಿಗೆ ಇದೆ ಎನ್ನಲಾಗುತ್ತದೆ. ಉದಾಹರಣೆಗೆ ಕಾಫೀ ಉತ್ಪಾದನೆ ಹೆಚ್ಚಾಗಲಿದೆಯಂತೆ. ಖಾರಿಫ್ ಬೆಳೆಗಿಂತ ರಾಬಿ ಬೆಳೆ ಉತ್ತಮವಾಗಿರುತ್ತದೆಂಬ ನಿರೀಕ್ಷೆ ಇದೆಯಂತೆ. ಆದರೆ ಕಾಫೀ ಉತ್ಪಾದನೆ ಹೆಚ್ಚಾದರೆ ಅದಕ್ಕೆ ವಾಣಿಜ್ಯ ಬೆಳೆಗಳು ಹೆಚ್ಚು ಕೊಡುಗೆ ನೀಡುತ್ತವೂ ಆಹಾರ ದಾನ್ಯಗಳ ಕೊಡುಗೆ ಹೆಚ್ಚಿನದಿರುತ್ತದೂ ಗೊತ್ತಿಲ್ಲ. ಹೇಗೇ ಇರಲಿ ಆಹಾರ ದಾನ್ಯಗಳ ಉತ್ಪಾದನೆ ಹೆಚ್ಚೇ ಆದರೂ ಸಹ ಸರ್ಕಾರ ಆಹಾರ ದಾನ್ಯಗಳ ಆಮದು ರಫ್ತುಗಳನ್ನು ಹೇಗೆ ನಿರ್ವಹಿಸುತ್ತದೆಂದರೆ ಹೆಚ್ಚು ಬೆಳೆದರೂ ಬೆಲೆಗಳು ಹೆಚ್ಚಾಗುತ್ತವೆ. ಉಣಲು ಹಿಟ್ಟು ಶ್ರೀಮಂತರಿಗೆ ಮಾತ್ರ ಎಟಕುವಂತಾಗುತ್ತದೆ ಪೌಷ್ಟಿಕಾಂಶದ ಕೊರತೆ ಬಡವರ ಜನ್ಮಸಿದ್ದ ಹಕ್ಕು ಎಂಬಂತಾಗಿ ಬಿಡುತ್ತದೆ.

ಇಷ್ಟೆಲ್ಲ ಆಗಿಯೂ ಬಜೆಟ್ ಕೊರತೆ ಇದ್ದೆ ಇರುತ್ತದೆ. ಈ ಕೊರತೆ ಕಡಿಮೆ ಮಾಡಲು ಮತ್ತೆ ಬಡವರಿಗೆ ಅಲ್ಪಸ್ವಲ್ಪವಾದರೂ ನೆರವು ನೀಡುವ ಸಹಾಯಧನಗಳಲ್ಲಿ ಕಡಿತ ಮಾಡಲಾಗುತ್ತದೆ. ಅವಶ್ಯಕ ವಸ್ತುಗಳ ಬೆಲೆಯನ್ನು ಆಘಳಿತಾತ್ಮಕವಾಗಿ ಹೆಚ್ಚಿಸಲಾಗುತ್ತದೆ. ಶ್ರೀಮಂತರಿಗೆ ಶ್ರೀಮಂತಿಕೆಯ ಕಾವು ಹೆಚ್ಚಾಗುತ್ತದೆ. ಬಡವರಿಗೆ ಬಡತನದ ನೋವು ಹೆಚ್ಚಾಗುತ್ತದೆ. ಇದೇ ಉದಾರೀಕರಣ.

ಎನ್ರಾನ್ ಹದ್ದುಗಳು ಇನ್ನೇಳು ಹಾರಾಡುತ್ತವೆ ನಮ್ಮಾಗಸದಲ್ಲಿ

ಎನ್ರಾನ್ ಎಂಬ ಥಾಬೊಲಿನಲ್ಲಿ ಹಾರುತ್ತಿರುವ ಹದ್ದು? ಗೊತ್ತಲ್ಲ. ವಿದ್ಯುತ್ ಯೋಜನೆ ಜಾರಿಗೆ ತರುವ ಕಂಪನಿ ಎಂತೆಂತಹ ಆಟಗಳನ್ನು ಆಡಿತು ಆಡುತ್ತದೆ ಎಂಬುದೂ ಗೊತ್ತಲ್ಲವೆ? ಅದೇ ಕಂಪನಿ ಭಾರತದಲ್ಲಿ ಇನ್ನೂ ಐದರಿಂದ ಏಳು ವಿದ್ಯುತ್ ಯೋಜನೆಗಳನ್ನು ಪ್ರಾರಂಭಿಸಲಿದೆಯಂತೆ.

ವಿದ್ಯುತ್ ಉತ್ಪಾದಿಸುವ ಮೊದಲೇ ದೇಶಕ್ಕೇ ಅಘಾತ (ಶಾಕ್) ನೀಡುವ ಈ ಬಹುರಾಷ್ಟ್ರೀಯ ಕಂಪನಿ ಏಳು ಯೋಜನೆಗಳನ್ನು ಪ್ರಾರಂಭಿಸುವುದಾದರೆ ಭಾರತದ ಪರಿಸ್ಥಿತಿ ಏನಾಗಬಹುದು? ಇದನ್ನು ಸುಲಭವಾಗಿ ಊಹಿಸಿಕೊಳ್ಳಬಹುದು.

ಸುಳ್ಳು ಸುಳ್ಳೇ ಯೋಜನೆ ವೆಚ್ಚವನ್ನು ಏರಿಸಿ ಲಾಭವನ್ನು ಜೇಬಿಗಿಳಿಸುವ ಈ ಕಂಪನಿ ವಿದ್ಯುತ್ತಿನ ಬೆಲೆಯನ್ನು ಗಗನಕ್ಕೇರಿಸುತ್ತದೆ.

ಅಷ್ಟೇ ಅಲ್ಲ ದೇಶದ ಪರಿಸರವನ್ನು ಪೂರ್ತಿ ಹಾಳುಮಾಡುತ್ತದೆ. ದೇಶದ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುತ್ತದೆ. ದೇಶದ ಜನಸಮಾನ್ಯರನ್ನು ತಮ್ಮ ವಾಸ ಸ್ಥಾನದಿಂದ ಏಳಿಸಿ ಬೀದಿಗೆಳೆಯುತ್ತದೆ. ಇಂತಹ ನೂರಾರು ಕುಕೃತ್ಯಗಳನ್ನು ಗೈದು ಕೊನೆಗೂ ವಿದ್ಯುತ್ ಉತ್ಪಾದಿಸಿದರೆ ಅದನ್ನು ಅತ್ಯಂತ ಶ್ರೀಮಂತರು ಮಾತ್ರ ಬಳಸಬಹುದು. ಬಡವರು ಅಂಧಕಾರದಲ್ಲಿ ಮುಳುಗಬಹುದು. ಹದ್ದುಗಳು ಆಗಸದಲ್ಲಿ ಹಾರಾಡುತ್ತಲಿರುತ್ತವೆ.

ಮನಮೋಹಕ ಸುಳ್ಳುಗಳ ಸರದಾರರು

ಯಾರು ಎಂದಿರಾ? ಇನ್ಯಾರು? ಉದಾರೀಕರಣದ ಸರ್ಕಾರವೆಂದು ಖ್ಯಾತಿ ಪಡೆದ ಪಿ.ವಿ. ನರಸಿಂಹರಾಯರ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾಗಿ ಪ್ರಾಮಾಣಿಕತೆಯ ಪೋಸ್ ಕೊಡುತ್ತಾ ದೇಶದ ಜನಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆದ ಡಾ|| ಮನಮೋಹನಸಿಂಗರೂ ಈಗ ಕಾಂಗ್ರೆಸ್ ಪಕ್ಷದ ಆರ್ಥಿಕ ನೀತಿಗಳ ಬಗೆಗಿನ ಸಮಿತಿಯೊಂದರ ಮುಖ್ಯಸ್ಥರು ಆಗಿರುವ ಇವರು ಸಂಯುಕ್ತರಂಗ ಸರ್ಕಾರದ ಆರ್ಥಿಕ ನೀತಿಗಳನ್ನು ಕಟುವಾಗಿ ಟೀಕಿಸಿದ್ದಾರೆ.

ಉಣ್ಣುವುದಕ್ಕೆ ಸಾಲ ಪಡೆವ ಈ ನೀತಿ ದೇಶವನ್ನು ಅಧೋಗತಿಗೆ ಕೊಂಡೊಯ್ಯುತ್ತದೆ. ಸಾಲ ಪಡೆದರೆ ಅದರಿಂದ ಉತ್ಪಾದನೆ ಹೆಚ್ಚಬೇಕು. ಆದರೆ ಅದು ಆಗುತ್ತಿಲ್ಲ ಎಂದಿದ್ದಾರೆ ಅವರು.

ಸಂಯುಕ್ತರಂಗ ಸರ್ಕಾರದ ಆರ್ಥಿಕ ನೀತಿಗಳನ್ನು ಸಮರ್ಥಿಸಿಕೊಳ್ಳುವ ಅವಶ್ಯಕತೆಯೇನೂ ಇಲ್ಲ. ಯಾಕೆಂದರೆ ಈ ಸರ್ಕಾರ ಜನವಿರೋಧಿ ಆರ್ಥಿಕ ನೀತಿಗಳನ್ನು ಜಾರಿಗೆ ತರುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಮನಮೋಹನಸಿಂಗರೇ ಅಧಿಕಾರದಲ್ಲಿದ್ದಾಗ ಏನು ಮಾಡಿದರು? ಉದಾರೀಕರಣವನ್ನು ಎಡೆಬಿಡದೆ ಮಾಡಿ ಐ. ಎಂ. ಎಫ್-ವಿಶ್ವ ಬ್ಯಾಂಕುಗಳಿಂದ ಸಿಕ್ಕ ಸಿಕ್ಕ ಸಾಲವನ್ನೇ ಪಡೆದು ದೇಶವನ್ನು ಗಂಡಾಂತರದ ಪರಿಸ್ಥಿತಿಗೆ ತಳ್ಳಿದವರೇ ಅವರು.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸದೇ ಬೇರೆ ದಾರಿಯೇ ಇಲ್ಲ ಎಂಬಂತಹ ಮಾತನ್ನು ಅವರು ಹಾಡಿದ್ದಾರೆ. ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿರುವ ಈ ಮಹಾಶಯ ಸಾಮ್ರಾಜ್ಯಶಾಹಿಗಳ ದೊಡ್ಡ ಬಂಡವಾಳಗಾರರ ಸೇವೆಗಾಗಿ ಮಾತ್ರ ಜ್ಞಾನಾರ್ಜನೆ ಮಾಡಿದಂತೆ ಕಾಣುವುದಿಲ್ಲವೆ? ಎಡಪಕ್ಷಗಳ ಹಲವು ಪರ್ಯಾಯ ನೀತಿಗಳನ್ನು ಅವರು ಮಂಡಿಸಿದರೂ ಅವುಗಳನ್ನು ಅಸಡ್ಡೆಯಿಂದ ಬದಿಗೆ ಸರಿಸಿ ಆಳುವ ವರ್ಗಕ್ಕೆ ಅನುಕೂಲವಾಗುವ ನೀತಿ ಅನುಸರಿಸಿದ ಮಹಾಶಯನಿಗೆ ಈ ಸಂಯುಕ್ತರಂಗ ಸರಕಾರದ ಈ ನೀತಿಗಳನ್ನು ಟೀಕಿಸಲು ನೈತಿಕ ಹಕ್ಕಿದೆಯೆ?

ಈತನ ಉದಾರೀಕರಣದ ನೀತಿಗಳಿಂದಾಗಿಯೇ ಇವತ್ತು ರಫ್ತು ಬೆಳವಣಿಗೆ ಆಗದೇ ಔದ್ಯಮಿಕ ಬೆಳವಣಿಗೆ ಗತಿಯೂ ಕಡಿಮೆಯಾಗಿರುವುದಲ್ಲವೆ? ಗಾಜಿನ ಮನೆಯಲ್ಲಿರುವಾತ ಬೇರೆಯವರತ್ತ ಕಲ್ಲು ಎಸೆದಂತೆ ಅಲ್ಲವೆ ಈತನ ಟೀಕೆ?

ಕರ್ನಾಟಕದಲ್ಲಿ ವರ್ಷಕ್ಕೊಮ್ಮೆ ಶೇ. 13ರ ಕನ್ನ

ಇದೇನು ಶೇ13ರ ಕನ್ನ ಎಂದಿರೆ? ಹೌದು ಪ್ರತಿ ವರ್ಷ ವಿದ್ಯುತ್ ದರವನ್ನು ಶೇ 13 ರಷ್ಟು ಏರಿಸಲಾಗುವುದು. ಎಂದು ಕರ್ನಾಟಕದ ಮುಖ್ಯಮಂತ್ರಿ ಜೆ.ಹೆಚ್. ಪಟೇಲರು ಹೇಳಿದ್ದಾರೆ. ಅಂದರೆ ಪ್ರತಿ ವರ್ಷವೂ ಜನರ ಮನೆಗೆ ಕಾನೂನು ಬದ್ದ ಕನ್ನ ಹಾಕುವ ಯೋಜನೆಯಲ್ಲವೆ ಇದು?

ಈ ವರ್ಷ ಶೇ 13 ರ ವಿದ್ಯುತ್‌ದರ ಏರಿಕೆಯಿಂದಾಗಿ ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಗೆ 420 ಕೋಟಿ ರೂಪಾಯಿಗಳು ಆದಾಯ ಬರಲಿದೆಯಂತೆ. ಇದಲ್ಲದೆ ಬಳಕೆದಾರರ ಕರ್ಚಿನಲ್ಲೇ ಸರ್ಕಾರ ಹೊಸ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಲಿದೆ ಯಂತೆ ಇದು ವಿದ್ಯುತ್ ಕಳ್ಳತನವಾಗು ವುದನ್ನು ತಡೆಗಟ್ಟುವ ಕ್ರಮವಂತೆ.

ಆದರೆ ಇಷ್ಟು ವರ್ಷಗಳ ಕಾಲ ವಿದ್ಯುತ್ ಕಳ್ಳತನವಾಗುವುದನ್ನು ತಡೆವ ಕ್ರಮಗಳನ್ನೇಕೆ ಸರ್ಕಾರ ಕೈಗೊಳ್ಳಲಿಲ್ಲ? ಬಂಡವಾಳಗಾರರು ಕದ್ದು ತಿಂದದ್ದನ್ನು ಕಕ್ಕುವಂತೆ ಮಾಡುವ ಸಂಕಲ್ಪವಿಲ್ಲದ ಸರ್ಕಾರ ಜನಸಾಮಾನ್ಯರ ಹೆಗಲಿಗೆ ಈ ಭಾರವನ್ನು ದಾಟಿಸುವ ಪ್ರಯತ್ನ ಮಾಡುತ್ತದೆ. ಇದು ಪಟೇಲರ ಉದಾರೀಕರಣದ ರೀತಿಯೆ?

→

ಹಾಗೂ ವಿನ್‌ಚಡ್ಡಾರಂತವರನ್ನು ಗುರುತಿಸುವುದರೊಂದಿಗೆ ಅವರ ವಿಚಾರಣೆಗೆ ಕ್ರಮ ಕೈಗೊಳ್ಳಬೇಕು. ಆಪಾದನೆ ಪಟ್ಟಿ ಸಲ್ಲಿಸುವಲ್ಲಿ ಹಾಗೂ ತಪ್ಪಿತಸ್ಥರನ್ನು ಶಿಕ್ಷಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಇದರಲ್ಲಿ ಅಪಾದಿತರಾಗಿರುವ ರಾಜಕೀಯ ಸ್ಥಾನಮಾನ ಅಥವಾ ಪ್ರಭಾವಿ ಸಂಪರ್ಕಗಳನ್ನುಯಾವುದನ್ನೂ ಲೆಕ್ಕಿಸದೆ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಅಮೆರಿಕಾದ ಒತ್ತಡ: ರಶ್ಯಾ ಭಾರತಕ್ಕೆ ಎರಡು ಪರಮಾಣು ರಿಯಾಕ್ಟರುಗಳನ್ನೂ ಮಾರದಂತೆ ಅಮೆರಿಕಾದ ಒತ್ತಡ ಒಂದು ಗಂಭೀರ ವಿಷಯ. ಭಾರತ ಒಂದು ಸ್ವತಂತ್ರ. ಪರಮಾಣು ತಂತ್ರಜ್ಞಾನ ನೀತಿ ಅನುಸರಿಸದಂತೆ ತಡೆಯುವ ಅಮೆರಿಕಾದ ಪ್ರಯತ್ನಗಳ ಮುಂದುವರಿಕೆಯಿದು. ಭಾರತದ ಭದ್ರತೆಗೆ ಸಂಬಂಧಪಟ್ಟ ಸಿಟಿಬಿಟಿ ಪ್ರಶ್ನೆಯಂತೆ ಈ ರಂಗದಲ್ಲೂ ಭಾರತವನ್ನು ಮಣಿಸಲು ಅಮೆರಿಕಾ ಪ್ರಯತ್ನಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಪಶ್ಚಿಮ ಕರಾವಳಿಯಲ್ಲಿ ಭಾರತ-ಅಮೆರಿಕಾ ಜಂಟಿ ನೌಕಾ ಕವಾಯತಿನ ನಾಲ್ಕನೇ ಸುತ್ತು ನಡೆಯುವುದರ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಸಿಪಿಐ(ಎಂ) ಭಾರತದ ಭದ್ರತೆಯ ಬಗ್ಗೆ ಅಮೆರಿಕಾದ ನಕರಾತ್ಮಕ ನಿಲುವಿನ ಹಿನ್ನೆಲೆಯಲ್ಲಿ ಇಂತಹ ಮಿಲಿಟರಿ ಸಹಕಾರ ಸಂಪೂರ್ಣ ಆಕ್ಷೇಪಣಾರ್ಹ ಎಂದು ಹೇಳಿದೆ. ಭಾರತದ ಮೇಲೆ ಸಾಮ್ರಾಜ್ಯಶಾಹಿ ಒತ್ತಡಗಳ ವಿರುದ್ಧ ಹಾಗೂ ಭಾರತದ ರಕ್ಷಣಾ ಹಿತಾಸಕ್ತಿಗಳನ್ನು ಹೆಯ್ದುಕೊಳ್ಳಲು ಜನಗಳನ್ನು ಅಣಿನೆರೆಸಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ.

ನೆರೆದೇಶಗಳೊಂದಿಗೆ ಸಂಬಂಧ: ಇತ್ತೀಚಿನ ಅವಧಿಯಲ್ಲಿ ಸಂಯುಕ್ತ ರಂಗ ಸರಕಾರ ಕೈಗೊಂಡ ಕ್ರಮಗಳಿಂದಾಗಿ ನಮ್ಮ ನೆರೆದೇಶಗಳೊಂದಿಗೆ ಸಂಬಂಧಗಳು ಸುಧಾರಣೆಯಾಗಿವೆ ಎಂದು ಸಿಪಿಐ(ಎಂ) ತೃಪ್ತಿ ವ್ಯಕ್ತಪಡಿಸಿದೆ. ಭಾರತ-ಬಾಂಗ್ಲಾದೇಶ ನದಿ ನೀರು ಒಪ್ಪಂದ, ಭಾರತಕ್ಕೆ ಚೀನಿ ಅಧ್ಯಕ್ಷ ಜಿಯಾಂಗ್ ಜೆಮಿನ್ ಭೇಟಿ, ಶ್ರೀಲಂಕಾಕ್ಕೆ ನಮ್ಮ ವಿದೇಶಾಂಗ ಮಂತ್ರಿಗಳ ಭೇಟಿ ಇವೆಲ್ಲಾ ನೆರೆದೇಶಗಳೊಂದಿಗೆ ಭಾರತದ ಸಂಬಂಧಗಳನ್ನು ಬಲ ಪಡಿಸುವ ಹಾಗೂ ದಕ್ಷಿಣ ಏಶ್ಯಾದಲ್ಲಿ ಸಾಮರಸ್ಯದ ವಾತಾವರಣಕ್ಕೆ ಪ್ರೋತ್ಸಾಹ ನೀಡುವ ಕ್ರಮಗಳು ಎಂದಿರುವ ಸಿಪಿಐ(ಎಂ)ಕೇಂದ್ರ ಸಮಿತಿ ಪಾಕಿಸ್ತಾನದ ಹೊಸ ಪ್ರಧಾನ ಮಂತ್ರಿಗಳು ಮಾತುಕತೆಯ ಬಗ್ಗೆ ಹೇಳಿರುವುದನ್ನು ಕೂಡ ಈ ಹಿನ್ನೆಲೆಯಲ್ಲಿಯೇ ಕಾಣಬೇಕು ಎಂದಿದೆ.

ತ್ರಿಪುರಾದಲ್ಲಿ ಆತಂಕಕಾರಿ ಸ್ಥಿತಿ: ತ್ರಿಪುರಾದ ಉಗ್ರಗಾಮಿ ಗುಂಪುಗಳು ನಡೆಸುತ್ತಿರುವ ಭಯಾನಕ ಕೊಲೆಗಳ ಬಗ್ಗೆ ಕೇಂದ್ರ ಸಮಿತಿ ತೀವ್ರ ಆತಂಕ ವ್ಯಕ್ತಪಡಿಸಿತು. ಎರಡು ಪ್ರಧಾನ ಉಗ್ರಗಾಮಿ ಗುಂಪುಗಳು ಮುಗ್ಧ ಮಕ್ಕಳು, ಮಹಿಳೆಯರು, ಪುರುಷರ ಮೇಲೆ ಅಮಾನವೀಯ ಧಾಳಿ ಆರಂಭಿಸಿದ್ದಾರೆ. ಬುಡಕಟ್ಟೇತರ ಜನಗಳನ್ನು ಹೀಗೆ ಒಟ್ಟಾರೆಯಾಗಿ ಸಾಯಿಸುವ ಹಿಂದಿರುವ ದುಷ್ಟ ಉದ್ದೇಶವೆಂದರೆ ಜನಾಂಗೀಯ ಸೆಳತಗಳನ್ನು ಹೆಚ್ಚಿಸಿ ಕೋಮು ದಳ್ಳುರಿಯನ್ನು ಹುಟ್ಟಿಸುವುದು. ತ್ರಿಪುರಾದಲ್ಲಿ ಬುಡಕಟ್ಟು ಜನಗಳು ಮತ್ತು ಇತರರ ಐಕ್ಯತೆ ಪ್ರಜಾಪ್ರಭುತ್ವ ಆಂದೋಲನದ ಅಡಿಗಲ್ಲು, ಈಶಾನ್ಯ ಭಾರತದಲ್ಲಿ ಎಲ್ಲೆಡೆ ಕಂಡು ಬರುವ ಜನಾಂಗೀಯ ಕಲಹಗಳಿಗಿಂತ ಸಂಪೂರ್ಣ ಭಿನ್ನವಾಗಿರುವ ಜ್ವಲಂತ ಉದಾಹರಣೆ. ಇದನ್ನು ಕಾಪಾಡಿಕೊಳ್ಳಲು ಎಡರಂಗ ಸರಕಾರ ಹಾಗೂ ಸಿಪಿಐ(ಎಂ) ಬದ್ಧವಾಗಿದೆ.

ಭಯೋತ್ಪಾದಕ ಕೊಲೆ-ಸುಲಿಗೆಗಳ ಪಿಡುಗನ್ನು ಎದುರಿಸಲು ದೃಢ ಹಾಗೂ ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕೆಂಬ ಎಡರಂಗ ಸರಕಾರದ ನಿಲುವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಅನುಮೋದಿ ಸಿದೆ. ಉದ್ದನೆಯ ಅಂತರ್ರಾಷ್ಟ್ರೀಯ ಗಡಿ ಹಾಗೂ ಪ್ರದೇಶದ ದುರ್ಗಮತೆಯಿಂದಾಗಿ ರಾಜ್ಯ ಪೋಲೀಸು ಬಲ ಶಸ್ತ್ರ ಸಜ್ಜಿತ ಉಗ್ರಗಾಮಿಗಳ ಹೀನ ಚಟುವಟಿಕೆಗಳನ್ನು ತಡೆಯಲು ಅಸಮರ್ಪಕವಾಗಿದೆ. ಆದ್ದರಿಂದ ಎಡರಂಗ ಸರಕಾರ ಕೆಲವು ಆಯ್ದ ಪ್ರದೇಶಗಳನ್ನು 'ಗಲಭೆ ಪೀಡಿತ ಪ್ರದೇಶ'ಗಳೆಂದು ಸಾರಿ ಆ ಮೂಲಕ ಸೇನೆಯ ಸಹಾಯ ಪಡೆದು ಜನಗಳನ್ನು ಉಗ್ರಗಾಮಿಗಳ ಕೊಲೆ-ಸುಲಿಗೆಗಳಿಂದ ರಕ್ಷಿಸಲು ಪ್ರಯತ್ನಿಸಲಾಗುತ್ತಿದೆ ಎಂದಿರುವ

> ಕಾಂಗ್ರೆಸ್ ಕಾರ್ಯಕಾರಿ ಸಮಿತಿ ತನ್ನ ನಿಲುವು ಬದಲಿಸಿ ಸಂಯುಕ್ತ ರಂಗ ಸರಕಾರಕ್ಕೆ ಬೇಷರತ್ ಬೆಂಬಲದ ಬದಲು ಪ್ರಶ್ನೆ ಆಧಾರಿತ ಬೆಂಬಲ ಕೊಡುವುದಾಗಿ ಹೇಳಿ ನಿರ್ಧರಿಸಿರುವುದರ ಬಗ್ಗೆ ಪತ್ರಕರ್ತರು ಕೇಳಿದಾಗ ಸುರ್ಜಿತ್ ಇದರಲ್ಲಿ ಬಹಳ ಅರ್ಥವೇನೂ ಇಲ್ಲ ಎಂದು ಒತ್ತಿ ಹೇಳಿದರು. ರಾಜಕೀಯ ಪರಿಸ್ಥಿತಿ ಬದಲಾಗಿಲ್ಲವಾದ್ದರಿಂದ ಕಾಂಗ್ರೆಸ್ ಬೆಂಬಲವನ್ನು ಹಿಂತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಸಿಪಿಐ(ಎಂ) ಕೇಂದ್ರ ಸಮಿತಿ ಇದಕ್ಕೆ ಕೇಂದ್ರ ಸರಕಾರ ತಕ್ಷಣ ಸ್ಪಂದಿಸಿದ ಬಗ್ಗೆ ಸಂತಸ ವ್ಯಕ್ತಪಡಿಸಿದೆ.

ಬುಡಕಟ್ಟುಜನಗಳು ಮತ್ತು ಇತರರ ನಡುವೆ ಐಕ್ಯತೆಯನ್ನು ಕಾದುಕೊಳ್ಳಲು ಹಾಗೂ ಬಂಗಾಳಿಗಳ ನಡುವೆ ಸಂಕುಚಿತವಾದಿಗಳನ್ನು ಹಾಗೂ ಬುಡಕಟ್ಟು ಜನಗಳಲ್ಲಿ ಪ್ರತ್ಯೇಕತಾವಾದಿಗಳನ್ನು ಜನರಿಂದ ದೂರವಿಡಲು ಸಿಪಿಐ(ಎಂ) ನ ತ್ರಿಪುರಾ ಘಟಕ ಸತತ ರಾಜಕೀಯ ಪ್ರಚಾರ ನಡೆಸುತ್ತಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ತ್ರಿಪುರಾದ ತನ್ನ ಘಟಕ ಹಾಗೂ ಎಡರಂಗ ಸರಕಾರ ಕೈಗೊಂಡಿರುವ ಕ್ರಮಗಳಿಗೆ ಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಈಶಾನ್ಯ ಭಾರತದಲ್ಲಿ ವಿವಿಧ ಉಗ್ರಗಾಮಿ ಗುಂಪುಗಳು ನಡೆಸುತ್ತಿರುವ ವಿಚ್ಛಿದ್ರಕಾರಿ ಚಟುವಟಿಕೆಗಳು ಹೆಚ್ಚುತ್ತಿರುವುದು ಹಾಗೂ ಅದಕ್ಕೆ ವಿದೇಶಿ ಪಡೆಗಳ ನೆರವಿನ ಬಗ್ಗೆ ಸಿಪಿಐ(ಎಂ) ತೀವ್ರ ಆತಂಕ ವ್ಯಕ್ತಪಡಿಸಿತು.

ಪಂಚಾಯತ್ ಚುನಾವಣೆಗಳು: ಕಾಂಗ್ರೆಸ್(ಐ)ನ ಭ್ರಷ್ಟಾಚಾರ ಹಾಗೂ ದುರಾಡಳಿತದಿಂದ ಬೇಸತ್ತ ಪಂಜಾಬ್ ಜನತೆಯ ಶಾಂತಿಯನ್ನು ಕಾದುಕೊಳ್ಳುವ ಆಕಾಂಕ್ಷೆಯಿಂದಾಗಿ ಅಕಾಲಿದಳ(ಬಾದಲ್)-ಬಿಜೆಪಿ ಕೂಟ ಭಾರೀ ವಿಜಯ ಸಾಧಿಸುವಂತಾಗಿದೆ. ಈ ಕೂಟ ಗೆಲ್ಲುವ ನಿರೀಕ್ಷೆಯಿದ್ದುದರಿಂದ ಶಾಂತಿ ಬಯಸುವ ಜನ ದೊಡ್ಡ ಪ್ರಮಾಣದಲ್ಲಿ ಇವರಿಗೆ ಮತ ನೀಡಿದರು. ಆದರೆ ಚುನಾವಣೆಗಳಲ್ಲಿ ಅಕಾಲಿ ದಳ ಸಿಖ್ಖರ ಪ್ರತಿನಿಧಿ, ಬಿಜೆಪಿ ಹಿಂದುಗಳ ಪ್ರತಿನಿಧಿ ಎಂಬಂತೆ ಪ್ರಚಾರ ಮಾಡಿದ್ದರಿಂದ ಕೋಮು ವಿಭಜನೆ ಉಂಟಾಗುವ ಅಪಾಯವೂ ಇದೆ ಎಂದು ಸಿಪಿಐ(ಎಂ) ಎಚ್ಚರಿಸಿದೆ.

ಸಿಪಿಐ ತನ್ನ ರಾಷ್ಟ್ರೀಯ ರಾಜಕೀಯ ನಿಲುವಿಗೆವಿರುದ್ಧವಾಗಿಕಾಂಗ್ರೆಸ್‌ನೊಂದಿಗೆಬಹಿರಂಗವಾಗಿಯೇ ಸೇರಿಕೊಂಡು ಹತ್ತು ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, ಕಾಂಗ್ರೆಸ್ ನೊಡನೆ ಜಂಟಿ ಪ್ರಚಾರ ನಡೆಸಿದ್ದು ಇದರಿಂದಾಗಿ ಎಡಪಕ್ಷಗಳ ಚುನಾವಣಾ ಸಾಧನೆಗಳ ಮೇಲೆ ತೀವ್ರ ಪೆಟ್ಟು ಬೀಳುವಂತಾಗಿದೆ. ಎಡ ಐಕ್ಯತೆಯನ್ನು ನೀತಿ ಬದ್ಧವಾಗಿ ಮತ್ತೆ ಕಟ್ಟಲು ಪಕ್ಷ ಕ್ರಮಕೈಗೊಳ್ಳಬೇಕು ಎಂದು ಕೇಂದ್ರ ಸಮಿತಿ ಹೇಳಿದೆ.

ಬಿಜೆಪಿ ಕಸರತ್ತುಗಳು: ಇತ್ತೀಚೆಗೆ ರಾಜಸ್ತಾನದಲ್ಲಿ ತನ್ನ ಸರಕಾರವನ್ನು ಅಪಾಯಕ್ಕೊಳಗಾಗಿಸಿದ ಬಿಜೆಪಿ ಬಿಕ್ಕಟ್ಟು ಆ ಪಕ್ಷದೊಳಗೆ ಸಮಯಸಾಧಕ ಕಿತ್ತಾಟಗಳು ಹಾಗೂ ಗುಂಪುಗಾರಿಕೆ ಹರಡುತ್ತಿರುವುದನ್ನು ಸೂಚಿಸಿದೆ. ಬಿಜೆಪಿಯಲ್ಲಿ ಇರುವ ನೀತಿ ಬಾಹಿರ ಅಧಿಕಾರ ದಾಹ ಎಷ್ಟೆಂಬುದನ್ನು ಗುಜರಾತಿನ ನಂತರ ಮತ್ತೊಮ್ಮೆ ಇದು ತೋರಿಸಿ ಕೊಟ್ಟಿದೆ ಎಂದು ಸಿಪಿಐ(ಎಂ) ಕೇಂದ್ರಸಮಿತಿ ವಿಶ್ಲೇಷಿಸಿದೆ. ಸಿಪಿಐ(ಎಂ) ಮತ್ತಿತರ ಎಡ ಪಕ್ಷಗಳು ಕೋಮುಶಕ್ತಿಗಳನ್ನು ರಾಜಕೀಯವಾಗಿ ದೂರೀಕರಿಸುವಲ್ಲಿ ಒಂದು ಪ್ರಧಾನ ಪಾತ್ರ ವಹಿಸುತ್ತಿರುವುದರಿಂದ ಬಿಜೆಪಿ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳಮೇಲೆಗುರಿಯಿಟ್ಟಿದೆ. ಪಶ್ಚಿಮ ಬಂಗಾಳದಲ್ಲಿ ಭಾರತ- ಬಾಂಗ್ಲಾದೇಶ ನದಿ ನೀರಿನ ಒಪ್ಪಂದದ ವಿರುದ್ಧ ಅದರ ಕೋಮು ದುರುದ್ದೇಶದ ಅಪಪ್ರಚಾರ ಹಾಗೂ ಕೇರಳದಲ್ಲಿ ಹಿಂಸಾಚಾರ ಉದ್ರೇಕಿಸುವ ಆರ್‌ಎಸ್‌ಎಸ್‌ನ ಪ್ರಯತ್ನ ಇದೇ ಧಾಳಿಯ ಭಾಗ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಬಿಜೆಪಿಯ ಕಸರತ್ತುಗಳನ್ನುಹಾಗೂ ಮಥುರಾ ಪ್ರಶ್ನೆಯ ಮೇಲೆ ಮತ್ತೆ ಚಳುವಳಿ ಎಬ್ಬಿಸುವ ವಿಹೆಚ್‌ಪಿ ಪ್ರಯತ್ನವನ್ನು ವಿಫಲಗೊಳಿಸಲು ನಿರಂತರ ಜಾಗರೂಕತೆ ಅಗತ್ಯ ಎಂದಿದೆ.

ವೇತನ ಆಯೋಗದ ವರದಿ: ಐದನೇ ವೇತನ ಆಯೋಗದ ವರದಿಯಲ್ಲಿ ಕಂಡು ಬಂದಿರುವ ಸರಕಾರದ ಸಿಬ್ಬಂದಿ ಸಂಖ್ಯೆಯಲ್ಲಿ ತೀವ್ರ ಕಡಿತದ ಪ್ರಮುಖ ದಿಕ್ಕನ್ನು ಸಿಪಿಐ(ಎಂ) ಕೇಂದ್ರ ಸಮಿತಿ ವಿರೋಧಿಸಿದೆ. ಇದು ಐಎಂಎಫ್-ವಿಶ್ವಬ್ಯಾಂಕ್ ಯೋಜನಾ ಲಹರಿಯ ದಿಕ್ಕಿನಲ್ಲೇ ಇದ್ದು ವಿವಿಧ ನೌಕರರ ವರ್ಗಗಳಲ್ಲಿನ ತಾರತಮ್ಯವನ್ನು ಹೆಚ್ಚಿಸುತ್ತದೆ. ಕೇಂದ್ರ ಸರಕಾರಿ ನೌಕರರು ಇತ್ತೀಚೆಗೆ ಮುಷ್ಕರದ ಮೂಲಕ ವಿರೋಧಿಸಿದ ಬೋನಸ್ ಅರ್ಹತೆಯ ಮಿತಿಯನ್ನು ಮತ್ತೆ ಹೇರುವ ಪ್ರಸ್ತಾವವನ್ನು ಕೂಡಾ ಒಪ್ಪತಕ್ಕದಲ್ಲ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಈ ವರದಿಯ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರುವ ಮೊದಲು ಕಾರ್ಮಿಕ ಸಂಘಗಳೊಡನೆ ಸಮಾಲೋಚನೆ ನಡೆಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಸರಕಾರಕ್ಕೆ ಹೇಳಿದೆ.

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಕಲ್ಲಿದ್ದಲು ಗಗನ ಕುಸುಮ

ಯಾವ ವಸ್ತುವಿನ/ಉದ್ದಿಮೆಯ ಉದಾರೀಕರಣ ಆಗುತ್ತದೊ ಆ ವಸ್ತು ಗಗನ ಕುಸುಮವಾಗುತ್ತದೆ. ಯಾಕೆ? ಯಾಕೆಂದರೆ ಆ ವಸ್ತು ಬೆಲೆ ಗಗನಕ್ಕೆ ಏರಿಬಿಡುತ್ತದೆ. ಜನಸಾಮಾನ್ಯರಿಗೆ ದೊರೆಯದಂತಾಗುತ್ತದೆ. ಅದರ ಜೊತೆಗಿನ ವಸ್ತುಗಳೂ ಹಾಗೇ ಆಗಿ ಬಿಡುತ್ತದೆ. ಈ ಅರ್ಥದಲ್ಲಿ ಕಲ್ಲಿದ್ದಲು ಗಗನ ಕುಸುಮವಾಗುತ್ತಿರುವುದು. ಕಾರಣ?

ಕಲ್ಲಿದ್ದಲು ವಲಯವನ್ನೇ ಸರ್ಕಾರ ಉದಾರೀಕರಿಸಿದೆ ಅಂದರೆ ಕಲ್ಲಿದ್ದಲಿನ ಬೆಲೆ ಏರುವುದಷ್ಟೇ ಅಲ್ಲ ಕಲ್ಲಿದ್ದಲು ಉಪಯೋಗಿಸುವ ಎಲ್ಲ ಉದ್ದಿಮೆಗಳೂ ಹೆಚ್ಚಿನ ಬೆಲೆ ತೆರುತ್ತವೆ. ಈ ವೆಚ್ಚವನ್ನು ತಮ್ಮ ಉತ್ಪನ್ನದ ಮೇಲೆ ಏರುತ್ತವೆ. ಆದ್ದರಿಂದ ಹಲವು ಉತ್ಪನ್ನಗಳ ಬೆಲೆಗಳು ಹೆಚ್ಚುತ್ತವೆ.

ಇಲ್ಲಿಯವರೆಗೆ ಸರ್ಕಾರೀ ವಲಯದಲ್ಲಿದ್ದ ಕಲ್ಲಿದ್ದಲು ಈಗ ಖಸಗೀ ವಲಯಕ್ಕೆ ತೆರೆದ ಕ್ಷೇತ್ರ. ಖಾಸಗಿ ಕಂಪನಿಗಳ ಕಲ್ಲಿದ್ದಲು ಶೋಧನೆ, ಗಣಿಗಾರಿಕೆ ಎರಡನ್ನೂ ಮಾಡಬಹುದು. ಶೋಧಿಸಿ ಗಣಿಗಾರಿಕೆ ಮಾಡಿ ಉತ್ಪನ್ನವನ್ನೂ ಮಾರ ಹೊರಟರೆ ಯಾರಿಗೆ ಬೇಕಾದರೂ ಮಾರಬಹುದು ಆಯಿತೆ? ಇಲ್ಲ ಯಾವ ಬೆಲೆಗೆ ಬೇಕಾದರೂ ಮಾರಬಹುದು.

ಹಿಂದಿನ ಕಾಂಗ್ರೆಸ್ ಸರ್ಕಾರವೇ ಈ ವಲಯವನ್ನು ಭಾಗಶಃ ಉದಾರೀಕರಣ ಮಾಡಿತ್ತು. ಈಗ ಸಂಯುಕ್ತರಂಗ ಸರ್ಕಾರ ಈ ವಲಯವನ್ನೂ ಪೂರ್ತಿ ಉದಾರೀಕರಿಸುವುದರೊಂದಿಗೆ ಹೆಚ್ಚೆಚ್ಚು ಖಾಸಗಿ ಬಂಡವಾಳ ಈ ವಲಯಕ್ಕೆ ಹರಿದು ಬರುತ್ತದಂತೆ.

ಹರಿದುಬರಬಹುದುನಿಜ.ಆದರೆಒಂದು ಬಹುಮುಖ್ಯ ಇಂಧನವಾಗಿರುವ ಕಲ್ಲಿದ್ದಲು ಖಾಸಗಿಯವರ ಸೊತ್ತಾಗಿಬಿಟ್ಟರೆ ಅದನ್ನು ಬಳಸುವ ಎಲ್ಲ ಉದ್ದಿಮೆಗಳೂ ವಿದ್ಯುತ್ ಉತ್ಪಾದನೆ ಕಬ್ಬಿಣ ಮತ್ತು ಉಕ್ಕು ಹಾಗೂ ಇತರ ಹಲವು ಉದ್ದಿಮೆಗಳು ಇದರ ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ. ಇದರ ಅರ್ಥ ಈ ಉದ್ದಿಮೆಗಳು ಅಂತಿಮವಾಗಿ ಈ ಭಾರವನ್ನು ಜನಸಾಮಾನ್ಯರ ಹೆಗಲಿಗೇ ದಾಟಿಸುವುದು. ಹೀಗೆ ಈಗ ಈ ಕಪ್ಪು ಚಿನ್ನ ಗಗನ ಕುಸುಮ. ಈ ಉದಾರೀಕರಣದಿಂದಾಗಿ ಹಣದುಬ್ಬರ ತೀವ್ರವಾಗಿ ಏರುತ್ತದೆಂಬುದರಲ್ಲಿ ಸಂದೇಹವೇ ಬೇಡ.



ದೆಹಲಿ ಪಾಲಿಕೆ ಚುನಾವಣೆಯಲ್ಲಿ ಸಿಪಿಐ(ಎಂ) ಸ್ಪರ್ಧೆ

ದೆಹಲಿ ಮಹಾನಗರ ಪಾಲಿಕೆಗೆ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಿ ರಾಷ್ಟ್ರ ರಾಜಧಾನಿಯ ಜನರ ನೋವು ನಲಿವುಗಳಿಗೆ ದನಿ ನೀಡಲು ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಅದು ಈಗಾಗಲೇ ಕಾರ್ಯ ಪ್ರವೃತ್ತವಾಗಿದೆ. ತೀವ್ರ ಪ್ರಚಾರಾಂದೋಲನದಲ್ಲಿ ನಿರತವಾಗಿದೆ.

ಪಾಲಿಕೆಯ 16 ವಾರ್ಡುಗಳಲ್ಲಿ ಪಕ್ಷದ ಅಭ್ಯರ್ಥಿಗಳು ಕಣಕ್ಕಿಳಿದಿದ್ದಾರೆ. ಆ ಪೈಕಿ ಆರು ಮಂದಿ ಮಹಿಳೆಯರು. ಈ ಎಲ್ಲಾ ವಾರ್ಡುಗಳಲ್ಲಿ ಪಕ್ಷದ ಚುನಾವಣೆ ಕಚೇರಿಗಳನ್ನು ತೆರೆದಿದ್ದಾರೆ. ಪಕ್ಷದ ಕಾರ್ಯಕರ್ತರು, ಕಾರ್ಮಿಕರು ಅಲ್ಲದೆ ಹಲವು ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು, ಜವಾಹರ್ ಲಾಲ್‌ನೆಹರೂ ವಿಶ್ವವಿದ್ಯಾಲಯದ ಶಿಕ್ಷಕರೂ ಸಿಪಿಐ(ಎಂ) ಅಭ್ಯರ್ಥಿಗಳ ಪರ ಪ್ರಚಾರದಲ್ಲಿ ತೊಡಗಿರುವುದು ವಿಶೇಷ ವಾಗಿದೆ.

ಸೈಕಲ್ ರ್‍ಯಾಲಿ, ಪಾದಯಾತ್ರೆ, ಮನೆ ಮನೆ ಪ್ರಚಾರ, ಬೀದಿ ಬದಿಯ ಸಭೆಗಳು.... ಇವು ಪ್ರಚಾರ ಮಾರ್ಗಗಳಾಗಿವೆ.

ಜನರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸದಾ ಹೋರಾಟ ನಡೆಸುತ್ತಿರುವುದು ಸಿಪಿಐ(ಎಂ)ಈಗ ಅದೇ ಆಧಾರ ದಲ್ಲಿ ಜನರ ಬಳಿ ತೆರಳಿ ಮತವನ್ನು ಕೋರುತ್ತಿದೆ.

ನಾಟಕ ಪ್ರದರ್ಶನ

ಜನನಾಟ್ಯ ಮಂಚ್ (ಜನಮ್) ಇದು ದೆಹಲಿಯ ಜನಪ್ರಿಯ, ಪ್ರಗತಿಪರ ಬೀದಿ ನಾಟಕ ತಂಡ. ದೆಹಲಿ ಪಾಲಿಕೆ ಚುನಾವಣೆಗಾಗಿಯೇ ಅದು ನಾಟಕವೊಂದನ್ನು ರಚಿಸಿದೆ. ಸಿಪಿಐ(ಎಂ) ಬೆಂಬಲ ಕ್ರೋಢೀಕರಿಸಲು ಅದು ಹಲವು ಸ್ಥಳಗಳಲ್ಲಿ ಈ ನಾಟಕವನ್ನು ಪ್ರದರ್ಶಿಸುತ್ತಿದೆ. ಫೆಬ್ರವರಿ 10 ರಂದು ಒಂದೇ ದಿನ ಜನಮಂಚ್ ನ ಎರಡು ತಂಡಗಳು ಈ ನಾಟಕದ 17 ಪ್ರದರ್ಶನ ನೀಡಿದರು.

ಕಾಳಿಂದಿ ದೇಶಪಾಂಡೆ, ಆಶಾಲತ, ರೆಹನಾ, ಸತ್ಯವತಿ, ಭರತಾಯಿ ದೇವಿ, ಆಶಾ ಯಾದವ್, ಕನ್ವರಪಾಲ್, ಕಾಮೇಶ್ವರ ಪ್ರಸಾದ್, ಪೂರ್ಣಚಂದ್, ನರೇಶ ಭರತ್, ಚುನುತೀಂದ್ರ ಚಕ್ರವರ್ತಿ, ಅಮೀರುದ್ದಿನ್, ಪ್ರದ್ಯುತ್ ಪಹರಿ, ಶರವಣ ಕುಮಾರ, ಮಹೇಂದ್ರ ಮತ್ತು ಎಸ್.ಕೆ.ಘೋಷ್ ಇವರು ಸಿಪಿಐ(ಎಂ) ಅಭ್ಯರ್ಥಿಗಳು.

ಸಿಪಿಐ(ಎಂ)ನ ಸ್ಪರ್ಧೆ ಮತ್ತು ಪ್ರಚಾರ ಎಡಪಂಥೀಯರ ವಲಯದಲ್ಲಿ ಹೊಸ ಹುರುಪನ್ನು ಹುಟ್ಟುಹಾಕಿದೆ. ಹಿಂದೂ ಕೋಮುವಾದಿ ಶಕ್ತಿಗಳು ಪ್ರಬಲವಾಗಿರುವ ರಾಜಧಾನಿ ಪರಿಸರದಲ್ಲಿ ಎಡ ಪಕ್ಷವೊಂದು ಇಷ್ಟೊಂದು ಆಸಕ್ತಿಯಿಂದ ದೊಡ್ಡ ಪ್ರಮಾಣದಲ್ಲಿ ಚುನಾವಣಾ ಕಣಕ್ಕಿಳಿದಿರುವುದು ಎಲ್ಲರ ಹುಬ್ಬನ್ನು ಏರಿಸುವಂತೆ ಮಾಡಿದೆ.

ತ್ರಿಪುರಾದಲ್ಲಿ ನರಮೇಧದ ಸರಣಿ

ಎಡರಂಗ ಸರಕಾರಕ್ಕೆ ಮಸಿ ಹಚ್ಚಲು ಪಿತೂರಿ

ತ್ರಿಪುರಾದಲ್ಲಿ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ನಡುವಿನ ಸೌಹಾರ್ದವನ್ನು ಕದಡಲು ಎಲ್ಲಾ ರೀತಿಯ ಯತ್ನಗಳು ನಡೆಯುತ್ತಿವೆ. ಇದಕ್ಕಾಗಿ ಹತ್ತಾರು ಮುಗ್ಧ ಜನರ ಪ್ರಾಣಗಳನ್ನೇ ಹರಣ ಮಾಡಲಾಗುತ್ತಿದೆ. ಹತ್ಯಾಕಾಂಡಗಳನ್ನು ನಡೆಸುವ ಮೂಲಕ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಎಡರಂಗ ಸರಕಾರಕ್ಕೆ ಮಸಿ ಬಳಿಯುವ ಒಂದು ವ್ಯವಸ್ಥಿತ ಪಿತೂರಿ ಇಲ್ಲಿರುವುದು ಸ್ಪಷ್ಟವಾಗಿದೆ.

ಕಾಂಗ್ರೆಸ್(ಐ) ಮತ್ತು ಆಮ್ರ ಬಂಗಾಲಿ ಗಳು ಜೊತೆಸೇರಿ ಈ ಹೇಯ ಕೃತ್ಯಗಳನ್ನು ನಡೆಸುತ್ತಿದೆ. ಕೇವಲ ಒಂದು ತಿಂಗಳ ಅವಧಿ ಯಲ್ಲಿ ಸಂಭವಿಸಿದ ಹತ್ಯಾಕಾಂಡದಲ್ಲಿ 50-60 ಜನರು ಸತ್ತಿದ್ದಾರೆ.

ಪಶ್ಚಿಮ ತ್ರಿಪುರಾ ಜಿಲ್ಲೆಯ ಜರುಳಬಾಗ್ಗೆ ಗ್ರಾಮದಲ್ಲಿ ಫೆ.12 ರಂದು ಉಗ್ರಗಾಮಿಗಳು 18 ಜನರನ್ನು ಕೊಂದು 20 ಕ್ಕೂ ಹೆಚ್ಚು ಮನೆಗಳಿಗೆ ಬೆಂಕಿ ಹಚ್ಚಿದರು.

ಗ್ರಾಮಕ್ಕೆ ನುಗ್ಗಿದ ಭಯೋತ್ಪಾದಕರು ಜನರ ಮೇಲೆ ಯದ್ವಾತದ್ವಾ ಗುಂಡು ಹಾರಿಸಿ ದ್ದರಿಂದ ಒಂದೇ ಕುಟುಂಬದ ಎಂಟು ಮಂದಿಯ ಸಹಿತ 16 ಜನರು ಹತರಾದರು. ಗುಂಡೇಟಿನಿಂದ ಗಂಭೀರವಾಗಿ ಗಾಯಗೊಂಡ ಇನ್ನಿಬ್ಬರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ 15 ಕ್ಕೂ ಹೆಚ್ಚು ಉಗ್ರಗಾಮಿಗಳಿದ್ದ ತಂಡ ಮುಂಜಾನೆ ಹೊತ್ತು ನಿದ್ರಿಸುತ್ತಿದ್ದ ಗ್ರಾಮದ ಮೇಲೆ ದಾಳಿ ನಡೆಸಿ ಬೆಂಕಿ ಹಚ್ಚಲಾರಂಭಿಸಿತು. ಆಗ ಹೊರಗೆ ಬಂದ ಜನರ ಮೇಲೆ ಗುಂಡಿನ ಸುರಿಮಳೆಗರೆಯಲಾಯಿತು.

ಈ ದುಷ್ಟ ಹತ್ಯಾಕಾಂಡದ ಘೋರತೆ ಇನ್ನೂ ಹಸಿಯಾಗಿರುವಾಗಲೇ ದುರುಳರು ಫೆ.15 ಮತ್ತು 16ರಂದು ಖೊವಾಯಿ ಉಪ.ವಿಭಾಗದಲ್ಲಿ ಮತ್ತೆ 21 ಜನರ ನರಮೇಧ ನಡೆಸಿದರು. ಅಖಿಲ ತ್ರಿಪುರಾ ವ್ಯಾಘ್ರ ಪಡೆ(ಎಟಿಟಿಎಫ್) ಈ ದುಷ್ಕೃತ್ಯ ನಡೆಸಿದೆ.

ಈ ಬುಡಕಟ್ಟು ಉಗ್ರಗಾಮಿ ಸಂಘಟನೆಗೆ ಸೇರಿದವರು ಬುಡಕಟ್ಟೇತರ ಜನರ ಸುಮಾರು 200 ಮನೆಗಳನ್ನು ಬೆಂಕಿ ಹಚ್ಚಿನಾಶ ಮಾಡಿದ್ದಾರೆ.

ಕಾಂಗ್ರೆಸ್(ಐ), ಆಮ್ರ ಬಂಗಾಲಿ ಮಾತ್ರವಲ್ಲದೇ ತ್ರಿಪುರಾ ಉಪಜಾತಿ ಜಮಾ ಸಮಿತಿ (ಟಿಯುಜೆಎಸ್) ಮತ್ತು ತ್ರಿಪುರಾ ನ್ಯಾಷನಲ್ ಪಂಚಾಯತ್(ಟಿಎನ್‌ವಿ) ಸಂಘಟನೆ ಕೂಡ ಈ ದುಷ್ಕೃತ್ಯಗಳಲ್ಲಿ ಭಾಗಿಯಾಗುತ್ತಿವೆ.

ಹಿಂದೆ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರ ವಿದ್ದರೂ ತ್ರಿಪುರಾದಲ್ಲಿ ಎಡರಂಗ ಮತ್ತೆ ಆಡಳಿತಕ್ಕೆ ಬರುವುದನ್ನು ತಪ್ಪಿಸಲು ಇಡೀ ರಾಜ್ಯದಲ್ಲಿ ಸೇನೆ ಹಸ್ತಕ್ಷೇಪ ಮಾಡುವಂತೆ ಪಿತೂರಿ ಹೂಡಿದ್ದ ಕಾಂಗ್ರೆಸ್(ಐ) ಈಗ ಮತ್ತೆ ಅದೇ ತಂತ್ರವನ್ನು ರೂಪಿಸಿರುವುದು ಸ್ಪಷ್ಟವಾಗಿ ಕಾಣು ತ್ತದೆ. ಆಗಲೂ ಬುಡಕಟ್ಟು ಮತ್ತು ಇತರ ಜನರ ಮಧ್ಯೆ ದ್ವೇಷದ ಕಿಚ್ಚನ್ನು ಹಚ್ಚಿತ್ತು. ಈಗಲೂ ಅದನ್ನೇ ಮಾಡುತ್ತಿದೆ.

ಉಗ್ರಗಾಮಿಗಳಿಗೆ ಶರಣಾಗಲು ಜನವರಿ 26 ರವರೆಗೆ ರಾಜ್ಯದ ಎಡರಂಗ ಸರಕಾರ ಗಡುವು ನೀಡಿತ್ತು. ಆ ಅವಧಿ ಮುಗಿದ ನಂತರ ರಾಜ್ಯ ಸರಕಾರ ಸೇನೆ ಮತ್ತು ಅರೆಸೇನಾ ಪಡೆ ಗಳ ನೆರವಿನಿಂದ ದುಷ್ಕರ್ಮಿಗಳ ವಿರುದ್ಧ ದೃಢ ವಾದ ಕ್ರಮವನ್ನು ಕೈಗೊಳ್ಳಲು ಆರಂಭಿಸಿತ್ತು. ಕಾಂಗ್ರೆಸ್ ನೇತೃತ್ವದ ಎಡರಂಗ ವಿರೋಧಿ ಕೂಟದ ಸ್ಥಳೀಯ ನಾಯಕರು ಈ ಕ್ರಮವನ್ನು ಏನಾದರೂ ಮಾಡಿ ವಿಫಲಗೊಳಿಸಲು ಪಣ ತೊಟ್ಟಿರುವಂತೆ ಕಾಣುತ್ತದೆ.

ಭಾರೀ ಹಿಂಸಾಚಾರ ನಡೆದಿರುವ ಕೆಲವು ಕಡೆಗಳಲ್ಲಿ ರಾಜ್ಯ ಸರಕಾರ ಗಲಭೆ ಗ್ರಸ್ತ ಪ್ರದೇಶ ಗಳ ಕಾನೂನನ್ನು ಜಾರಿಗೊಳಿಸಿದೆ. ಕೆಲವೆಡೆ ಕರ್ಫ್ಯೂ ಹೇರಿದೆ.

ಎಡರಂಗದ ಭದ್ರಕೋಟೆ

ಈಶಾನ್ಯದ ಪುಟ್ಟರಾಜ್ಯ ತ್ರಿಪುರಾದಲ್ಲಿ ವಿಧಾನ ಸಭೆ ರಚನೆಯಾದಂದಿನಿಂದಲೂ ಖೊವಾಯಿ ಸಿಪಿಐ(ಎಂ)ನ ಭದ್ರಕೋಟೆಯಾಗಿದೆ. ಈ ತ್ರಿಪುರಾದಲ್ಲಿ ನಡೆದ ಪ್ರತಿಯೊಂದು ಚುನಾವಣೆಯಲ್ಲಿಯೂ ಕಾಂಗ್ರೆಸ್ ಮತ್ತು ಇತರ ಎಡರಂಗ ವಿರೋಧಿ ಪಕ್ಷಗಳು ಠೇವಣಿಯನ್ನು ಕಳೆದುಕೊಳ್ಳುತ್ತಾ ಬಂದಿವೆ. ಎಡ ಶಕ್ತಿ ವಿರೋಧಿಗಳು ತಮ್ಮ ಆಕ್ರಮಣಕ್ಕೆ ಈ ಪ್ರದೇಶವನ್ನು ತಮ್ಮ ಗುರಿಯನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಆದರೆ ಇಲ್ಲಿನ ಜನರು ಮಾತ್ರ ಇಂಥ ಆಕ್ರಮಣಗಳಿಂದ ಹತಾಶರೇನೂ ಆಗಿಲ್ಲ. ಅವರು ದುಷ್ಟ ಶಕ್ತಿಗಳ ಪ್ರಯತ್ನಗಳನ್ನು ಹಿಮ್ಮೆಟ್ಟಿಸಲು ಬುಡಕಟ್ಟು ಹಾಗೂ ಬುಡಕಟ್ಟೇತರ ಜನರ ನಡುವಿನ ಸೌಹಾರ್ದವನ್ನು ಕಾಪಾಡಲು ಕಟಿಬದ್ಧರಾಗಿ ಮುನ್ನಡೆದಿದ್ದಾರೆ.

ತ್ರಿಪುರಾದಂಥ ಬುಡಕಟ್ಟು ಜನರೇ ಹೆಚ್ಚಿರುವ ಒಂದು ಪುಟ್ಟ ರಾಜ್ಯದಲ್ಲಿ ಸಿಪಿಐ (ಎಂ) ನೇತೃತ್ವದ ಪ್ರಾಬಲ್ಯವನ್ನು ಸಹಿಸದ ಶಕ್ತಿಗಳು ನಡೆಸುತ್ತಿರುವ ಆಟಾಟೋಪವನ್ನು ವಿಫಲಗೊಳಿಸಲು ಇಡೀ ದೇಶದ ಪ್ರಜಾ ಪ್ರಭುತ್ವವಾದಿ ಜನರು ಅಲ್ಲಿನ ಸರಕಾರಕ್ಕೆ ಬೆಂಬಲ ಕೊಡುವುದು ಅಗತ್ಯ. ದಶರಥ ದೇಬ್ ನೇತೃತ್ವದ ಸರಕಾರ ಜನ ವಿರೋಧಿ ಶಕ್ತಿಗಳನ್ನು ಮುಚ್ಚಿಹಾಕಲು ಯಶಸ್ವಿಯಾಗಲೆಂದು ಹಾರೈಸ ಬೇಕು.

ಬೆಲೆಯೇರಿಕೆಗೆ ಪ್ರತಿಭಟನೆಯ ಅಲೆ

ಅಗತ್ಯ ವಸ್ತುಗಳ ಬೆಲೆಯೇರಿಕೆಯನ್ನು ಪ್ರತಿಭಟಿಸಲು ಚಳುವಳಿ ನಡೆಸಲು ಸಿಪಿಐ (ಎಂ) ಕೇಂದ್ರ ಸಮಿತಿ ನೀಡಿದ ಕರೆಯಂತೆ ದೇಶಾದ್ಯಂತ ಹಲವಾರು ಸ್ವರೂಪದ ಆಂದೋಲನಗಳು ನಡೆದಿದೆ. ಜನರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡು ರಾಜ್ಯ ಮತ್ತು ಕೇಂದ್ರ ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ದನಿಯೆತ್ತಿದ್ದಾರೆ.

ಮಧ್ಯ ಪ್ರದೇಶ

ಭೂಪಾಲ್ ವರದಿ: ಮಧ್ಯಪ್ರದೇಶ ಮಾಲ್ವಾ ಪ್ರದೇಶದಲ್ಲಿ ಪಕ್ಷದ ಸ್ಥಳೀಯ ಸಮಿತಿಗಳ ನೇತೃತ್ವದಲ್ಲಿ ಹತ್ತಾರು ಸಭೆಗಳು, ರ್‍ಯಾಲಿಗಳು, ಮತಪ್ರದರ್ಶನಗಳು ನಡೆದವು. ಫೆಬ್ರವರಿ ಮೊದಲವಾರದಲ್ಲಿ ನಡೆದ ಈ ಕಾರ್ಯಕ್ರಮಗಳು ಬೆಲೆಯೇರಿಕೆಗೆ ಪ್ರತಿಭಟನೆಯನ್ನು ದಾಖಲಿಸಿದವು. ಇಂದೂರ್, ಉಜ್ಜೈನಿ ಮತ್ತು ನವೋಡಾಗಳಿಂದಲೂ ಇಂಥ ಚಳುವಳಿ ನಡೆದುದಾಗಿ ವರದಿಯಾಗಿದೆ.

ಇಂದೋರ್‌ನಲ್ಲಿ ಫೆಬ್ರವರಿ ಒಂದರಂದೇ ಪ್ರತಿಭಟನೆ ಆರಂಭವಾಯಿತು. ಮುಂದಿನ ಆರು ದಿನಗಳ ಕಾಲ ವಿವಿಧ ಜನ ವಸತಿ ಪ್ರದೇಶಗಳು, ಕೊಳೆಗೇರಿಗಳು, ಕೈಗಾರಿಕಾ ಕೇಂದ್ರಗಳು, ಬೀದಿ ಬದಿಗಳು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸಲಾಯಿತು. ವಾರಾಂತ್ಯದಲ್ಲಿ ಇಂದೋರ್‌ನಲ್ಲಿ ಬೃಹತ್ ಧರಣಿ ಮತ್ತು ಸಭೆಯನ್ನು ನಡೆಸಲಾಯಿತು. ಒಟ್ಟಾರೆಯಾಗಿ ಧರಣಿ ಮತ್ತು ಸಾರ್ವಜನಿಕ ಸಭೆಗಳಲ್ಲಿ ಸುಮಾರು ಹತ್ತು ಸಾವಿರ ಜನರು ಪಾಲ್ಗೊಂಡಿದ್ದರು.

ಇಂದೋರ್‌ನ ಕೈಗಾರಿಕಾ ಕೇಂದ್ರಗಳಲ್ಲಿ ಇದೇ ಮೊದಲ ಬಾರಿಗೆ ಸಿಪಿಐ(ಎಂ) ಬ್ಯಾನರ್ ನಡಿ ಇಂಥ ಪ್ರಚಾರಾಂದೋಲನವನ್ನು ನಡೆಸಲಾಯಿತು ಎನ್ನುವುದು ಒಂದು ಮಹತ್ವದ ಸಂಗತಿಯಾಗಿದೆ.

ಉಜ್ಜೈನಿ ಜಿಲ್ಲೆಯಲ್ಲಿ ಪ್ರಮುಖವಾಗಿ ಕೈಗಾರಿಕೆ ಕೇಂದ್ರವಾದ ನವೋಡಾದಲ್ಲಿ ಪ್ರಚಾರ ಚಳುವಳಿಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಮಿಕರೇ ಹೆಚ್ಚಾಗಿ ವಾಸವಿರುವ ಪ್ರದೇಶಗಳಲ್ಲಿ ಧರಣಿ, ಸಭೆಗಳನ್ನು ನಡೆಸಲಾಯಿತು. ಕೊನೆಯ ದಿನ ಬೃಹತ್ ಮೆರವಣಿಗೆ ನಡೆಯಿತು. ಉಜ್ಜೈನಿ ಪಟ್ಟಣದಲ್ಲಿ ಕೂಡ ಮೂರು ಬೀದಿ ಬದಿ ಸಭೆಗಳನ್ನು ನಡೆಸಲಾಯಿತು.

ತಮಿಳುನಾಡು

ಚೆನ್ನೈ ವರದಿ: ಜನವರಿ 26 ರಿಂದ 31 ರವರೆಗೆ ಬೆಲೆಯೇರಿಕೆ ವಿರೋಧಿ ಪ್ರಚಾರಾಂದೋಲನವನ್ನು ನಡೆಸಲಾಯಿತು. ಫೆಬ್ರವರಿ ಒಂದರಂದು ರಾಜ್ಯದೆಲ್ಲೆಡೆ ಧರಣಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕರ್ತರ ನೂರಾರು ತಂಡಗಳು ರಾಜ್ಯಾದ್ಯಂತ ಪ್ರಚಾರ ಪ್ರಕ್ಷೋಭೆ ನಡೆಸಿ ಕೇಂದ್ರ ದ ಸಂಯುಕ್ತ ರಂಗ ಸರಕಾರ ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿಗಳ ಅಪಾಯವನ್ನು ಜನತೆಗೆ ವಿವರಿಸಿದವು. ಅದೇ ಹೊತ್ತಿಗೆ ಅನುಸರಿಸಬೇಕಾದ ಪರ್ಯಾಯ ನೀತಿಗಳೇನೆಂಬುದನ್ನು ಮುಂದಿಟ್ಟವು.

ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿದೆ. ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜಾಗಗಳಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಎಲ್ಲಾ ಸದಸ್ಯರು ಬೇರೆ ಬೇರೆ ಜಿಲ್ಲೆಗಳಲ್ಲಿ ಧರಣಿ ನಿರತರನ್ನುದ್ದೇಶಿಸಿ ಮಾತನಾಡಿದರು. ಫೆಬ್ರವರಿ ಒಂದರಂದು ಚೆನ್ನೈ(ಮದ್ರಾಸ್)ನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪಾಲಿಟ್ ಬ್ಯೂರೋ ಸದಸ್ಯ ಆರ್.ಉಮಾನಾಥ್ ಭಾಷಣ ಮಾಡಿದರು.

ಪುದುಕೊಟ್ಟೈ ಕ್ಷೇತ್ರದಲ್ಲಿ ಉಪಚುನಾವಣೆ ಇದ್ದರೂ ಅದರ ನಡುವೆಯೂ ಪಕ್ಷದ ರಾಜ್ಯ ಸಮಿತಿ ಬೆಲೆಯೇರಿಕೆ ವಿರೋಧಿ ಆಂದೋಲನವನ್ನು ನಡೆಸಿತು.

ಪಶ್ಚಿಮ ಬಂಗಾಳ

ಕಲ್ಕತ್ತ : ಪಕ್ಷದ ಕರೆಗೆ ಸ್ಪಂದಿಸಿದ ಡಿವೈಎಫ್ಐ ಪಶ್ಚಿಮ ಬಂಗಾಳ ರಾಜ್ಯ ಘಟಕ ಫೆಬ್ರವರಿ ಒಂದರಂದು ಬೆಲೆಯೇರಿಕೆ ವಿರೋಧಿ ಆಂದೋಲನವನ್ನು ಆರಂಭಿಸಿತು. ರಾಜ್ಯದ ನಗರ ಮತ್ತು ಗ್ರಾಮಾಂತರ ಪ್ರದೇಶ ಗಳ ಪ್ರತಿಯೊಂದು ಭಾಗದಲ್ಲಿಯೂ ಯುವ ಜನರು ಮೆರವಣಿಗೆ ಹಾಗೂ ಜಾಥಾಗಳಲ್ಲಿ ತೆರಳಿ ಬೆಲೆಯೇರಿಕೆ ವಿರುದ್ಧ ಜನಜಾಗೃತಿ ಮೂಡಿಸಿದರು.

ಫೆಬ್ರವರಿ 2 ರಂದು ಎಡರಂಗದ ಎಲ್ಲಾ ಅಂಗಪಕ್ಷಗಳು ಬೀದಿಬದಿಯ ಸಭೆಗಳನ್ನು ನಡೆಸಿದವು. ಗಗನಕ್ಕೇರುತ್ತಿರುವ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಲು ಸಂಯುಕ್ತ ರಂಗ ಸರಕಾರ ಹೇಗೆ ವಿಫಲವಾಗಿದೆ ಎಂಬುದನ್ನು ಅವುಗಳ ನಾಯಕರು ಜನರಿಗೆ ವಿವರಿಸಿದರು.

ಎಡರಂಗ ಕಲ್ಕತ್ತ ಜಿಲ್ಲಾ ಸಮಿತಿ ಕಲ್ಕತ್ತ ಮತ್ತು ಅದರ ಸುತ್ತಮುತ್ತ ಪ್ರದೇಶಗಳಲ್ಲಿ 200 ಕ್ಕೂ ಹೆಚ್ಚು ಸಭೆಗಳು ಮತ್ತು ರ್‍ಯಾಲಿಗಳನ್ನು ನಡೆಸಿತು. ಬೆಲೆಗಳನ್ನು ನಿಯಂತ್ರಿಸಿ ಹಾಗೂ ಪರಿಸರ ವ್ಯವಸ್ಥೆಯನ್ನು ಸರಿಪಡಿಸಿ ಎಂದು ಒತ್ತಾಯಿಸಿತು.

ಬೆಲೆಯೇರಿಕೆ ವಿರೋಧಿ ಆಂದೋಲನದ ಮೊದಲ ಹಂತದ ಕೊನೆಯ ದಿನ ಕಲ್ಕತ್ತದ ಎರಡು ಮೂಲೆಗಳಿಂದ ಹೊರಟ ಬೃಹತ್ ಮೆರವಣಿಗೆಗಳು ಜನತೆಯ ಆಕ್ರೋಶವನ್ನು ಪ್ರತಿಬಿಂಬಿಸುವ ಜನಸಾಗರದಂತಿದ್ದವು. ಎಲ್ಲಾ ಉಪ ವಿಭಾಗೀಯ ಪಟ್ಟಣಗಳಲ್ಲೂ ಈ ದಿನ ಮೆರವಣಿಗೆಗಳನ್ನು ನಡೆಸಲಾಯಿತು.

ಒರಿಸ್ಸಾ ಪಂಚಾಯತಿ ಸದಸ್ಯರ ಮೇಲೆ ಕಾಂಗ್ರೆಸ್ ಹಲ್ಲೆ

ಒರಿಸ್ಸಾದ ಗಂಜಾಮ್ ಪಂಚಾಯತಿ ಸಮಿತಿಯ ಸಿಪಿಐ(ಎಂ) ಸದಸ್ಯರ ಮೇಲೆ ಕಾಂಗ್ರೆಸ್ ಗೂಂಡಾಗಳು ಫೆಬ್ರವರಿ 11 ರಂದು ಹಲ್ಲೆ ನಡೆಸಿದರು. ಸಮಿತಿಯ ಅಧ್ಯಕ್ಷರ ಚುನಾವಣೆಯಲ್ಲಿ ಮತದಾನ ಮಾಡುವುದನ್ನು ತಡೆಯುವುದು ಈ ಆಕ್ರಮಣದ ಉದ್ದೇಶವಾಗಿತ್ತು. ಮೂರು ಹಂತದ ಪಂಚಾಯತಿ ಚುನಾ ವಣೆಗಳ ಅಂಗವಾಗಿ ಪಂಚಾಯತಿ ಸಮಿತಿಗಳ ಅಧ್ಯಕ್ಷರ ಚುನಾವಣೆ ಫೆಬ್ರವರಿ 11ರಂದು ನಡೆಯಿತು.

ಗಂಜಾಮ್ ಜಿಲ್ಲೆಯ ಗಂಜಾಮ್ ಬ್ಲಾಕ್‌ನಲ್ಲಿ ಪಂಚಾಯಿತಿ ಸಮಿತಿಯ ಏಳು ಸದಸ್ಯರು ನಾಮಪತ್ರ ಸಲ್ಲಿಸಲು ಬ್ಲಾಕ್ ಕಛೇರಿಗೆ ಹೋಗದಂತೆ ಹಾಗೂ ಮತದಾನದಲ್ಲಿ ಪಾಲ್ಗೊಳ್ಳದಂತೆ ಶಸ್ತ್ರಾಸ್ತ್ರ ಸಮೇತರಾಗಿ ಕಾಂಗ್ರೆಸ್ ಗೂಂಡಾಗಳು ತಡೆದರು. ಪಂಚಾಯತಿ ಸಮಿತಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಕಾಂಗ್ರೆಸ್ ಅಭ್ಯರ್ಥಿಯ ಸೋದರ, ಕುಖ್ಯಾತ ಕ್ರಿಮಿನಲ್ ಗಣೇಶರೆಡ್ಡಿ ಈ ದುಷ್ಕರ್ಮಿಗಳ ನೇತೃತ್ವ ವಹಿಸಿದ್ದರು. ಈ ಗುಂಪು ಬಸಂತ ನಾಯಕ ಮತ್ತು ಸುಧೀರ ಬಿಸ್ವಾಲ್ ಎಂಬ ಇಬ್ಬರು ಪಂ.ಸ. ಸದಸ್ಯರನ್ನು ಅಪಹರಿಸಿತು. ಬಸಂತ ನಾಯಕರನ್ನು ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಎಂದು ಸಿಪಿಐ(ಎಂ) ಸೂಚಿಸಿತ್ತು. ಮಹಿಳಾ ಸದಸ್ಯರ ಸಹಿತ ಸಮಿತಿಯ ಇತರ ಸದಸ್ಯರ ಮೇಲೆ ಕೂಡ ಹಲ್ಲೆ ನಡೆಸಲಾಯಿತು.

ಕೈಕಣ್ಣುನಾಶ

ರಾಜ್ಯದಲ್ಲಿ ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷದವರ ಈ ಗೂಂಡಾಗಿರಿಯಿಂದಾಗಿ ಸಿಪಿಐ (ಎಂ) ನಾಯಕ ಬನ್ನಿಧರ ಗುಡಾ ಅವರ ಬಲಗೈ ಮತ್ತು ಆ ಪ್ರದೇಶದಲ್ಲಿ ಹಾದುಹೋಗುತ್ತಿದ್ದ ಶಿಕ್ಷಕ ರಾಮಚಂದ್ರ ನಾಯಕ ಎಂಬುವವರ ಒಂದು ಕಣ್ಣುನಾಶವಾಗಿದೆ.

ಅವಿರೋಧ ಆಯ್ಕೆಯಂತೆ!

ತನ್ನ ಅಭ್ಯರ್ಥಿಯ 'ಅವಿರೋಧವಾಗಿ ಆಯ್ಕೆ ಆಗಿದೆ' ಎಂದು ಕಾಂಗ್ರೆಸ್ ಈಗ ಹೇಳಿಕೊಳ್ಳುತ್ತಾರೆ. ಆದರೆ ಇದೆಂಥ ಆಯ್ಕೆ, ಇದೆಂಥ ಪ್ರಜಾಪ್ರಭುತ್ವ?

13 ಸದಸ್ಯರ ಪಂಚಾಯಿತಿ ಸಮಿತಿಯಲ್ಲಿ ಕೇವಲ ಐದು ಸದಸ್ಯರ ಬಲ ಹೊಂದಿದ ತನಗೆ ಅಧ್ಯಕ್ಷ ಸ್ಥಾನ ದಕ್ಕುವುದಿಲ್ಲ ಎಂದು ಖಾತರಿಯಾದ ಕಾಂಗ್ರೆಸ್ ಇಂಥ ಹೀನ ಕೃತ್ಯಕ್ಕೆ ಇಳಿದಿತ್ತು. ಸಿಪಿಐ(ಎಂ) ಸೂಚಿಸಿದ್ದ ಅಭ್ಯರ್ಥಿಗೆ ಎಂಟು ಸದಸ್ಯರು ಬೆಂಬಲ ಸೂಚಿಸಿದ್ದರು. ಸಿಪಿಐ(ಎಂ) ಅಭ್ಯರ್ಥಿ ಅಧ್ಯಕ್ಷರಾಗಿ ಆಯ್ಕೆ ಯಾಗುವುದು ಖಚಿತವಾಗಿತ್ತು. ಆದರೆ ವಾಮ ಮಾರ್ಗದಿಂದ ಅದನ್ನು ತಡೆಯಲಾಗಿದೆ. ಸಿಪಿಐ(ಎಂ) ಒರಿಸ್ಸಾ ಕಾರ್ಯದರ್ಶಿ ಮಂಡಳಿ ಈ ಕೃತ್ಯವನ್ನು ಕಟುವಾಗಿ ಖಂಡಿಸಿದೆ. ಗಂಜಾಮ್ ಪಂಚಾಯತಿ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಹೊಸದಾಗಿ ಚುನಾವಣೆ ನಡೆಸುವಂತೆ ಆಗ್ರಹಿಸಿದೆ.

ಪುನಶ್ಚೇತನ ನೀಡಿ ವಿಸ್ತರಣೆಗೆ ಹುಮ್ಮಸ್ಸು ಹಟ್ಟಿಸಿದ ರೈತಸಂಘದ ರಾಯಚೂರು ಜಿಲ್ಲಾ ಸಮ್ಮೇಳನ

"ಊಳುವವನಿಗೆ ಭೂಮಿ ಎಂಬ ಬೇಡಿಕೆಯನ್ನಾಧರಿಸಿ ಪ್ರಪ್ರಥಮ ಹೋರಾಟಕ್ಕೆ ಇಳಿದದ್ದು ಕರ್ನಾಟಕದಲ್ಲಿ ಪ್ರಾಂತ ರೈತ ಸಂಘ" ಇದು ಸಂಘದ ಪ್ರಧಾನ ಕಾರ್ಯದರ್ಶಿ ನೆನಪಿಸಿದ ಮಾತು.

ಹಿರಿಯ ಸಂಗಾತಿ ಆರ್.ಕೆ. ದೇಸಾಯಿಯವರ ಧ್ವಜರೋಹಣದೊಂದಿಗೆ ಆರಂಭವಾದ ಸಮ್ಮೇಳನಕ್ಕೆ ಮಲ್ಲಯ್ಯ ಜಾಲಹಳ್ಳಿ ಸ್ವಾಗತಿಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದು ಆರ್.ಕೆ. ದೇಸಾಯಿ.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದಿಂದ ಎ.ಕರಿಯಪ್ಪ ಮತ್ತು ಸಿಪಿಐ (ಎಂ) ಜಿಲ್ಲಾಕಾರ್ಯದರ್ಶಿ ಬಿ.ಲಿಂಗಪ್ಪ ಶುಭಕೋರಿದರು.

ಮಲ್ಲಯ್ಯ ಜಾಲಹಳ್ಳಿ ಮಂಡಿಸಿದ ಕರಡು ವರದಿಯ ಮೇಲೆ 76 ಪ್ರತಿನಿಧಿಗಳಲ್ಲಿ 18 ಪ್ರತಿನಿಧಿಗಳು ಮಾತನಾಡಿದರು. ಮಾತನಾಡಿದ ಸಂಗಾತಿಗಳಲ್ಲಿ ಕೇವಲ ಇಬ್ಬರನ್ನು ಹೊರತು ಪಡಿಸಿದರೆ ಉಳಿದವರೆಲ್ಲಾ 4 ನೇ ಸಮ್ಮೇಳನಾನಂತರದಲ್ಲಿ ಚಳುವಳಿಯಲ್ಲಿ ಬಂದವರು.

ಭೂಮಿ, ವಸತಿ, ಹಸಿರುಕಾರ್ಡ್, ನೀರಾವರಿ , ವಿದ್ಯುತ್‌ಚ್ಛಕ್ತಿ, ಮಾರುಕಟ್ಟೆ, ಕಳಪೆ ಬೀಜ, ಕ್ರಿಮಿನಾಶಕ, ಸಹಕಾರ ಚಳುವಳಿ ಕೃಷಿ ಸೌಕರ್ಯಗಳು, ಪ್ರತ್ಯೇಕತಾವಾದ - ಕೋಮುವಾದಗಳ ವಿರುದ್ಧ 60 ನೇ ವಾರ್ಷಿಕೋತ್ಸವ ಪರ್ಯಾಯ ಕೃಷಿ ನೀತಿ ಪ್ರಚಾರ ಮತ್ತು ಭ್ರಷ್ಟಾಚಾರ ವಿರೋಧಿಸಿ ಹಾಗೂ ಸಂಘಟನಾ ದೌರ್ಬಲ್ಯಗಳ ನಿವಾರಣೆಗೆ ಸಂಬಂಧಿಸಿ ಒಟ್ಟು 21 ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು.

ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಸಿ. ಎಸ್.ಬಾಳೆಯವರು ಸಮ್ಮೇಳನಾಂತ್ಯದವರೆಗಿದ್ದು ಮಾರ್ಗದರ್ಶನ ಮಾಡಿದರು. ಬಸವನ ಗೌಡ, ಪರಿಚಯ ಪತ್ರ ಮಂಡಿಸಿದರು. ಕೊನೆಯಲ್ಲಿ ವೈ.ರಾಮಣ್ಣ ವಂದಿಸಿದರು.

ಸಮ್ಮೇಳನವು ನೂತನ ಜಿಲ್ಲಾ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆಮಾಡಿತು.

ಅಧ್ಯಕ್ಷರು: ಆರ್.ಕೆ.ದೇಸಾಯಿ, ಕಾರ್ಯದರ್ಶಿ: ಮಲ್ಲಯ್ಯ ಜಾಲಹಳ್ಳಿ, ಹಣ ಕಾಸು ಕಾರ್ಯದರ್ಶಿ: ವೈ.ರಾಮಣ್ಣ, ಉಪಾಧ್ಯಕ್ಷರು: ಎಸ್.ತಿಪ್ಪಣ್ಣ, ಸಹಕಾರ್ಯದರ್ಶಿ: ಹನುಮಂತಪ್ಪ ತೆಲಾರಿ

ಜಿಲ್ಲಾ ಸಮಿತಿ ಸದಸ್ಯರಾಗಿ ಡಿ.ವೀರನಗೌಡ, ಜಿ.ಮಲ್ಲಿಕಾರ್ಜುನ, ಎಚ್.ಎಂ. ನಾಯಕ, ಎಸ್.ಸಬ್ಬರಾವ್ ಪಂಪನಗೌಡ, ಎಂ.ಶ್ಯಾಂಸುಂದರ್, ಬಿ.ಮುದ್ದಪ್ಪ, ಬಸವನಗೌಡ, ಎಚ್.ಎಲ್ಲಪ್ಪ. ಅವರು ಆಯ್ಕೆಯಾದರು.

ಗ್ರೀಸನ್ನು ಅಲುಗಾಡಿಸುತ್ತಿರುವ ಪ್ರತಿಭಟನಾ ಪ್ರದರ್ಶನಗಳು

1997 ರ ಜನವರಿ ತಿಂಗಳಲ್ಲಿ ಗ್ರೀಸ್ ದೇಶ ಹಲವಾರು ಪ್ರತಿಭಟನೆಗಳನ್ನು ಕಂಡಿತು. ಜನವರಿ 24 ರಂದು ಗ್ರೀಸ್ ಕಾರ್ಮಿಕರ ಒಕ್ಕೂಟ GSEE ನೇತೃತ್ವದಲ್ಲಿ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಯಿತು. ಇದಕ್ಕೆ ಮೊದಲು ನಾವಿಕರು, ಅಧ್ಯಾಪಕರು, ಸಾರ್ವಜನಿಕ ನೌಕರರು, ಕಟ್ಟಡ ಮತ್ತು ಸಾರಿಗೆ ನೌಕರರು, ನಿವೃತ್ತಿ ವೇತನದಾರರು ಮತ್ತು ರೈತರು ಬೀದಿಗಿಳಿದಿದ್ದರು.

"ಇದು ಸರಕಾರದ ಮತ್ತು ಯುರೋಪಿಯನ್ ಸಂಘದ ಆರ್ಥಿಕ ನೀತಿಗಳ ಬಗ್ಗೆ ಜನಗಳಿಗಿರುವ ಭ್ರಮನಿರಸನದ ಪ್ರತಿಫಲನ" ಈ ಬಗ್ಗೆ ವರದಿ ಮಾಡುತ್ತಾ ಗ್ರೀಸ್ ಕಮ್ಯುನಿಸ್ಟ್ ಪಕ್ಷ ಹೇಳಿದೆ. ಕಾರ್ಮಿಕರು ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಈ ಪ್ರದರ್ಶನಗಳಲ್ಲಿ ಹೆಚ್ಚೆಚ್ಚಾಗಿ ಭಾಗವಹಿಸುತ್ತಿದ್ದಾರೆ. ಹೊಸ ರೀತಿಯ ಸೌಹಾರ್ದ ಈ ವಿವಿಧ ಜನ ವಿಭಾಗಗಳಲ್ಲಿ ಬೆಳೆಯುತ್ತಿದೆ ಎಂದು ತಿಳಿದು ಬಂದಿದೆ.

ಡಿಸೆಂಬರ್ 1996 ರಲ್ಲಿ ದೇಶವ್ಯಾಪಿ ಪ್ರತಿಭಟನೆಗಳನ್ನು ಮುಷ್ಕರಗಳನ್ನು ನಡೆಸಿದ ರೈತರು, ಜನವರಿ ಮತ್ತು ಫೆಬ್ರವರಿ ತಿಂಗಳಲ್ಲೂ ಅದನ್ನು ಮುಂದುವರಿಸುತ್ತಿದ್ದಾರೆ. ಅವರಿಗೆ ದೇಶದ ಕಾರ್ಮಿಕ ಆಂದೋಲನದ ಭಾರೀ ಸೌಹಾರ್ದ ವ್ಯಕ್ತವಾಗುತ್ತಿದೆ. ಯುರೋಪಿನ ಇತರ ವರ್ಗದ ಕಾರ್ಮಿಕರ, ರೈತರ ಸೌಹಾರ್ದತೆ ವ್ಯಕ್ತವಾಗುತ್ತಿದೆ. ಇತ್ತೀಚೆಗೆ ಕಾರ್ಮಿಕ ಸಂಘಗಳ ಮುತುವರ್ಜಿಯಿಂದ ರೈತರ ಹೋರಾಟಗಳಿಗೆ ಸೌಹಾರ್ದದ ವಿಶೇಷ ಸಮಿತಿಯೊಂದು ರಚನೆಗೊಂಡಿದೆ. ಸರಕಾರ ವಿಶೇಷ ಪೋಲೀಸ್ ಬಳಸಿ ದಮನ ಮಾಡಲು ಯತ್ನಿಸಿದರೂ, ಡಿಸೆಂಬರ್ ಪ್ರತಿಭಟನೆಗಳಲ್ಲಿ ಭಾಗವಹಿಸಿದವರ ವಿರುದ್ಧ ಹಲವಾರು ಮೊಕದ್ದಮೆಗಳನ್ನು ನಡೆಸುತ್ತಿದ್ದರೂ ಜಗ್ಗದೆ ಜನವರಿ 26 ರಂದು ಸೇರಿದ ಸೌಹಾರ್ದ ಸಮಿತಿ ಹೋರಾಟಗಳನ್ನು ತೀವ್ರಗೊಳಿಸಲು ನಿರ್ಧರಿಸಿದೆ.

ಜನವರಿ 28 ರಂದು ಮಧ್ಯ ಗ್ರೀಸ್‌ನ ಹಳ್ಳಿಗಳಲ್ಲಿ ರೈತರು ತಮ್ಮ ಟ್ರಾಕ್ಟರುಗಳನ್ನು ಚೌಕಗಳಲ್ಲಿ ತಂದು ನಿಲ್ಲಿಸಿದರು. ಅಥೆನ್ಸ್-ಸಾಲೊನಿಕ್ ರೈಲ್ವೆ ಮಾರ್ಗ, ಮತ್ತಿತರ ರಾಷ್ಟ್ರೀಯಮಾರ್ಗಗಳಲ್ಲಿ ಸಂಚಾರಕ್ಕೆ ತಡೆವೊಡ್ಡಿದರು. ಅಲ್ಲದೆ ರ್‍ಯಾಲಿಗಳು, ಸಭೆಗಳು ಮೂಲಕ ತಮ್ಮ ಹೋರಾಟದ ಕಾರಣಗಳನ್ನು ವಿವರಿಸಿದರು.

ರೈತರ ಪ್ರಮುಖ ಬೇಡಿಕೆಗಳೆಂದರೆ ಎಲ್ಲಾ ಹತ್ತಿ ಬೆಳೆಗಾರರಿಗೆ ಸರಕಾರದ ಬಜೆಟ್‌ನಿಂದ ಬೆಂಬಲ, ಯುರೋಪಿಯನ್ ಸಂಘ ಹತ್ತಿ ಮೇಲೆ ಹಾಕಿರುವ ಹತೋಟಿ ಮತ್ತಿತರ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕು. ತಕ್ಷಣ ಸಾಲದ ಇತ್ಯರ್ಥ, ಬಡ್ಡಿ ರದ್ಧತಿ, ಸಾಲದ ಪ್ರಮಾಣದ ಹಿಂದಿನ ಮಟ್ಟವನ್ನು ಮತ್ತೆ ತರುವುದು. ಉತ್ಪಾದನಾ ಖರ್ಚನ್ನು ತಗ್ಗಿಸುವ ಇತರ ಕ್ರಮಗಳು.

ಲೋಕಸಂಚಾರ



ಸ್ಟೀವನ್ ಬಿಕೊರ ಹತ್ಯೆ

ವರ್ಣದ್ವೇಷ ಆಳರಸರೇ ನಡೆಸಿದ್ದು

ಸ್ಟಿವನ್ ಬಂಟು ಬಿಕೊ ದಕ್ಷಿಣಾ ಆಫ್ರಿಕಾದ ವರ್ಣದ್ವೇಷ ವಿರೋಧಿ ಮುಖಂಡರಲ್ಲಿ ಬಹು ಮುಖ್ಯಹೆಸರು. ನೆಲ್ಸನ್ ಮಂಡೇಲಾರ ನಂತರ ಅತ್ಯಂತ ಜನಪ್ರಿಯ ಯುವ ಮುಖಂಡರಾಗಿದ್ದವರು. 1977 ರಲ್ಲಿ ಈ ಮುಖಂಡರ ಕೊಲೆಯಾಯಿತು. ಆಗ ಅವರಿಗೆ ಕೇವಲ 30 ವರ್ಷ. ಅವರ ಹತ್ಯೆಯ ಸುದ್ದಿ ಇಡೀ ದಕ್ಷಿಣಾ ಆಫ್ರಿಕಾವನ್ನು ನಡುಗಿಸಿ ಬಿಟ್ಟಿತ್ತು. ಅವರ ಕೊಲೆ ಮಾಡಿಸಿದವರು ದಕ್ಷಿಣಾ ಆಫ್ರಿಕಾದ ಬಿಳಿಯ ವರ್ಣದ್ವೇಷ ಆಳರಸರು ಎಂಬ ಬಗ್ಗೆ ಯಾವುದೇ ಅನುಮಾನವಿರಲಿಲ್ಲ. ಈಗ ಅದು ಸಾಬೀತಾಗಿದೆ . ಎಎನ್‌ಸಿ ಸರಕಾರ ನೇಮಿಸಿದ ಬಿಷಪ್ ಡೆಸ್ಮಂಡ್ ತುತು ಅಧ್ಯಕ್ಷತೆಯಲ್ಲಿ ಸತ್ಯ ಮತ್ತು ಸರಿ ಹೊಂದಾಣಿಕೆ ಆಯೋಗದ ಮುಂದೆ ಬಹಿರಂಗ ಗೊಳ್ಳುತ್ತಿರುವ ಹಲವು ಸಂಗತಿಗಳು ಈಗಲೂ ದಕ್ಷಿಣಾ ಆಫ್ರಿಕಾದ ರಾಜಕೀಯದಲ್ಲಿ ಸಕ್ರಿಯರಾಗಿರುವ ನ್ಯಾಶನಲ್ ಪಾರ್ಟಿಯ ಉನ್ನತ ಮುಖಂಡರನ್ನು ಕಟಕಟೆಗೆಳೆಯುವ ಸಂಭವವಿದೆ ಎಂದು ತಿಳಿದು ಬಂದಿದೆ.

ಸ್ಟಿವನ್ ಬಿಕೊ ಮತ್ತಿತರ 9 ಪ್ರ[illegible]ಖರಿಯ ವ್ಯಕ್ತಿಗಳನ್ನು ಚಿತ್ರಹಿಂಸೆಗೊಳಪಡಿಸಿ ಕೊಂದ ಐವರು ಪೋಲೀಸರು ಕಳೆದ ತಿಂಗಳು ಆಯೋಗದ ಎದುರು ತಮ್ಮ ತಪ್ಪನ್ನು ಒಪ್ಪಿಕೊಂಡರಲ್ಲದೆ, ತಾವು ಪೋಲೀಸರಿಂದ ಬಂದ ಆದೇಶಗಳ ಮೇರೆಗೆ ಹಾಗೆ ಮಾಡಿದ್ದಾಗಿ ಹೇಳಿದ್ದಾರೆ. ವರ್ಣದ್ವೇಷ ದಕ್ಷಿಣ ಆಫ್ರಿಕಾದ ರಕ್ಷಣಾ ಮಂತ್ರಿ ಮಾಗ್ನಸ್ ಮಾಲನ್ ಮೇಲೆ ನಾಟಲ್ ಮತ್ತಿತರ ಕಡೆ ಕೊಲೆಗಡುಕರ ಸ್ಕ್ವಾಡ್‌ಗಳನ್ನು ಸಂಘಟಿಸಿದ ಆರೋಪವಿದೆ. ಬಿಕೊ ಹತ್ಯೆಯಲ್ಲಿ ಇನ್ನೂ ಪ್ರಮುಖವಾದ ನ್ಯಾಶನಲ್ ಪಾರ್ಟಿ ರಾಜಕಾರಣಿಗಳ ಶಾಮೀಲು ಬಯಲಾಗುವ ಸಂಭವವಿದೆ.

(ಐಎನ್‌ಎನ್)

ಹಿಬ್ರೋನ್ ಒಪ್ಪಂದ ಪ್ಯಾಲೆಸ್ಟೀನಿಯರ ಸ್ವಯಮಾಡಳಿತ ಹಕ್ಕಿನ ವಿರುದ್ಧ

DFLP ಪ್ರತಿಭಟನೆ

ಜನವರಿ 15 ರಂದು ಅರಾಫತ್ ನೇತೃತ್ವದ ಪ್ಯಾಲೆಸ್ಟೀನ್ ರಾಷ್ಟ್ರೀಯ ಪ್ರಾಧಿಕಾರ ಮತ್ತು ಇಸ್ರೇಲ್ ಸರಕಾರದ ನಡುವೆ ನಡೆದ ಹಿಬ್ರೊನ್ ಒಪ್ಪಂದವನ್ನು ಪ್ಯಾಲೆಸ್ಟೀನ್ ವಿಮೋಚನಾ ಪ್ರಜಾಸತ್ತಾತ್ಮಕ ರಂಗ (DFLP) ಬಲವಾಗಿ ವಿರೋಧಿಸಿದೆ. ಇದು 'ಅನ್ಯಾಯದ್ದು ಮತ್ತು ಸರಿಯಾದ್ದಲ್ಲದ ಒಪ್ಪಂದ' ಎಂದು ಆ ಸಂಘಟನೆಯ ವಿಶೇಷ ವಿದೇಶ ಸಂಬಂಧಗಳ ಸಮಿತಿ ನೀಡಿರುವ ಹೇಳಿಕೆ ವರ್ಣಿಸಿದೆ. ಈ ಒಪ್ಪಂದದಲ್ಲಿ ಹಿಬ್ರೊಸ್‌ನಿಂದ ಇಸ್ರೇಲಿ ಪಡೆಗಳನ್ನು ಬೇರೆಡೆಗೆ ಕಳುಹಿಸಲು, ಆದರೆ ಆ ನಗರದಲ್ಲಿ ಯೆಹೂದಿ ವಾಸದ ನೆಲೆಗಳನ್ನು ಉಳಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಈ ನೆಲಸುಗಾರರ ಮುಂದುವರಿಕೆಯನ್ನು ಪ್ರತಿಭಟಿಸಲು ಹಾಗೂ ಹಿಬ್ರೋನ್‌ನ ಐಕ್ಯತೆ ಮತ್ತು ಸ್ವಂತಿಕೆಯನ್ನು ಕಾಯ್ದುಕೊಳ್ಳಲು ಅಲ್ಲಿರುವ ಪ್ಯಾಲೆಸ್ಟೀನಿಯನ್ನರಲ್ಲಿ ಸೌಹಾರ್ದ ವಿರಬೇಕೆಂದು ಅದು ಕರೆ ನೀಡಿದೆ.

DFLP ಈ ಒಪ್ಪಂದವನ್ನು ತಾನು ಏಕೆ ವಿರೋಧಿಸುತ್ತಿದೆ ಎಂಬುದಕ್ಕೆ ಈ ಕೆಳಗಿನ ಕಾರಣಗಳನ್ನು ನೀಡಿದೆ.

- ಹೀಬ್ರೋನ್‌ನಲ್ಲಿದ್ದ ಇಸ್ರೇಲಿ ಪಡೆಗಳ ವರ್ಗಾವಣೆ ಬೇರೆಡೆ ಆಗುತ್ತಿಲ್ಲ. ನಗರದೊಳಗೆ ಆಗುತ್ತಿದೆ. ಇದರಿಂದ ಇಸ್ರೇಲ್ ನಗರದ 20% ವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು, ಬೇರೆಡೆ(ಮುಖ್ಯವಾಗಿ ಅಮೆರಿಕಾ)ಗಳಿಂದ ಬಂದು ನೆಲೆಸಿರುವ 400 ಮಂದಿಗೆ ಭದ್ರತೆ ನೀಡಲು 20,000 ಪ್ಯಾಲೆಸ್ಟೀನಿಯನ್ನರ ಮೇಲೆ ಆಳ್ವಿಕೆ ನಡೆಸಲು ಈ ಒಪ್ಪಂದ ಅವಕಾಶ ನೀಡಿದೆ. ಈ 400 ರಲ್ಲಿ ಕೂಡ 150 ಮಂದಿ ಇಸ್ರೇಲಿಗಳು ಬಲವಂತದಿಂದ ಸ್ಥಾಪಿಸಿದ ಒಂದು ಯೆಹೂದಿ ಧಾರ್ಮಿಕ ಶಾಲೆಯ ವಿದ್ಯಾರ್ಥಿಗಳು.
- ಈ ಒಪ್ಪಂದ ಹಿಬ್ರೋನ್‌ನಲ್ಲಿ ಇಸ್ರೇಲಿಗಳನ್ನು ಬಲವಂತದಿಂದ ನೆಲೆಗೊಳಿಸಿರುವ ಕ್ರಮವನ್ನು ಕಾನೂನುಬದ್ಧಗೊಳಿಸುತ್ತದೆ. ಇದರಿಂದ ಆಕ್ರಮಣಕ್ಕೊಳಪಟ್ಟ ಇತರ ಪ್ಯಾಲೆಸ್ಟೀನ್ ಪ್ರದೇಶಗಳಲ್ಲೂ ಇಂತಹುದೇ ರಾಜಿಗೆ ಅವಕಾಶ ನೀಡಿದಂತಾಗುತ್ತದೆ.
- ಇಲ್ಲಿ ರಕ್ಷಣೆ ಬೇಕಾಗಿರುವುದು ಪ್ಯಾಲೆಸ್ಟೀನಿಯನ್ನರಿಗೆ ಇಸ್ರೇಲಿ ನೆಲಸುಗಾರರ ಸಶಸ್ತ್ರ ಪಡೆಗಳಿಂದ. ಆದರೆ ಈ ಒಪ್ಪಂದ ಈ ಪಡೆಗಳಿಗೇ ರಕ್ಷಣೆ ನೀಡಿದೆ. ಈ ಪಡೆಗಳನ್ನು ನಿಶ್ಯಸ್ತ್ರಗೊಳಿಸುವ ಅವಕಾಶ ಈ ಒಪ್ಪಂದದಲ್ಲಿ ಇಲ್ಲ.
- ಈ ಒಪ್ಪಂದ ಹೀಬ್ರೋನ್ ನಗರವನ್ನು ವಿಭಜಿಸಿ 20,000 ಪ್ಯಾಲೆಸ್ಟೀನಿಯನ್ನರು ಇಸ್ರೇಲಿ ಆಳ್ವಿಕೆಗೆ ಒಳಗಾಗುವಂತೆ ಮಾಡಿದೆ.
- ಈ ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಇದಕ್ಕೆ ಹಲವೆಡೆಗಳಿಂದ ಬಂದ ವಿರೋಧವನ್ನು ಗಣನೆಗೇ ತಗೊಳ್ಳಲಿಲ್ಲ.
- ಇದರಿಂದ ನೇಟನ್ಯಾಹು ಸರಕಾರದ ಬಲ ಹೆಚ್ಚಿ ಪ್ಯಾಲೆಸ್ಟೀನಿಯನ್ನರ ಹಾಗೂ ಇತರ ಅರಬ್ ಜನಗಳ ಬಲ ಕುಂದುತ್ತದೆ.

ಆದ್ದರಿಂದ ಎಲ್ಲಾ ಅರಬ್ ದೇಶಗಳು ಹಾಗೂ ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಈ ಒಪ್ಪಂದ ಒಪ್ಪಿಕೊಂಡ ಇಸ್ರೇಲೀ ನೆಲಸುಗಾರರ ಕ್ರಮ 4ನೇ ಜಿನೇವಾ ಸಮಾವೇಶಕ್ಕೆ ವಿರುದ್ಧವಾದುದು ಎಂದು ಒಂದು ಅಂತರಾಷ್ಟ್ರೀಯ ನಿರ್ಣಯವನ್ನು ಅಂಗೀಕರಿಸಬೇಕು ಎಂದು ಕರೆ ನೀಡಿದೆ. ಪ್ಯಾಲೆಸ್ಟೀನ್ ಪ್ರಾಧಿಕಾರ ಈಗಲೂ ಇಸ್ರೇಲಿ ಹಾಗೂ ಅಮೆರಿಕನ್ ಒತ್ತಡಕ್ಕೆ ಒಳಗಾಗಿದೆ ಎಂದಿರುವ DFLP ಸ್ವತಂತ್ರ ಪ್ಯಾಲೆಸ್ಟೀನ್ ಪ್ರಭುತ್ವವನ್ನು ಸ್ಥಾಪಿಸಿ ಸ್ವಯಮಾಡಳಿತದ ಹಕ್ಕು ಪಡೆಯಲು ಒಪ್ಪಂದವನ್ನು ವಿರೋಧಿಸಬೇಕೆಂದು ಕರೆ ನೀಡಿದೆ.

ನಾಟೋ ಬೇಕು, ಪರಮಾಣು ಶಸ್ತ್ರಾಸ್ತ್ರಗಳೂ ಬೇಕು!

ಎರಡನೇ ಮಹಾಯುದ್ಧದ ನಂತರ ಜಗತ್ತಿನಲ್ಲಿ ಕಂಡ ಶೀಥಲ ಸಮರಕ್ಕೆ ಸಮಾಜವಾದಿ ಬಣ ಕಾರಣವಲ್ಲ, ಸಾಮ್ರಾಜ್ಯ ಶಾಹಿಗಳ ಪ್ರಾಬಲ್ಯದ ಮಹಾತ್ವಾಕಾಂಕ್ಷೆಯೇ ಕಾರಣ ಎಂದು ಈಗ ಹೆಚ್ಚೆಚ್ಚು ಜನರ ಅರಿವಿಗೆ ಬಂದಿದೆ. ಸೋವಿಯತ್ ಒಕ್ಕೂಟದ 'ಬೆದರಿಕೆ' ಪಡೆಯದೆಂದು ಹೇಳಿಕೊಳ್ಳಲಾಗುತ್ತಿದ್ದ ನಾಟೋ ಮಿಲಿಟರಿ ಕೂಟವನ್ನು ಸೋವಿಯತ್ ಒಕ್ಕೂಟದ ವಿಘಟನೆಯ ನಂತರದಲ್ಲಿ ಮುಂದುವರಿಸಿ ವಿಸ್ತರಿಸುವ ಯೋಜನೆಯ ಬಗ್ಗೆ ಹಿಂದೆಯೇ ಇನ್ನೊಂದು ಸುದ್ದಿ ಬಂದಿದೆ. ಅಮೆರಿಕಾಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಪರಮಾಣು ಶಸ್ತ್ರಾಸ್ತ್ರಗಳು ಈಗಲೂ ಬೇಕಾಗಿದೆ. ಆದ್ದರಿಂದ ಪರಮಾಣು ಶಸ್ತ್ರಾಸ್ತ್ರಗಳ ನಿಷೇಧಕ್ಕೆ ಅಮೆರಿಕಾ ಒಪ್ಪಲು ಸಾಧ್ಯವಿಲ್ಲ ಎಂದು ಆ ದೇಶದ ರಕ್ಷಣಾ ನೀತಿ ಇಲಾಖೆಯ ಉಪ ಕಾರ್ಯದರ್ಶಿ ವಾಲ್ಟರ್ ಸ್ಲೋಕೋಲಾನ್ ಸೆನೆಟ್ ಸಮಿತಿಗೆ ಹೇಳಿದ್ದಾರಂತೆ.

ವಿಶ್ವಾದ್ಯಂತ ಸುಮಾರು 60 ನಿವೃತ್ತ ಸೇನಾಧಿಕಾರಿಗಳು ಇತ್ತೀಚೆಗೆ ಎಲ್ಲಾ ಪರಮಾಣು ಶಸ್ತ್ರಾಸ್ತ್ರಗಳನ್ನು ನಾಶ ಮಾಡಬೇಕೆಂದು ಕರೆ ನೀಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ರಶ್ಯಾ ಮತ್ತಿತರ ಪರಮಾಣು ಶಸ್ತ್ರಗಳನ್ನು ಹೊಂದಬಹುದಾದ ದೇಶಗಳಿಂದ ಅಮೆರಿಕಾವನ್ನು ರಕ್ಷಿಸಲು ಅಮೆರಿಕಾಕ್ಕೆ ಈ ಪರಮಾಣು ಅಸ್ತ್ರಗಳು ಬೇಕೇ ಬೇಕಂತೆ! ನಿಜವಾಗಿ ಅಮೆರಿಕಾ ತನ್ನನ್ನು ರಕ್ಷಿಸಲಲ್ಲ. ಅಮೆರಿಕಾ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಉಳಿಸಿ ಬೆಳೆಸಿಕೊಳ್ಳಲು ಎಂಬುದು ಸ್ಪಷ್ಟ.

"ಹಾನಗಲ್ ಕೃಷಿ ಕೂಲಿಕಾರರಿಗೆ ನ್ಯಾಯ ಬೇಕೇ ಬೇಕು"

ಸುನೀತ್ ಛೋಪ್ರಾ ಆಗ್ರಹ

ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಸಾವಿರಾರು ಬಡ ಕೃಷಿ ಕೂಲಿಕಾರರು ಅಕ್ಟೋಬರ್ 96 ರಲ್ಲಿ 20 ದಿನಗಳ ದೀರ್ಘ ಕಾಲ ಭೂ ಹೋರಾಟ ನಡೆಸಿದ್ದು, 500 ಕ್ಕೂ ಹೆಚ್ಚು ಜನರು 15-20 ದಿನಗಳ ಕಾಲ ಜೈಲಿಗೆ ಸೇರಿಸಲ್ಪಟ್ಟು, 900 ಕ್ಕೂ ಹೆಚ್ಚು ನಿರಾಧಾರವಾದ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ಪೋಲೀಸರಿಂದ ಹಾಗೂ ಅರಣ್ಯ ಅಧಿಕಾರಿಗಳಿಂದ ನಿರಂತರ ಕಿರುಕುಳವನ್ನು ಅನುಭವಿಸುತ್ತಿದ್ದಾರೆ. ಅವರ ಮೇಲಿನ ಸುಳ್ಳು ಆಪಾದನೆಗಳನ್ನು ರದ್ದುಗೊಳಿಸಿ, ಅವರಿಗೆ ಸರಕಾರದ ಭೂಮಿಯನ್ನು ವ್ಯವಸಾಯಕ್ಕಾಗಿ ಹಂಚಿಕೊಟ್ಟು, ಅವರು ಕೆಲಸಕ್ಕಾಗಿ ವಲಸೆ ಹೋಗುವುದನ್ನು ತಪ್ಪಿಸಲು ಸರಕಾರವನ್ನು ಒತ್ತಾಯಿಸಿ ಹೋರಾಟ ಮುಂದುವರಿಸಲು ಸಿದ್ಧತೆಗಳು ನಡೆಯುತ್ತಿವೆ. ಈ ಬಡ ಕೃಷಿ ಕೂಲಿಕಾರರಲ್ಲಿ ಬಹುಪಾಲು ಜನರು ಲಂಬಾಣಿ ಪಂಗಡದವರೂ ಸೇರಿದಂತೆ ದುರ್ಬಲ ವರ್ಗಕ್ಕೆ ಸೇರಿದ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರೇ ಆಗಿದ್ದಾರೆ. ಸಾಮಾಜಿಕ ನ್ಯಾಯ ಕೊಡಿಸುವ ಪ್ರವಾದಿಗಳಂತೆ ಪ್ರಚಾರ ಮಾಡುತ್ತಿರುವ ರಾಜ್ಯ ಜನತಾದಳ ಸರಕಾರ ಬಡ ಕೃಷಿಕೂಲಿಕಾರರ ಕುರಿತು ನಿರ್ಲಕ್ಷ್ಯ ಹೊಂದಿದೆ. ಬದಲು ಕಾಫಿ ತೋಟಗಾರರಿಗೆ, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದೊಡ್ಡ ಪ್ರಮಾಣದಲ್ಲಿ ಭೂಮಿ ಕೊಡುತ್ತಿದೆ. ಅಕ್ರಮ ಹಿಡುವಳಿಯನ್ನು ಸಕ್ರಮಗೊಳಿಸುತ್ತಿದೆ. ಈ ಪ್ರದೇಶದ ಕೃಷಿಕೂಲಿಕಾರರ ಹೋರಾಟವು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಗಮನ ಸೆಳೆದಿದ್ದು, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ನ ಕೇಂದ್ರ ಸಮಿತಿಯ ಸದಸ್ಯರಾದ ಕಾ|| ಸುನೀತ್ ಛೋಪ್ರಾರವರು ಜನವರಿ ಮತ್ತು ಫೆಬ್ರವರಿ 10 ರಂದು ಕಾಂ|| ಜಿ.ಎನ್.ನಾಗರಾಜ್, ನಿತ್ಯಾನಂದ ಸ್ವಾಮಿ, ಕಾಂ|| ಫಕೀರಪ್ಪ ಹೋತನಹಳ್ಳಿ, ಕಾ|| ಹಕ್ಕಲಗೌಡ ಪಾಟೀಲ್, ಕಾಂ|| ಸಹದೇವಪ್ಪ, ಕಾಂ|| ಸಿ.ಆರ್.ಭಟ್ ಮತ್ತು ಇತರ ಕಾರ್ಯಕರ್ತರೊಂದಿಗೆ ಹಾನಗಲ್, ಬ್ಯಾಡಿಗಿ ತಾಲ್ಲೂಕುಗಳ ಹಲವು ಗ್ರಾಮಗಳಲ್ಲಿ ಹೋರಾಟ ನಿರತ ಕೃಷಿ ಕೂಲಿಕಾರರನ್ನು ಸಂದರ್ಶಿಸಿ ವಿಚಾರ ವಿನಿಮಯ ಮಾಡಿದರು. ಸಂಘ ಬಲಪಡಿಸಲು ಸಲಹೆ ಸೂಚನೆಗಳನ್ನು ನೀಡಿದರು. ಹೋರಾಟದಲ್ಲಿ ವಿಶ್ವಾಸ ಹೆಚ್ಚಿಸಿದರು. ಉತ್ತರ ಭಾರತದಲ್ಲಿನ ಭೂ ಹೋರಾಟದ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಫೆಬ್ರವರಿ 2 ರಂದು ಹುಬ್ಬಳ್ಳಿಯಲ್ಲಿ ಏರ್ಪಡಿಸಿದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿ "ರಾಜ್ಯ ಸರಕಾರದ ಗೃಹ ಮಂತ್ರಿ ನಕ್ಸಲೀಯರ ಬೆದರಿಕೆಯ ಕುರಿತು ತನಿಖೆ ಮಾಡಲು ಸಮಿತಿಗಳಿಗಾಗಿ ಅನವಶ್ಯಕವಾಗಿ ಹಣ ಖರ್ಚು ಮಾಡುತ್ತಿರುವುದು ನಾಚಿಕೆಗೇಡು! ನಿಜವಾದ ತನಿಖೆ ಆಗಬೇಕಾಗಿರುವುದು, ಹಾನಗಲ್ ತಾಲ್ಲೂಕಿನ ಜಂಗಿನಕೊಪ್ಪದ ನಿರ್ಗತಿಕ ಲಂಬಾಣಿ ತಾಂಡದ ಜನರ ಮೇಲೆ ಅರಣ್ಯ ಅಧಿಕಾರಿಗಳು ಇತ್ತೀಚೆಗೆ ಕಾನೂನು ಬಾಹಿರವಾಗಿ ಗುಂಡು ಹಾರಿಸಿ ರಾಜ್ಯ ಸರಕಾರಿ ಯಂತ್ರದ ಮೂಲಕ ಭಯೋತ್ಪಾದನೆ ಮಾಡಿದುದರ ವಿರುದ್ಧ, ಅವರ ಜೀವಕ್ಕೆ ಏಕೈಕ ಮಾರ್ಗವಾಗಿರುವ ಕಾಡಿನಿಂದ ಕಟ್ಟಿಗೆ ತಂದು ಮಾರುವುದನ್ನು ತಡೆಗಟ್ಟುತ್ತಿರುವುದರ ವಿರುದ್ಧ, ಅವರ ಮೇಲೆ ಸುಳ್ಳು ಆಪಾದನೆಗಳನ್ನು ಹೇರಿರುವುದರ ವಿರುದ್ಧ, ಅವರು ಸಾವಿರಾರು ಸಂಖ್ಯೆಯಲ್ಲಿ ವಲಸೆ ಹೋಗುವಂತೆ ಬಲತ್ಕಾರ ಮಾಡುತ್ತಿರುವುದರ ವಿರುದ್ಧ ಮತ್ತು ನೂರಾರು ಜನರು ಉಪವಾಸ ಬೀಳುವಂತೆ ಮಾಡುತ್ತಿರುವುದರ ವಿರುದ್ಧ" ಎಂದು ಹೇಳಿದರು. ನಾನು ಹಲವಾರು ಭೂ ದಾಖಲೆಗಳನ್ನು, ಭೂ ಹಿಡುವಳಿಗಳನ್ನು ನೋಡಿದ್ದೇನೆ ಅವುಗಳಲ್ಲಿ ಯಾವುದನ್ನು, ಯಾವ ಕಾರಣಕ್ಕೂ ಅರಣ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ. ಆ ಭೂ ಹಿಡುವಳಿಗಳಲ್ಲಿ ನಾಚಿಕೆಗೇಡುತನದಿಂದ ಬಡವರಿಂದ ಅಪಹರಿಸಲಾಗಿದ್ದು ತೋಟಗಾರಿಕೆ, ಗುತ್ತೇದಾರಿಕೆ, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮಾರಾಟ ಮಾಡಲು ಮೀಸಲಾಗಿದ್ದವುಗಳಾಗಿವೆ. ಇದು ದೇಶದಲ್ಲಿಯೇ ಹಿಂದೆಂದೂ ಕಂಡರಿಯದ ಅತ್ಯಂತ ದೊಡ್ಡ ಭೂ ಹಗರಣವಾಗಿದೆ! ನಾವು ಎಂದೆಂದಿಗೂ ಅದಕ್ಕೆ ಅನುಮತಿ ಕೊಡಲಾರೆವ"ಎಂದು ಅವರು ಸ್ಪಷ್ಟಪಡಿಸಿದರು.

"ಕರ್ನಾಟಕ ಸರಕಾರವು ರಾಜ್ಯದ ಅರಣ್ಯ ಇಲ್ಲದ ಎಲ್ಲಾ ವ್ಯವಸಾಯ ಯೋಗ್ಯ ಸರಕಾರೀ ಭೂಮಿಯನ್ನು ಭೂ ರಹಿತರಿಗೆ ಹಂಚುವುದಾಗಿ ಕೂಡಲೇ ಘೋಷಿಸಬೇಕೆಂದು ನಾವು ಕೇಳುತ್ತೇವೆ. ಹಾಗೆಯೇ, ಭೂರಹಿತರ ಹಾಗೂ ಅವರ ಮುಂದಾಳುಗಳ ವಿರುದ್ಧ ಹೇರಿದ ಸುಳ್ಳು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಸರಕಾರವನ್ನು ಒತ್ತಾಯಿಸುತ್ತೇವೆ. ಕೃಷಿ ಕೂಲಿಕಾರರಿಗೆ ಸಂಬಂಧಿಸಿ ವ್ಯಾಪಕವಾದ ಒಂದು ಕೇಂದ್ರ ಮಸೂದೆಯನ್ನು ಅಂಗೀಕರಿಸುವ ಕುರಿತು ರಾಜ್ಯ ಸರಕಾರ ಸಹಮತ ಹೊಂದಬೇಕೆಂದು ಕೇಳಿಕೊಳ್ಳುತ್ತೇವೆ. ವಿಶ್ವ ಸುಂದರಿ ಸ್ಪರ್ಧೆಗಾಗಿ ನಾಚಿಕೆಗೇಡಿತನದಿಂದ ಕೋಟಿ ಗಟ್ಟಲೆ ಹಣ ಸುರುವಿದ ರಾಜ್ಯ ಸರಕಾರ, ಸದ್ಯ ಕೇವಲ ರೂ. 10ರಿಂದ 15ರಷ್ಟು ದಿನಗೂಲಿ ನಡೆಯುತ್ತಿರುವ ಕೃಷಿ ಕೂಲಿಕಾರರಿಗೆ" ಕನಿಷ್ಟ ಕೂಲಿ ಜಾರಿಗೊಳಿಸಲು ನಾವು ಒತ್ತಾಯಿಸುತ್ತೇವೆ" ಎಂದು ಅವರು ಒತ್ತಾಯಿಸಿದರು.

ವಿಮಾ ನೌಕರರ ಆಂದೋಲನದ ಇಬ್ಬರು ಹಿರಿಯ ಮುಂದಾಳುಗಳಿಗೆ ಸನ್ಮಾನ


ಕರ್ನಾಟಕದಲ್ಲಿ ವಿಮಾ ನೌಕರರ ಆಂದೋಲನವನ್ನು ಕಟ್ಟಿ ಬೆಳೆಸಿದ ಹಾಗೂ ಆ ಆಂದೋಲನವನ್ನು ರಾಜ್ಯದ ಸಾರ್ವತ್ರಿಕ ಪ್ರಜಾಪ್ರಭುತ್ವವಾದಿ ಆಂದೋಲನದೊಂದಿಗೆ, ಮುಖ್ಯವಾಗಿ ದುಡಿಯುವ ಜನರ ಆಂದೋಲನದೊಂದಿಗೆ ಬೆಸೆಯುವಲ್ಲಿ ಘನ ಕಾಣಿಕೆ ನೀಡಿದ ಇಬ್ಬರು ಹಿರಿಯ ಮುಂದಾಳುಗಳು. ಎಲ್‌ಐಸಿಯಿಂದ ನಿವೃತ್ತರಾದ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಫೆಬ್ರವರಿ 1ರಂದು ಮಂಗಳೂರಿನಲ್ಲಿ ಬಿ.ಮಾಧವ ಅವರಿಗೆ ಸಾರ್ವಜನಿಕ ಸನ್ಮಾನ ನಡೆಯಿತು. ಅದೇ ದಿನ ಬೆಂಗಳೂರಿನಲ್ಲಿ ಎಂ.ಬಿ.ಶಂಕರ್ ಅವರನ್ನೂ ಸನ್ಮಾನಿಸಲಾಯಿತು.

ಬಿ.ಮಾಧವ

ಮಂಗಳೂರಿನಲ್ಲಿ ವಿಮಾ ನೌಕರರ ಸಂಘ, ಉಡುಪಿ ವಿಭಾಗ, ಎಸ್‌ಎಫ್‌ಐ ಮತ್ತು ಡಿವೈಎಫ್‌ಐಗಳ ಜಂಟಿ ಆಶ್ರಯದಲ್ಲಿ ಮಂಗಳೂರಿನ ಎನ್‌ಜಿಓ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಆತ್ಮೀಯ ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಜಿ.ಸುಧಾಕರರಾವ್ ವಹಿಸಿದ್ದರು.

"ನಾನು ನಂಬಿದ ಆದರ್ಶಗಳೆಲ್ಲ ನನ್ನ ಕಣ್ಣ ಮುಂದೆಯೇ ನೆರವೇರುತ್ತದೆ ಎಂಬ ಭ್ರಮೆ ನನಗಿಲ್ಲ. ಆದರೆ ಬಡ ಕುಟುಂಬದಲ್ಲಿ ಹುಟ್ಟಿಬಂದ ನನಗೆ ದುಡಿಯುವ ವರ್ಗದ ಕಷ್ಟಗಳ ಅರಿವಾಗಿರು ವುದರಿಂದ ಬಡ ಕಾರ್ಮಿಕರ, ರೈತರ ಶೋಷಿತರ ಪರವಾಗಿ ಕೆಲಸ ಮಾಡಬೇಕೆಂಬ ಕಾಳಜಿಯಿತ್ತು. ನಾವು ಒಬ್ಬೊಬ್ಬರಾಗಿ ಏನೂ ಮಾಡಲು ಸಾಧ್ಯವಿಲ್ಲ. ನಮ್ಮಿಂದಾಗುವ ಕೆಲಸವನ್ನು ನಾವು ಮಾಡುತ್ತಾ ಹೋಗಬೇಕು. ನಮಗೆ ತಿಳಿಯದೆ ಅನೇಕ ಮಂದಿ ಇಂತಹುದೇ ಕಾರ್ಯಗಳಲ್ಲಿ ತೊಡಗಿರುತ್ತಾರೆ, ಹೀಗೆ ಎಲ್ಲರೂ ಸೇರಿ ಮಾಡುವ ಕೆಲಸಗಳಿಂದ ಅಸಮಾನತೆ, ಶೋಷಣೆ ತೊಲಗುವುದು. ಮುಂದಿನ ದಿನಗಳಲ್ಲಿ ಅಸಂಘಟಿತ ಕಾರ್ಮಿಕರ ಮಧ್ಯೆ ಕೆಲಸ ಮಾಡುವುದು ನನಗೆ ಪ್ರಿಯವಾದ ಸಂಗತಿ" ಎಂದು ಬಿ.ಮಾಧವ ಅವರು ಹೇಳಿದರು.

ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎ.ಎಸ್.ಆಚಾರ್‌ರವರು ಮಾತನಾಡಿ, ಬಿ.ಮಾಧವರು ವಿಮಾ ನೌಕರರ ಮುಂದಾಳುಮಾತ್ರವಾಗಿರದೆ, ಜಿಲ್ಲೆಯ ಇಡೀ ಕಾರ್ಮಿಕ ಚಳುವಳಿಯ ನೇತಾರರಾಗಿದ್ದಾರೆ. ಕಳೆದ ಮೂವತ್ತೈದು ವರ್ಷಗಳಿಂದ ಕಾರ್ಮಿಕ ಚಳುವಳಿಗೆ ಮಹತ್ತರ ಕಾಣಿಕೆ ನೀಡಿದ ಮಾಧವರು ಮುಂದೆ ಬರುವ ದಿನಗಳಲ್ಲಿ ಜಿಲ್ಲೆಯ ಕಾರ್ಮಿಕ ಚಳುವಳಿಗೆ ಮಹತ್ತರವಾದ ಕೊಡುಗೆಯನ್ನು ನೀಡಲಿ ಎಂದು ಹಾರೈಸಿದರು.



ಉಡುಪಿಯ ಹಿರಿಯ ನ್ಯಾಯವಾದಿ ಶಿರಾರ್ಡಿ ವಿಲಿಯಂ ಪಿಂಟೋರವರು ಮಾತನಾಡಿ, ಭೂಸುಧಾರಣಾ ಕಾಯ್ದೆ ಜಾರಿಗೆ ಬಂದಾಗ ಭೂ ಮಾಲೀಕರುಗಳ ಎದುರಾಗಿ ತಾನು ನಡೆಸಿದ ಹೋರಾಟಕ್ಕೆ ಮಾಧವರು ನೀಡಿದ ಬೆಂಬಲವನ್ನು ನೆನಪಿಸಿದರು.

ಮಂಗಳೂರು ನಗರದಲ್ಲಿ ಮಧ್ಯಮವರ್ಗದ ಸಂಘಟನೆಗಳು ಬೆಳೆಯುವಲ್ಲಿ ಮಾಧವರು ವಹಿಸಿದ ಪಾತ್ರವನ್ನು ಬ್ಯಾಂಕ್ ನೌಕರರ ಫೆಡರೇಷನ್(ಬಿಇಎಫ್‌ಐ)ನ ಮುಂದಾಳು ಬಿ.ಎಂ.ಮಾಧವ ಶ್ಲಾಘಿಸಿದರು.

ಸಿಐಟಿಯು ಮುಂದಾಳು ಡೇವಿಡ್ ಕರ್ಕಡ ಮಾತನಾಡಿ ಜಿಲ್ಲೆಯ ಕಾರ್ಮಿಕ ವರ್ಗದ ಪ್ರಜ್ಞೆಯನ್ನು ಹೆಚ್ಚಿಸುವಲ್ಲಿ ಮಾಧವರು ನೀಡಿದ ಕೊಡುಗೆಯನ್ನು ಸ್ಮರಿಸಿದರು.

ರೈತ ಸಂಘದ ಮುಂದಾಳು ಜನಾರ್ಧನ್ ನಾಯಕ್‌ರವರು ಜಿಲ್ಲೆಯ ರೈತ ಚಳುವಳಿಯಲ್ಲೂ ಮಾಧವರು ಮಹತ್ತರವಾದ ಪಾತ್ರವನ್ನು ವಹಿಸಿದ್ದಾರೆಂದು ಹೇಳಿದರು.

ಡಿವೈಎಫ್‌ಐನ ಮುಂದಾಳು ಯಾಧವ ಶೆಟ್ಟಿ, ಎಸ್‌ಎಫ್‌ಐ ಮುಂದಾಳು ಸುನೀಲ್ ಕುಮಾರ್‌ರವರು ವಿದ್ಯಾರ್ಥಿ- ಯುವಜನ ಚಳುವಳಿಗೆ ಮಾಧವರು ನೀಡಿದ ಮಾರ್ಗದರ್ಶನ, ಸಲಹೆಗಳನ್ನು ಸ್ಮರಿಸಿದರು.


ಜಿಲ್ಲೆಯಲ್ಲಿ ಮಹಿಳಾ ಸಂಘಟನೆಯನ್ನು ಪುನರುಜ್ಜೀವನಗೊಳಿಸಲು ಮಾಧವರ ಪರಿಶ್ರಮವನ್ನು ಜನವಾದಿ ಮಹಿಳಾ ಸಮಿತಿಯ ಮುಂದಾಳು ಎಸ್.ಸತ್ಯಾ ಸ್ಮರಿಸಿದರು.

ಈ ಸಂದರ್ಭದಲ್ಲಿ ಅಖಿಲಭಾರತ ವಿಮಾನೌಕರರ ಸಂಘ, ದಕ್ಷಿಣ ವಲಯ ವಿಮಾ ನೌಕರರ ಫೆಡರೇಷನ್, ವಿಮಾ ನೌಕರರ ಸಂಘ ಉಡುಪಿ, ಇವುಗಳ ವತಿಯಿಂದ ಶಾಲುಹೊದಿಸಿ ಕಾಣಿಕೆಯಿತ್ತು ಬಿ.ಮಾಧವರನ್ನು ಸನ್ಮಾನಿಸಲಾಯಿತು. ಜಿಐಸಿ ನೌಕರರ ಪರವಾಗಿ ಬಾಲಕೃಷ್ಣ ಅಮೀನ್ ಮಾಧವರನ್ನು ಸನ್ಮಾನಿಸಿದರು.

ಇದೇ ಸಂದರ್ಭದಲ್ಲಿ ಇನ್ನೋರ್ವ ವಿಮಾ ನೌಕರರ ಮುಂದಾಳು ಲಕ್ಷ್ಮಣ ಮೊಯಿಲಿಯವರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು.

ಪ್ರಾದೇಶಿಕ ಕಾರ್ಯದರ್ಶಿ ನಾಗೇಶ್ ಕುಮಾರ್ ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ವರದಿ: 'ನಿರಂತರ'ಮಂಗಳೂರು.



ಎಂ.ಬಿ.ಶಂಕರ್

ಬೆಂಗಳೂರಿನಲ್ಲಿ ಫೆಬ್ರವರಿ 1 ರಂದು ಬೆಂಗಳೂರು ವಿಭಾಗದ ವಿಮಾ ಕಾರ್ಪೋರೇಶನ್ ಸಂಘ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ರಾಜ್ಯದ ಇತರೆಡೆಗಳಿಂದ ಬಂದಿದ್ದ ವಿಮಾ ನೌಕರರು ಭಾಗವಹಿಸಿದ್ದರು. ಅಖಿಲ ಭಾರತ ವಿಮಾ ನೌಕರರ ಸಂಘ ತಮಗೆ ಕಲಿಸಿದ ಬದುಕಿನ ತತ್ವಜ್ಞಾನ, ಕಾಳಿ ನದಿ ಯೋಜನೆಯಲ್ಲಿ ಯಾವುದೇ ಸೌಲಭ್ಯಗಳಿಲ್ಲದೆ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು, ಧಾರವಾಡದಲ್ಲಿ ಬಡ ಹಮಾಲರನ್ನು ಸಂಘಟಿಸಲು ನೀಡಿದ ಪ್ರೇರೇಪಣೆಯನ್ನು, ಅದರಿಂದ ತನಗಾದ ಸಾರ್ಥಕ ಅನುಭವಗಳನ್ನು ನೆನಪಿಸಿಕೊಂಡ ಶಂಕರ್ ತಮಗೆ ನೀಡಿದ ಸನ್ಮಾನಕ್ಕೆ ಉತ್ತರಿಸುತ್ತಾ ಎಲ್ಲ ರೀತಿಯ ಶೋಷಣೆ, ಅನ್ಯಾಯಗಳ ವಿರುದ್ಧ ಹೋರಾಟವನ್ನು ಮುಂದುವರಿಸುವುದಾಗಿ ಹೇಳಿದರು.

ಸಂಘದ ಅಧ್ಯಕ್ಷ ಭಾಸ್ಕರ ಸೋಮಯಾಜಿಯವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಅಖಿಲ ಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಎಂ.ಸುಂದರಂ ಅವರು ಭಾಗವಹಿಸಿದ್ದರು. ವಿಮಾ ನೌಕರರ ಹೋರಾಟದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾದ ಲಾಕೌಟ್ ವಿರುದ್ಧದ ಹೋರಾಟದಲ್ಲಿ ಶಂಕರ್‌ರವರು ಧಾರವಾಡ ವಿಭಾಗದ ನೌಕರರಿಗೆ ನೀಡಿದ ನೇತೃತ್ವವನ್ನು ಅವರು ಯುವ ಸಂಗಾತಿಗಳಿಗೆ ನೆನಪಿಸಿದರು.

ದಕ್ಷಿಣ ವಲಯ ವಿಮಾನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ನಟರಾಜನ್, ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟದ ಸಹ ಕಾರ್ಯದರ್ಶಿ ವೇಣುಗೋಪಾಲ್, ಧಾರವಾಡ ವಿಭಾಗದ ವಿಮಾ ನೌಕರರ ಸಂಘದ ಅಧ್ಯಕ್ಷ ಆರ್.ಹೆಚ್. ಆಯಿ, ಮೈಸೂರು ವಿಭಾಗದ ವಿಮಾ ನೌಕರರ ಸಂಘದ ಕೆ.ಎಸ್.ನಾಗರಾಜ್ ರಾವ್, ಕರ್ನಾಟಕ ರಾಜ್ಯ ಸಾಮಾನ್ಯ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ವೆಂಕಟಕೃಷ್ಣರವರಲ್ಲದೆ ಜೀವ ವಿಮಾ ಅಧಿಕಾರಿಗಳು ಹಾಗೂ ಅಭಿವೃದ್ಧಿ ಅಧಿಕಾರಿಗಳ ಮುಖಂಡರೂ ಶಂಕರ್ ರವರ ನಾಲ್ಕು ದಶಕಗಳ ಸೇವೆಯನ್ನು ಕೊಂಡಾಡಿದರು.

ಅಣಕ — ಶರತ್‌ಚಂದ್ರ

WWW ಮತ್ತು ರಾಮನಗರ ಫೈರಿಂಗ್

ನಮ್ಮ ನಕ್ಷತ್ರಿಕನಿಗೆ ನಮ್ಮದು ದುಡಿಯುವ ಜನಗಳ ಪತ್ರಿಕೆ, ಕಾರ್ಮಿಕರ ಪತ್ರಿಕೆ, ಅವರು ಏನನ್ನಾರೆ ಅನ್ನೋದು ವರದಿಯಾಗಬೇಕು ಎಂದು ಕ್ಲಾಸು ಹಾಕಿದ್ದವು. ಅವನು ಕಷ್ಟಪಟ್ಟು ಒಂದು ಫ್ಯಾಕ್ಟರಿಯೊಳಗೆ ನುಗ್ಗಿ, ಕಾಫಿ ಸಮಯದಲ್ಲಿ ಕಾರ್ಮಿಕರ ಸಂಭಾಷಣೆ ಬಗ್ಗೆ ವರದಿ ಮಾಡಿದ್ದಾನೆ.

ಒಬ್ಬ : ಏನು ಗುರು, ಇದು WWW ಗಲಾಟೆ ವಿಧಾನಸಭೇಲಿ. WWW ಅಂದ್ರೆ ಏನು?

ಇನ್ನೊಬ್ಬ : ಏನು ಮಣಿ, ಇಷ್ಟು ಗೊತ್ತಿಲ್ವ. WWW ಅಂದ್ರೆ ನಾವು ಮಶೀನ್ ಮೇಲೆ ಮಡಗ್ತಾ ಇಲ್ವ, ಲೋಡ್ ಇಲ್ಲದಾಗ Want of Work ಬೋರ್ಡ್. ವಿಧಾನಸಭೆಯಲ್ಲಿ ಯಾಕೆ Want of Work.?

ಮಣಿ : ಇಲ್ಲ ರಾಮಣ್ಣ. WWW ಅಂದ್ರೆ ನಾನು world wrestling ಏನೋ ತೋರಿಸ್ತಾರಲ್ಲ ಕೇಬಲ್ ಚಾನಲ್‌ನಲ್ಲಿ. ಡಿಶುಂ ಡಿಶುಂ ಅದು. ಮಕ್ಕಳಿಗೆ ಒಳ್ಳೆಯದಲ್ಲ ಅಂತ ಏನೋ ಗಲಾಟೆ ಇರ್ಬೇಕು.

ಮತ್ತೊಬ್ಬ : ಏನು ಮಣಿ, ಸಖತ್ತಾಗಿ ಛೋಡ್ತಾ ಇದ್ದಿಯಾ! ನಿಮಗೆಲ್ಲಾ ಸರಿಯಾಗಿ ಪೇಪರ್ ಓದಿದ್ರೆ ಏನು ಧಾಡಿ. ಏನೋ ಅಂತೆ ಕಂತೆ ಅಂತ ಮಾತಾಡ್ತೀರಲ್ಲ. ಕಾರ್ಮಿಕರು ಅಂದ್ರೇ ಪೇಪರ್ ಓದ್ಬಾರ್ದು ಅಂತ ಏನಾದ್ರೂ ಇದ್ಯಾ?

ಮಣಿ, ರಾಮಣ್ಣ : ಅಯ್ಯಪ್ಪ ರಾಜನ್, ನೀನು ಪೇಪರ್ ಓದಿದ್ಯಲ್ಲ. ಸ್ವಲ್ಪ ಬಿಡಿಸಿ ಹೇಳು WWW ಗಲಾಟೆ ಏನು ಅಂತ.

ರಾಜನ್ : WWW ಅಂದ್ರೆ Weakness for Wine and Women ಅಂತ. ಅಂದ್ರೆ ಹೆಣ್ಣು ಮತ್ತು ಹೆಂಡದ ಹುಚ್ಚು ಅಂತ.

ಮಣಿ : ಸರಿ. ಹೆಣ್ಣು, ಹೆಂಡ ಸುದ್ದಿ ವಿಧಾನಸಭೇಲಿ ಯಾಕೆ ಬರಬೇಕು? ಗಲಾಟೆ ಯಾಕೆ ಆಗಬೇಕು?

ರಾಜನ್ : ಇರ್ರಪ್ಪ. ನಮ್ಮ ಮುಖ್ಯಮಂತ್ರಿ ಪಟೇಲರು ಯಾವುದೋ ಟಿವಿ ಚಾನೆಲ್‌ಗೆ ಇಂಟರ್‌ವ್ಯೂ ಕೊಟ್ಟಿದ್ರಂತೆ. ಅದರಲ್ಲಿ ಹೆಂಡ, ಹೆಣ್ಣು ತನ್ನ ದೌರ್ಬಲ್ಯ ಅಂತ ಹೇಳಿದ್ರಂತೆ. ಅದಕ್ಕೆ ಗಲಾಟೆ.

ರಾಮಣ್ಣ : ಪಾಪ! ಇದ್ದದ್ದನ್ನು ಇದ್ದ ಹಾಗೆ ಹೇಳಿದ್ದಾರೆ. ಇದಕ್ಕೆ ಗಲಾಟೆ ಯಾಕೆ?

ಮಣಿ : ಏನು? ಹೀಂಗೆ ಮಾಡ್ಬಹುದಾ? ಜಗತ್ತೆಲ್ಲಾ ನೋಡುವ ಟಿವಿಯಲ್ಲಿ ನಮ್ಮ ರಾಜ್ಯದ ಮರ್ಯಾದೆ ಕಳೀಬಹುದಾ?

ರಾಮಣ್ಣ : ಅವೆಲ್ಲಾ ಬೊಗಳೆ. ಈ ಕಾಂಗ್ರೆಸ್ಸಿನವರಿಗೆ ಎಲ್ಲಾ ಪೊಲಿಟಿಶಿಯನ್ಸ್ ಹೀಗೆ ಅಂತ ಜನ ಅಂದುಕೊಂಡ್ತಾರೆ ಅಂತ ಭಯ ಇರಬೇಕು. ಅಷ್ಟೇ.

ಮಣಿ : ಮುಖ್ಯಮಂತ್ರಿಗಳು ಸಭೆಗೆ ಬರಲಿಲ್ಲವಂತೆ. ಉಳಿದೆಲ್ಲಾ ಮಂತ್ರಿಗಳು ಅವರು ಹೇಳಿದ್ದರಲ್ಲಿ ಏನು ತಪ್ಪಿಲ್ಲ ಅಂತ ಬೆನ್ನು ತಟ್ಟಿದರಂತೆ!

ರಾಮಣ್ಣ : ಅವರು ಹೇಳಿದ್ದೇ ಸರಿ ಅದ್ರೆ ಸಭೆಯಿಂದ ಯಾಕೆ ತಪ್ಪಿಸಿಕೊಂತಾರೆ?

ರಾಜನ್ : ಅವರು ಸಭೆಗೆ ಬರದೆ ತಪ್ಪಿಸಿಕೊಂಡದ್ದು ಬೇರೆ ಕಾರಣಕ್ಕೆ. ರಾಮನಗರದಲ್ಲಿ ಮೊನ್ನೆ ಫಯರಿಂಗ್ ಆಯ್ತಲ್ಲ. ಅದರ ಬಗ್ಗೆ ಉತ್ತರ ಹೇಳೋದು ತಪ್ಪಿಸಿಕೊಳ್ಳಲಿಕ್ಕೆ.

ರಾಮಣ್ಣ : ಕಾರ್ಮಿಕರ ಮೇಲೆ ಫಯರಿಂಗ್ ಮಾಡಿದ್ರಲ್ಲ. ಭಾರಿ ಅನ್ಯಾಯ ಅಲ್ವ. ಅದರ ಬಗ್ಗೆ ಮಾತಾಡೋದು ಬಿಟ್ಟು ಹೆಣ್ಣು, ಹೆಂಡದ ಬಗ್ಗೆ ಮಾತಾಡ್ತಾ ಇದ್ದಾರಲ್ಲ.

ಮಣಿ : ಅದಕ್ಕೆ ರಾಮನಗರದ ಜನ ಸರಿಯಾಗೇ ಬುದ್ಧಿ ಕಲಿಸಿದ್ದಾರೆ.

ರಾಜನ್ : ಈ ಫಯರಿಂಗ್‌ನಲ್ಲಿ ದಳ, ಕಾಂಗ್ರೆಸ್ ಇಬ್ಬರದು ಕೈ ಇದೆ ಅಂತಾರೆ. ಮುಷ್ಕರವನ್ನು ಉಪಯೋಗಿಸಿಕೊಂಡ್ರು ಅಂತ.

ರಾಮಣ್ಣ : ನೀವು ಪೇಪರ್ ಓದಿ ಹೇಳಿರಬಹುದು. ನಾನು ಪೇಪರ್ ಓದದೆ ಸರಿಯಾಗೇ ಹೇಳಿದೆ. ವಿಧಾನಸಭೆಯಲ್ಲಿ ಇವರಿಗೆ Want of Work ಅದಕ್ಕೆ ಹೆಣ್ಣು, ಹೆಂಡ ಅಂತ ಮಾತಾಡ್ತಾರೆ.

ಮಣಿ : ನಾನು ಹೇಳಿದ್ದೂ ಸರಿ. World Wrestling ಅಲ್ಲ. ಒಂಥರಾ Word Wrestling ಸುಮ್ಮ ಕೆಲ್ಸ ಇಲ್ದೆ ಶಬ್ದಗಳ ಜತೆ ಗುದ್ದಾಡ್ತಾರೆ. ಜನಗಳಿಗೆ ಬೇಕಾದ್ದು ಒಂದು ಕೆಲ್ಸ ಮಾಡೋಲ್ಲ.

ರಾಜನ್ : ದಳದವರಿಗೆ ಅಧಿಕಾರದ ಹೆಂಡದ ಮದ ಏರಿದೆ. ಕಾಂಗ್ರೆಸ್ಸಿನವರಿಗೆ ಆ ಮದ ಇನ್ನೂ ಇಳಿದಿಲ್ಲ. ನಾವು ಈ ಇಬ್ಬರ ಹುಚ್ಚು, ಮದ ಇಳಿಸ್ಬೇಕು ಅಂತ ಹೊರಟ್ರೆ ಫಯರಿಂಗ್ ಮಾಡ್ತಾರೆ.

ಪಟೇಲರ "ಸೌಂದರ್ಯ" ಮತ್ತು ಬಚ್ಚನ್‌ರ "ಸದುದ್ದೇಶ"!

ಕರ್ನಾಟಕದ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ವೀರಾವೇಶದಿಂದ 'ನಡೆಸಿ'ಕೊಟ್ಟ ಅಮಿತಾಬ್ ಬಚ್ಚನ್ ಕಾರ್ಪೊರೇಶನ್‌ನ "ವಿಶ್ವ ಸುಂದರಿ ಸ್ಪರ್ಧೆ" "ಸದುದ್ದೇಶದ ಸೌಂದರ್ಯ ಸ್ಪರ್ಧೆ" ಎಂದು ಸಮರ್ಥಿಸಿಕೊಂಡಿದ್ದನ್ನು ಹಲವರು ನಂಬಿದ್ದರು. ಅದನ್ನು ನಂಬಿ ಸೌಂದರ್ಯ ಸ್ಪರ್ಧೆಯನ್ನು ವಿರೋಧಿಸಿದವರೆಲ್ಲಾ ಮೂಢಮತಿಗಳು, ಹಳಸಲು ಜೀವಿಗಳು ಎಂದ ಜರೆದದ್ದೂ ಇದೆ. ಆದರೆ ಪಟೇಲರನ್ನು, ಬಚ್ಚನ್‌ರನ್ನು ನಂಬಿ ತಾವೇ ಮೂರ್ಖರಾಗಿ ಬಿಟ್ಟದ್ದು ಈಗ ಅವರಿಗೆ ಸ್ಪಷ್ಟವಾಗುತ್ತಿದೆ. ಅಂಗವಿಕಲರನ್ನು ಮುಂದಿಟ್ಟುಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುವ ಹೊಲಸು ಕೆಲಸ ಇದು ಎಂದ ಸೌಂದರ್ಯ ಸ್ಪರ್ಧೆಯ ವಿರೋಧಿಗಳ ಮಾತು ನಿಜವಾಗುತ್ತಿದೆ.

ಏಕೆಂದರೆ ಮೂರು ವಾರದಲ್ಲಿ ಕೊಡುತ್ತೇವೆಂದ ಹಣ ಕರ್ನಾಟಕ ಸ್ಪ್ಯಾಸ್ಟಿಕ್ ಸೊಸೈಟಿ(ಅಂಗವಿಕಲ ಸೇವೆಗಾಗಿ ಇರುವ ಸಂಸ್ಥೆ)ಗೆ ಮೂರು ತಿಂಗಳಾದರೂ ಇನ್ನೂ ತಲುಪೇ ಇಲ್ಲ. 60 ಲಕ್ಷದಿಂದ 1 ಕೋಟಿ ರೂ.ವರೆಗೆ ಈ ಸಂಸ್ಥೆಗೆ ನೀಡುವುದಾಗಿ ಸಾರಿ ತಮ್ಮ ವ್ಯಾಪಾರೀ ಪ್ರಯತ್ನಕ್ಕೆ ಹಲವರ ಬೆಂಬಲ ಗಿಟ್ಟಿಸಿಕೊಂಟ ಬಚ್ಚನ್‌ನ ಕಂಪೆನಿಯ ಮುಖ್ಯಾಧಿಕಾರಿಯನ್ನು ಈ ಬಗ್ಗೆ ಕೇಳಿದರೆ ದೊರೆತ ಉತ್ತರ - 'ಕಂಪೆನಿಯ ಲೆಕ್ಕಪತ್ರದ ಆಡಿಟ್ ಆಗುತ್ತಿದೆ, ಆದ ಮೇಲೆ ಯಾವಾಗ ಎಷ್ಟು ಹಣ ನೀಡಲಾಗುವುದೆಂದು ತಿಳಿಸಲಾಗುವುದು"- ಈಗಂತೂ ಫೋನ್ ಕರೆಗಳಿಗೆ, ಪತ್ರಕ್ಕೆ ಉತ್ತರ ಕೊಡುವುದನ್ನು ಬಚ್ಚನ್ ಕಂಪೆನಿ ನಿಲ್ಲಿಸಿ ಬಿಟ್ಟಿದೆ ಎಂದು ಈ ಹಿಂದೆ ಬಚ್ಚನ್‌ರ ವ್ಯಾಪಾರೀ ಪ್ರಯತ್ನವನ್ನು ಬೆಂಬಲಿಸಿದ್ದ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ಬರೆದಿದೆ.

ಬಚ್ಚನ್ ಕಂಪನಿಯ ಈ ವಿಳಂಬದಿಂದಾಗಿ 4 ಕೋಟಿ ವೆಚ್ಚದ ಈ ಸಂಸ್ಥೆಯ ಆಸ್ಪತ್ರೆಯ ಕೆಲಸ ನಿಂತು ಹೋಗಿದೆಯಂತೆ. 'ವಿಶ್ವ ಸುಂದರಿ ಸ್ಪರ್ಧೆ'ಯ ಹಣ ಬರುತ್ತದೆ ಎಂಬ ಕಾರಣಕ್ಕಾಗಿ ಸಾಮಾನ್ಯವಾಗಿ ಈ ಸಂಸ್ಥೆಗೆ ದಾನ ನೀಡುವವರು ಈ ವರ್ಷ ಬೇರೆಯವರಿಗೆ ಕೊಟ್ಟಿರುವುದು ಈ ಸಂಸ್ಥೆಯ ಪೀಕಲಾಟವನ್ನು ಹೆಚ್ಚಿಸಿದೆಯಂತೆ. ಈ ಸಂಸ್ಥೆಯ ಪ್ರಮುಖ ಪೋಷಕರಾದ ಸಿನೇಮಾ ತಾರೆ ವಹೀದಾ ರಹಮಾನ್‌ರ ವಶೀಲಿಯಿಂದಲೂ ಕೆಲಸವಾಗುತ್ತಿಲ್ಲ, ಬಚ್ಚನ್‌ರವರು ಫೆಬ್ರವರಿ 16ರಂದು ತಮ್ಮ ಮಗಳ ಮದುವೆಯ ತಯಾರಿಯಲ್ಲಿ ಮಗ್ನರಾಗಿದ್ದಾರೆ. ನಂತರ ರಾಜೀವ್‌ಗಾಂಧಿಯುವರ ಮಗಳ ಮದುವೆಯಲ್ಲಿ ಮಗ್ನರಾಗಿರುತ್ತಾರಾದ್ದರಿಂದ ಮಾರ್ಚ್ ತಿಂಗಳ ಆರಂಭದವರೆಗೆ ಕಾಯಿರಿ ಎಂದಿದ್ದಾರಂತೆ! ಎಂತಹಾ ಸದುದ್ದೇಶ!

ಇದು ಅವರ "ಕಾಣಿಕೆ"ಯ ಸ್ಥಿತಿಯಾದರೆ ಅತ್ತ ಕರ್ನಾಟಕ ಕ್ರಿಕೆಟ್ ಅಸೋಸಿಯೇಶನ್ ತನಗೆ ಬರಬೇಕಾದ 5 ಲಕ್ಷ ರೂ.ಗಳ ಬಾಕಿಯಿನ್ನೂ ಬಂದಿಲ್ಲ ಎನ್ನುತ್ತಿದೆ. ಅಲ್ಲದೆ ಈ ವಿಶ್ವ ಸುಂದರಿ ಸ್ಪರ್ಧೆಯಿಂದಾಗಿ ಸ್ಟೇಡಿಯಂಗೆ ಆಗಿರುವ ಹಾನಿಯನ್ನು ತುಂಬಿ ಕೊಡಲು 10 ಲಕ್ಷ ರೂ. ತೆರಲು ಕೂಡಾ ಅದೀಗ ಹಿಂದೇಟು ಹಾಕುತ್ತಿದೆಯಂತೆ. ಕ್ರಿಕೆಟ್ ಸಂಸ್ಥೆ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ಯೋಚಿಸಬೇಕಾಗಿ ಬಂದಿದೆಯಂತೆ. ಎಂತಹಾ ಸುಂದರ ವ್ಯಕ್ತಿತ್ವ!

ಈ ಎಬಿಸಿಎಲ್‌ನವರು ಸಾಫ್-ಸೀದಾ ಜನ ಅಲ್ಲ ಎಂದು ಈ ಎರಡೂ ಸಂಸ್ಥೆಗಳ ಜನಕ್ಕೆ ಈಗ ಚೆನ್ನಾಗಿ ಅರಿವಾಗಿದೆಯಂತೆ.



KRNM/BGS-405 MAG (2) PRB DECR 319-79/79

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶಕ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು